| 14. | ಮಕ್ಕಳ ಹಕ್ಕುಗಳು | ಕರಪತ್ರ | 5000 | 5000 |
| 16. | ಸಮುದಾಯದತ್ತ ಶಾಲೆ | ಕರಪತ್ರ | 1000 | |
| 17. | ಮಕ್ಕಳ ಹಕ್ಕುಗಳ ಮಾಸೋತ್ಸವ | ಕರಪತ್ರ | 500 | 500 |
| 18. | ಮಕ್ಕಳ ಹಕ್ಕುಗಳ ಶೈಕ್ಷಣಿಕ ರಂಗ ಅಭಿಯಾನ | ಕರಪತ್ರ | 6000 | 4000 |
| 19. | ಶಿಕ್ಷಣ ಹಕ್ಕು ಕೋಶ (RTE CELL) | ಕರಪತ್ರ | | |
| 20. | ಅಂಕುರ -ಯೋಜನೆಯ ಪರಿಚಯ ಪರಿಕಲ್ಪನೆ | ಪುಸ್ತಕ | 210 | 201 |
| 21. | ಶಿಕ್ಷಣ ಸಂಚಲನ 2017-19 ಒಟ್ಟು 5 ಸಂಚಿಕೆಗಳು | ವರದಿ | 2500 | 2000 |
| 22. | ಶಾಲೆಗಳಲ್ಲಿ ನೀಡುವ ಮನೆಕೆಲಸದ ಕುರಿತು ಅಧ್ಯಯನ (Home Work Study Report) | ಪುಸ್ತಕ | 110 | 91 |
| 23. | ಸತ್ವ - ಎಸ್‌ಡಿಎಂಸಿ ಸದಸ್ಯರಿಗೆ ತರಬೇತಿ ಕೈಪಿಡಿ | ಪುಸ್ತಕ | 50 | 23 |
| 24. | ಕಿರಣ - ಪಂಚಾಯತ್ ಸದಸ್ಯರಿಗೆ ತರಬೇತಿ ಕೈಪಿಡಿ | ಪುಸ್ತಕ | 100 | 30 |
| 25. | ರುಜುವಾತು - 2017-20 ಯೋಜನೆಯ ಪ್ರಕ್ರಿಯಾ ವರದಿ ಮತ್ತು ಪರಿಣಾಮಗಳು | ಪುಸ್ತಕ | 100 | 50 |



ಯೋಜನೆಯ ಸಾಧನೆಯ ವೈಖರಿಯನ್ನು ತಿಳಿಯಲು ಅಭ್ಯಸಿಸಲು ಸಮಾಜ ಸೇವಾ ಸಂಸ್ಥೆಗಳಿಂದ, ಕಾನೂನು ಹಾಗೂ ಸಾಮಾನ್ಯ ವಿಶ್ವವಿದ್ಯಾಲಯಗಳು, ಶಾಲಾ ಕಾಲೇಜುಗಳು,

ರಿಸರ್ಚ್ ವಿದ್ಯಾರ್ಥಿಗಳು, ಅನೇಕರು ಬೇಟಿ ನೀಡಿ ಪರಿಕರಗಳನ್ನು ಪಡೆಯುತ್ತಿದ್ದಾರೆ. ಅದಲ್ಲದೆ ಸರಕಾರಿ ಇಲಾಖೆಗಳು, ಪಂಚಾಯತ್, ಶಾಲಾ ಎಸ್‌ಡಿಎಂಸಿಗಳು ಹಾಗೂ ಮಕ್ಕಳ ಮೂಲಕ ಒಟ್ಟು ಸಮುದಾಯದಲ್ಲಿ ವಿಶಿಷ್ಟ ನೆಲೆಯಲ್ಲಿ ಯೋಜನೆಯ ಪರಿಕಲ್ಪನೆಯು ವಿಸ್ತಾರಗೊಂಡಿದೆ.

ಯೋಜನೆಯ ಅಭಿವೃದ್ಧಿ ಕಾರ್ಯಗಳು ಪ್ರಕಟಣೆಗಳನ್ನು, ಯುಟ್ಯೂಬ್ ಚ್ಯಾನಲ್ ಹಾಗೂ ಫೇಸ್ ಬುಕ್, ಇನ್ಸ್ಟಾಗ್ರಾಮ್ ಹಾಗೂ ವೆಬ್ಸೈಟ್ ಮೂಲಕವೂ ಜನಸಮುದಾಯಕ್ಕೆ ತಲುಪುವಂತೆ ಪ್ರಯತ್ನಗಳನ್ನು ಮಾಡಲಾಗುತ್ತಿದೆ. ಈ ವರೆಗೆ ಒಟ್ಟು 2 ಲಕ್ಷ ಜನರು ಪಡಿ ಯೋಜನೆಗಳ ಅಂತರ್‌ಜಾಲ ಮೂಲವನ್ನು ಸಂಧಿಸಿರುತ್ತಾರೆ ಮತ್ತು ಯೋಜನೆಯ ಪ್ರಕಟಣೆಗಳನ್ನು ವೀಕ್ಷಿಸುತ್ತಿದ್ದಾರೆ.



## ಪಡಿ ಯೋಜನೆಯ ಮೇಲ್ವಿಚಾರಣಾ ಸಮಿತಿ – ಪಡಿ ನಿರ್ದೇಶಕ ಮಂಡಳಿ

ಪಡಿ ನಿರ್ದೇಶಕ ಮಂಡಳಿಯ ನಾಮ ನಿರ್ದೇಶಿತ ಸದಸ್ಯರು ಪಡಿ ಯೋಜನೆಯನ್ನು ಸತತ ಮೇಲ್ವಿಚಾರಣೆಯನ್ನು ಮಾಡುತ್ತಾರೆ. ಪ್ರತೀ ಮೂರು ತಿಂಗಳಿಗೊಮ್ಮೆ ಯೋಜನೆಯ ತ್ರೈಮಾಸಿಕ ಕಾರ್ಯಚಟುವಟಿಕೆಗಳನ್ನು ಯೋಜಿತ ಚೌಕಟ್ಟಿನೊಳಗೆ ನಡೆಯುತ್ತಿದೆಯೇ ಎಂದು ಪರಿಶೀಲಿಸಿ, ಮಂಡಿಸ ಲಾದ ವರದಿಗಳ ಬಗ್ಗೆ ಕೂಲಂಕುಶ ಚರ್ಚೆಗಳನ್ನು ನಡೆಸುತ್ತಾರೆ, ಅದೇ ರೀತಿಯಾಗಿ ಮುಂದಿನ ತ್ರೈಮಾಸಿಕ ಯೋಜನೆಯನ್ನು ಪರಿಶೀಲನೆ ಮಾಡಿ, ಯೋಜನೆಯನ್ನು ಸಂಬಂಧಪಟ್ಟ ಸಿಬ್ಬಂದಿಗಳೊಂದಿಗೆ ಚರ್ಚಿಸಿ, ಸಂಬಂಧಿಸಿದ ಆಯವ್ಯಯವನ್ನು ಸಮ್ಮತಿಸಲಾಗುತ್ತದೆ.



ಈ ರೀತಿಯಾಗಿ ಕ್ರಮಬದ್ಧ ಮಾರ್ಗದರ್ಶನ, ಕಾರ್ಯಯೋಜನೆಗಳ ಮರು ಪರಿಶೀಲನೆ ಮತ್ತು ಅನುಷ್ಠಾನದಲ್ಲಿ ಮುಖ್ಯ ಪಾತ್ರವನ್ನು ವಹಿಸಿ ಯೋಜನೆಯ ಯಶಸ್ಸಿಗಾಗಿ ತಮ್ಮನ್ನು ಕ್ರಿಯಾತ್ಮಕವಾಗಿ ತೊಡಗಿಸಿಕೊಂಡಿರುತ್ತಾರೆ.

## ಯೋಜನಾವಧಿಯಲ್ಲಿ ವಿವಿಧ ನೆಲೆಯಲ್ಲಿ ಸಹಕರಿಸಿದ ಸಲಹೆಗಾರರು

ಪಡಿ ಸಂಸ್ಥೆಯ ಕಾರ್ಯಕ್ರಮದ ಸಲಹೆಗಾರರಾಗಿ ಆತ್ಮ ಸಲಹಾ ಸಂಸ್ಥೆಯ ಶ್ರೀಮತಿ ಆ್ಯನಿ ಜಯರಾಜ್ ತನ್ನ ಸಂಪೂರ್ಣ ನೈಪುಣ್ಯತೆಯನ್ನು ಒದಗಿಸಿ, ನೂತನವಾಗಿ 2017–2020 ಯೋಜನೆಯನ್ನು ತಯಾರಿಸುವಲ್ಲಿ ತಾಂತ್ರಿಕ ನೆಲೆಯಲ್ಲಿ ಯೋಜನೆಗಳನ್ನು ಮಾಡುತ್ತಾ ಸಿಬ್ಬಂದಿಗಳೊಡನೆ ಸೇರಿ ಸಮುದಾಯದ ಮೂಲ ಸಮಸ್ಯೆಗಳನ್ನು ಅರಿತು ಯಾವ ನೆಲೆಯಲ್ಲಿ ಬದಲಾವಣೆಯ ಅಗತ್ಯತೆ ಇರುವುದು, ಈ ಬದಲಾವಣೆಯನ್ನು ತರುವಲ್ಲಿ ಯಾವೆಲ್ಲಾ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಬಹುದು, ಇವನ್ನು ಸಮುದಾಯದ ಹಾಗೂ ಸರಕಾರ ಇಲಾಖೆಗಳ ಪಾತ್ರ ಹಾಗೂ ಸಮಾನ ಮನಸ್ಕ ಸಂಸ್ಥೆಗಳ ಸಹಯೋಗದೊಂದಿಗೆ ಯಾವ ರೀತಿಯಲ್ಲಿ ಸಕಾರಾತ್ಮಕ ಫಲಿತಾಂಶಗಳನ್ನು ಕಂಡುಕೊಳ್ಳಬಹುದು, ಎದುರಿಸಬಹುದಾದ ನಕಾರಾತ್ಮಕ ಫಲಿತಾಂಶಗಳ ಅರಿವನ್ನೂ ಅರ್ಥೈಸಿ ತಿಳಿಸಿರುವರು. ಒಟ್ಟು ಪರಿಕಲ್ಪನೆಯನ್ನು ಹೊರತರುವ ನೆಲೆಯಲ್ಲಿ ಸಹಾಯಿಸಿದ್ದಾರೆ ಹಾಗೂ ವರ್ಷದಲ್ಲಿ ಎರಡು ಬಾರಿ ತನ್ನ ಸಂದರ್ಶನವನ್ನು ಫಲಪ್ರದವಾಗಿ ನಡೆಸಿ, ಕಾಲಕಾಲಕ್ಕೆ ಸಿಬ್ಬಂದಿಗಳಿಗೆ ಯೋಜನೆಯ ಅನುಷ್ಠಾನವು ಯೋಜಿತ ರೀತಿಯಲ್ಲಿ ಹೋಗುವಲ್ಲಿ ಸಾಕಷ್ಟು ವಿಷಯಗಳನ್ನು ಕೊಟ್ಟಿದ್ದು





ಹುರುಪಿನಿಂದ ಕಾರ್ಯ ನಿರ್ವಹಿಸವಲ್ಲಿ ಸಹಕಾರ ನೀಡಿರುತ್ತಾರೆ. ಇಷ್ಟೇ ಅಲ್ಲದೆ ಶಿಕ್ಷಣ ಸಂಪನ್ಮೂಲ ಕೇಂದ್ರಗಳ ಸಬಲೀಕರಣದಲ್ಲಿಯೂ ತಮ್ಮ ವಿಚಾರಗಳನ್ನು ಸಮಯಕ್ಕೆ ಸರಿಯಾಗಿ ಒದಗಿಸಿ ಮುನ್ನಡೆಸುವಲ್ಲಿ ಸಂಪೂರ್ಣ ಮಾಹಿತಿಗಳನ್ನು ನೀಡಿರುತ್ತಾರೆ. ಕಾರ್ಯ ಯೋಜನೆಗಳನ್ನು ವಿಶ್ಲೇಷಿಸುವುದೇ ಮಾತ್ರವಲ್ಲ ಅವುಗಳನ್ನು ಕಾಲಕಾಲಕ್ಕೆ ಮುಖ್ಯ ಸಂಸ್ಥೆಗೆ ಸಮರ್ಪಕ ವರದಿಗಳನ್ನು ನೀಡುವಲ್ಲಿ ಸಹಾಯ ಒದಗಿಸುವುದು.



ಸಂಸ್ಥೆಯ ಲೆಕ್ಕಾಚಾರ, ಆರ್ಥಿಕ ವ್ಯವಹಾರಗಳು ಆಡಳಿತದ ಕಾನೂನಾತ್ಮಕ ವ್ಯವಸ್ಥೆಗಳಿಗೆ ಪೂರಕವಾಗಿ Financial Management Services Foundation (FMSF) Noida ಇವರು ಕಾಲಕಾಲಕ್ಕೆ ಸಲಹೆಗಳನ್ನು ನೀಡುವುದೇ ಅಲ್ಲದೆ ಭೇಟಿ ಮೂಲಕ ಪರಿಶೀಲನೆ ಮತ್ತು ಮಾರ್ಗದರ್ಶನ ನೀಡುತ್ತಿದ್ದಾರೆ. ಅದೇ ರೀತಿಯಾಗಿ ಇನ್ನೋರ್ವ ಸಲಹೆಗಾರರು ಶ್ರೀ ಖಿಲೇಶ್ ಚತುರ್ವೇದಿ, ನವದೆಹಲಿ ಕಾರ್ಯ ಯೋಜನೆಯ ಅನುಷ್ಠಾನ ಸಮಯದಲ್ಲಿ ಸಿಗಬೇಕಾದ ಫಲಿತಾಂಶಗಳನ್ನು ಮತ್ತು ಪರಿಣಾಮಗಳನ್ನು ಅಳತೆ ಮಾಡುವ ಬಗ್ಗೆ ಪ್ರತೀ ಸಿಬ್ಬಂದಿಗಳಿಗೆ ತರಬೇತು ನೀಡಿರುವುದೇ ಅಲ್ಲದೆ ಇವನ್ನು ಗುರುತಿಸಿ, ಕಂಡುಹಿಡಿದು ಸರಿಯಾದ ವಿಶ್ಲೇಷಣಾ ವರದಿ ನೀಡುವಲ್ಲಿ ಪೂರಕ ಮಾಪನವನ್ನು ಉಪಯೋಗಿಸುವುದು ಅಲ್ಲದೆ ಈ ಬಗ್ಗೆ ಪ್ರತೀ ವರ್ಷವೂ ಕಾರ್ಯಾಗಾರದ ಮೂಲಕ ಸಮುದಾಯ ಹಾಗೂ ಸಿಬ್ಬಂದಿಗಳೊಡನೆ ಸಮಾಲೋಚನೆಗಳನ್ನು ಮಾಡುವುದರ ಮೂಲಕ ತಿಳಿಸಿಕೊಟ್ಟಿರುವರು.

## ಯೋಜನೆಯ ಅನುಷ್ಠಾನದಲ್ಲಿ ಸತತ ನಿರತರಾಗಿರುವ ಸಿಬ್ಬಂದಿಗಳು

ಯೋಜನೆಯ ಅನುಷ್ಠಾನದಲ್ಲಿ 2017–20ರಲ್ಲಿ ರೆನ್ನಿ ಡಿಸೋಜ, ನಿರ್ದೇಶಕರು, ಲ್ಯಾನ ಫೆರ್ನಾಂಡಿಸ್, ಕಾರ್ಯಕ್ರಮ ವ್ಯವಸ್ಥಾಪಕರು, ಕಸ್ತೂರಿ ಬೊಳುವಾರು, ತರಬೇತಿ ಸಂಯೋಜಕರು, ಚಂದ್ರಶೇಖರ್, ದಾಖಲಾತಿ ಸಂಯೋಜಕರು (2017 ಎಪ್ರಿಲ್– 2019 ಜುಲೈ)– ಜಾಯ್ಸ್ ವಾಟ್ಸನ್, ದಾಖಲಾತಿ ಸಂಯೋಜಕರು (2019 ಆಗಸ್ಟ್ ರಿಂದ), ಸ್ಟೀವನ್ ಡಿಸೋಜ, ವಕಾಲತು ಸಂಯೋಜಕರು, (2017 ಮೇ – 2019




ಫೆಬ್ರವರಿ)–ಸಮಿತ (2019 ಫೆಬ್ರವರಿಯಿಂದ), ದ.ಕ. ಜಿಲ್ಲಾ ಕಾರ್ಯಕ್ರಮ ಸಂಯೋಜಕರಾಗಿ ಜಯಂತಿ ಹರೀಶ್ (ಜನವರಿ 2020), ಡೆನ್ನಿಸ್ ಡಿಸೋಜ (ಫೆಬ್ರವರಿ 2020ರಿಂದ) ಹಾಗೂ ಉಡುಪಿ ಜಿಲ್ಲಾ ಕಾರ್ಯಕ್ರಮ ಸಂಯೋಜಕರಾಗಿ ಜ್ಯೋತಿ (2018 ಮೇ ವರೆಗೆ) ವಿವೇಕ್ (2018 ಮೇ ತಿಂಗಳಿನಿಂದ) ರವರು ತಾಲೂಕು ಕಾರ್ಯಕ್ರಮ ಸಂಯೋಜಕರುಗಳಾಗಿ ಮಮತ ರೈ–ಪುತ್ತೂರು, ರಾಜೇಶ್ವರಿ–ಬಂಟ್ವಾಳ, ಜಯಕುಮಾರಿ–ಸುಳ್ಯ, ಶೈಲ ನಾಯಕ್ (ಜೂನ್ 2018) ಅನಿತಾ (ಜುಲೈ 2018ರಿಂದ) ಕುಂದಾಪುರ, ಕಾರ್ಯಕ್ರಮ ಸಹಾಯಕಿ ಸುನೀತ, ಉಡುಪಿ ಸಹಾಯಕಿ ಸುಶ್ಮಿತ (2019 ಅಕ್ಟೋಬರ್) ಸವಿತಾ (ನವಂಬರ್ 2019) ಫರ್ನಾಜ್ (ಡಿಸೆಂಬರ್ 2019ರಿಂದ) ಹಾಗೆಯೇ ಆಡಳಿತ ಘಟಕದಲ್ಲಿ ಜಾಯ್ಸ್ ವಾಟ್ಸನ್ ಕಛೇರಿ ವ್ಯವಸ್ಥಾಪಕರು (ಜುಲೈ 2019ರವರೆಗೆ), ಮುಂದುವರೆದು ಲಲಿತಾ ಶೆಟ್ಟಿ ಕಛೇರಿ ವ್ಯವಸ್ಥಾಪಕರು, ಸುಪ್ರೀತಾ ಫೈನಾನ್ಸ್ ವ್ಯವಸ್ಥಾಪಕರು, ವಸಂತಿ ಫೈನಾನ್ಸ್ ಆಫೀಸರ್, ದೀಪಕ್ ಡ್ರೈವರ್ (ಮಾರ್ಚ್ 2019) ಮುಂದುವರೆದು ರಂಜೀತ್ (2019 ಮೇ ಯಿಂದ) ಡ್ರೈವರ್ ಒಟ್ಟು 21 ಸದಸ್ಯರ ತಂಡವು ಯೋಜನಾನುಷ್ಠಾನದಲ್ಲಿ ಭಾಗಿಯಾಗಿರುವರು.

## ಯೋಜನಾವಧಿಯಲ್ಲಿ ಬೆಳೆದು ಸಶಕ್ತರಾದ ಸಂಪನ್ಮೂಲ ವ್ಯಕ್ತಿಗಳು

2017–2020 ಯೋಜನೆಯಡಿ ಒಟ್ಟು 40 ಸಂಪನ್ಮೂಲ ವ್ಯಕ್ತಿಗಳನ್ನು ಸಶಕ್ತರನ್ನಾಗಿಸಿ, ಸಮುದಾಯದ ವಿವಿಧ ಗುಂಪುಗಳಿಗೆ ಮಗುಸ್ನೇಹಿ ಪರಿಕಲ್ಪನೆಯಡಿ ಬರುವ ಎಲ್ಲ ವಿಚಾರಗಳನ್ನು ಮಾಹಿತಿಯಾಗಿ ನೀಡುತ್ತಾ ಯೋಜನೆಯ ಪರಿಕಲ್ಪನೆಯನ್ನು ನಿರ್ದಿಷ್ಟ ಗುಂಪುಗಳಿಗೆ ನೀಡುತ್ತಾ ಈ ಮೂಲಕ ಸಮುದಾಯದ ಜನರನ್ನು ವ್ಯಾಪಕವಾಗಿ ತಲುಪುವಂತೆ ಕೈಜೋಡಿಸಿರುತ್ತಾರೆ ಮಾತ್ರವಲ್ಲದೆ ಶಿಕ್ಷಣ ಸಂಪನ್ಮೂಲ ಕೇಂದ್ರಗಳನ್ನು ಅರ್ಥಗರ್ಭಿತ ರೀತಿಯಲ್ಲಿ ಸ್ವತಂತ್ರವಾಗಿ ಮುನ್ನಡೆಸಿಕೊಂಡು ಹೋಗುವಲ್ಲಿ ಸಂಪನ್ಮೂಲಭರಿತರಾಗಿದ್ದಾರೆ.

## 2017–20 ಯೋಜನಾವಧಿಯಲ್ಲಿ ನಮ್ಮೊಂದಿಗಿದ್ದ ಸಂಘಟನೆಗಳು ಮತ್ತು ಸಂಸ್ಥೆಗಳು

1. ಚೈಲ್ಡ್ ರೈಟ್ ಟ್ರಸ್ಟ್, ಬೆಂಗಳೂರು
2. ರೋಶಿನಿ ನಿಲಯ, ಮಂಗಳೂರು
3. ಮಣಿಪಾಲ – ಮಾಹೆ ವಿಶ್ವವಿದ್ಯಾಲಯ, ಮಣಿಪಾಲ
4. ಡೀಡ್ಸ್, ಮಂಗಳೂರು
5. ಸಿಸಿಎಲ್, ಬೆಂಗಳೂರು
6. ಯುನಿಸೆಫ್, ಇಂಡಿಯಾ
7. ಪ್ರಥಮ್–ಇಂಡಿಯಾ
8. ಫೆವಾರ್ಡ್ ಕೆ– ಸಂಸ್ಥೆಗಳ ಸ್ವಾಯತ್ತತೆ ಮತ್ತು ಸಬಲೀಕರಣ
9. ಜೂಡಾ ಟ್ರಸ್ಟ್, ಮೈಸೂರು
10. ಇಂಚರ ಫೌಂಡೇಶನ್, ಮಂಗಳೂರು

## 2017–20 ಯೋಜನೆಯಲ್ಲಿ ನಮ್ಮೊಂದಿಗೆ ಸಹಯೋಗದಲ್ಲಿದ್ದ ಇಲಾಖೆಗಳು

1. ಶಿಕ್ಷಣ ಇಲಾಖೆ, ಕರ್ನಾಟಕ
2. ಸಾರ್ವಜನಿಕ ಶಿಕ್ಷಣ ಇಲಾಖೆ, ಉಡುಪಿ
3. ಸಾರ್ವಜನಿಕ ಶಿಕ್ಷಣ ಇಲಾಖೆ, ದ.ಕ. ಜಿಲ್ಲೆ
4. ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ
5. ಜಿಲ್ಲಾ ಶಿಕ್ಷಕ–ಶಿಕ್ಷಣ ತರಬೇತು ಸಂಸ್ಥೆ, ದ.ಕ. ಜಿಲ್ಲೆ, ಉಡುಪಿ
6. ಶಿಕ್ಷಕ–ಶಿಕ್ಷಣ ತರಬೇತು ಸಂಸ್ಥೆ– ಡಿ ಎಡ್, ದ.ಕ. ಜಿಲ್ಲೆ, ಉಡುಪಿ
7. ಪೋಲಿಸ್ ಇಲಾಖೆ, ದ.ಕ. ಜಿಲ್ಲೆ ಹಾಗೂ ಉಡುಪಿ ಜಿಲ್ಲೆ
8. ದ.ಕ. ಜಿಲ್ಲಾ ಪಂಚಾಯತ್
9. ಉಡುಪಿ ಜಿಲ್ಲಾ ಪಂಚಾಯತ್
10. 2 ಜಿಲ್ಲೆಗಳಲ್ಲಿ ಆಯ್ದುಕೊಂಡಿರುವಂತಹ 15 ಗ್ರಾಮ ಪಂಚಾಯತ್‌ಗಳು
11. ಮಕ್ಕಳ ರಕ್ಷಣಾ ಸಮಿತಿ ದ.ಕ. ಹಾಗೂ ಉಡುಪಿ ಜಿಲ್ಲೆ
12. ಬಾಲನ್ಯಾಯ ಮಂಡಳಿ, ದ.ಕ. ಜಿಲ್ಲೆ ಮತ್ತು ಉಡುಪಿ ಜಿಲ್ಲೆ

## ಯೋಜನಾ ಅನುಷ್ಠಾನದಲ್ಲಿ ಸಂಪನ್ಮೂಲವನ್ನು ಹಂಚಿಕೊಂಡ ವಿಶೇಷ ಸಂಪನ್ಮೂಲ ವ್ಯಕ್ತಿಗಳು

1. ಡಾ। ನಿರಂಜನಾರಾಧ್ಯ, ಫೆಲೋ, ಮಗು ಮತ್ತು ಕಾನೂನು ವಿಶ್ವವಿದ್ಯಾನಿಲಯ ಎಸ್‌ಡಿಎಂಸಿ ಸಬಲೀಕರಣ, ಸರಕಾರೀ ಶಾಲೆಗಳನ್ನು ಉಳಿಸಿ ಬೆಳೆಸಿ
2. ಶ್ರೀ ವಾಸುದೇವ ಶರ್ಮಾ, ಮಕ್ಕಳ ಹಕ್ಕುಗಳು ರಕ್ಷಣೆ
3. ಡಾ। ಸುಕುಮಾರ ಗೌಡ, ಮಕ್ಕಳ ಮಂಟಪ ಪುತ್ತೂರು
4. ಡಾ। ಅಶೋಕ್‌ಕುಮಾರ್ ಮಾಧವ್, ಸಂಶೋಧನಾ ಸಲಹೆಗಾರರು
4. ಶ್ರೀ ರಾಘವೇಂದ್ರ ಭಟ್ ಕುಣಿಲ, ಮಕ್ಕಳ ಹಕ್ಕುಗಳು
5. ಶ್ರೀ ವಿಲ್ಫ್ರೆಡ್ ಡಿಸೋಜ, ಪಂಚಾಯತ್ ರಾಜ್ ಮಾಹಿತಿ
6. ಶ್ರೀ ಅಂಕುಶ್, ನಿಧಿ ಕ್ರೋಢೀಕರಣ
7. ಶ್ರೀ ಮನ್ಸೂರ್, ನಿಧಿ ಕ್ರೋಢೀಕರಣ

**ಮಗುಸ್ನೇಹಿ ಶಾಲಾ ವಾತಾವರಣಕ್ಕಾಗಿ ಮಾಡಿದ ಪ್ರಯತ್ನಗಳಲ್ಲಿ ಗ್ರಾಮ ಪಂಚಾಯತ್ ಹಾಗೂ ಶಾಲೆಗಳಲ್ಲಾದ ಬದಲಾವಣೆಗಳು ಮತ್ತು ಪ್ರತಿಫಲನಗಳನ್ನು ವಿವಿಧ ನೆಲೆಯಲ್ಲಿ ಈ ಕೆಳಕಂಡ ಯಶೋಗಾಥೆಗಳಿಂದ ತಿಳಿದುಕೊಳ್ಳಬಹುದು.**

## ಮಕ್ಕಳ ಕ್ರಿಯಾಶೀಲ ಬೆಳವಣಿಗೆಗೆ ಸುಂದರ ರಂಗಮಂದಿರ

### ಪುತ್ತೂರು ತಾಲೂಕಿನ ಸರಕಾರಿ ಹಿರಿಯ ಪ್ರಾಥಮಿಕ ಶಾಲೆ, ಅರ್ಕ, ಕೋಡಿಪ್ಪಾಡಿ

ಯಾವ ಮಕ್ಕಳಿಗೆ ಒಟ್ಟಾಗಿ ಕುಣಿಯುವುದು, ಹಾಡುವುದು, ನೃತ್ಯ ಮಾಡುವುದು ಖುಷಿ ಕೊಡುವುದಿಲ್ಲ ಹೇಳಿ? ಈ ಖುಷಿಯನ್ನು ಹಂಚಿಕೊಂಡವರು ಸರಕಾರಿ ಹಿರಿಯ ಪ್ರಾಥಮಿಕ ಶಾಲೆ, ಅರ್ಕ ಇಲ್ಲಿ ಓದುತ್ತಿರುವ ಮಕ್ಕಳು. ನಮಗೆ ಶಾಲೆಯಲ್ಲಿ ಆಟ ಪಾಠದ ಜೊತೆಗೆ ನಮ್ಮಲ್ಲಿರುವ ಪಠ್ಯೇತರ ಚಟುವಟಿಕೆಗಳಲ್ಲಿ ಭಾಗವಹಿಸಲು ಮತ್ತು ಪ್ರತಿಭೆಯನ್ನು ಹೊರಹಾಕಲು ಅವಕಾಶ ಸಿಕ್ಕಿದೆ. ಎಂದು ಹೆಮ್ಮೆಯಿಂದ ಹೇಳುತ್ತಾರೆ.

ಇದು ದ.ಕ ಜಿಲ್ಲೆಯ ಪುತ್ತೂರು ತಾಲೂಕು ಕೊಡಿಪ್ಪಾಡಿ ಗ್ರಾಮ ಪಂಚಾಯತ್ ವ್ಯಾಪ್ತಿಯಲ್ಲಿ ಇದೆ. ಊರಿನ ಮುಖ್ಯ ರಸ್ತೆಯಿಂದ ಸುಮಾರು 3 ಕಿಲೋ ಮೀಟರ್ ದೂರವಿರುವ ಈ ಊರಿನಲ್ಲಿ ಹಿಂದುಳಿದ, ಅಲ್ಪಸಂಖ್ಯಾತ ಹಾಗೂ ಪರಿಶಿಷ್ಟ ಜಾತಿಗೆ ಸೇರಿದ ಮಕ್ಕಳು ಇಲ್ಲಿ ಓದುತ್ತಿದ್ದಾರೆ. ಇಲ್ಲಿನ ಹೆಚ್ಚಿನ ಪೋಷಕರು ಕೂಲಿ ಕಾರ್ಮಿಕರಾಗಿ ದುಡಿಯುವವರು. ನಮ್ಮ ಶಾಲಾ ಎಸ್.ಡಿ.ಎಂ.ಸಿ ಯವರು ನಮಗೆ ಸುಂದರವಾದ ರಂಗಮಂದಿರವನ್ನು ನಿರ್ಮಿಸಿ ಕೊಟ್ಟಿದ್ದಾರೆ.

ನಮ್ಮಂತಹವರ ಮಕ್ಕಳಿಗೆ ಊರಿನಲ್ಲಿ ಯಾವುದೆ ಸಾರ್ವಜನಿಕ ಕಾರ್ಯಕ್ರಮ ನಡೆಯುವಾಗ ನೋಡಲು ಬಿಟ್ಟರೆ ಭಾಗವಹಿಸಲು ಅವಕಾಶ ವಿರಲಿಲ್ಲ. ಶ್ರೀಮಂತರ, ಮೇಲ್ವರ್ಗ ದವರ ಮತ್ತು ಖಾಸಗಿ ಶಾಲೆಗೆ ಹೋಗುವ ಮಕ್ಕಳಿಗೆ ಮಾತ್ರ ಇಂತಹ ಅವಕಾಶ ಸಿಗುತ್ತಿದೆ. ಇದನ್ನು ಅರಿತ ನಮ್ಮ ಶಾಲಾ ಎಸ್.ಡಿ.ಎಂ.ಸಿ.ಯವರು ದಾನಿಗಳಿಂದ ಸಂಗ್ರಹಿಸಿದ ದೇಣಿಗೆಯಲ್ಲಿ ನಮ್ಮ ಮಕ್ಕಳಿಗೂ ಅವರವರ ಸಂಸ್ಕೃತಿಯ



ಕಲೆಯನ್ನು ಪ್ರದರ್ಶಿಸಲು ಅವಕಾಶ ಮಾಡಿ ಕೊಟ್ಟಿದ್ದಾರೆ ಎನ್ನುತ್ತಾರೆ ಈ ಶಾಲೆಯ ಪೋಷಕರು.

ಮಕ್ಕಳ ಒಟ್ಟಾರೆ ಅಭಿವೃದ್ಧಿಯಲ್ಲಿ ಪಾಠದ ಜೊತೆಗೆ ಮಕ್ಕಳ ಇತರ ಚಟುವಟಿಕೆಗಳಿಗೆ ಅವಕಾಶ ನೀಡಿದಾಗ ಮಕ್ಕಳ ಕಲಿಕೆಯಲ್ಲಿ ಅಬಿವೃದ್ದಿಯಾಗುವುದರೊಂದಿಗೆ ಮಕ್ಕಳು ಶಾಲೆಗೆ ಗೈರು ಹಾಜರಾಗುವುದು ಕಡಮೆಯಾಗಿದೆ. ಗಂಡು ಮಕ್ಕಳು ಮತ್ತು ಹೆಣ್ಣು ಮಕ್ಕಳಿಗೆ ಭಾಗವಹಿಸಲು ಸಮಾನ ಅವಕಾಶ ಸಿಕ್ಕಿದೆ ಎನ್ನುತ್ತಾರೆ ಶಾಲಾ ಎಸ್.ಡಿ.ಎಂ.ಸಿ ಯವರು.

ಈ ಎಲ್ಲಾ ಮಾರ್ಗದರ್ಶನ ನಮಗೆ ಸಿಕ್ಕಿರುವುದು ಪಡಿ ಸಂಸ್ಥೆಯು ನೀಡಿದ ತರಬೇತಿ ಮತ್ತು ಮಾರ್ಗದರ್ಶನದಲ್ಲಿ. ಶಾಲೆ ಬಿಟ್ಟ ಮಕ್ಕಳ ಬಗ್ಗೆ ಗಮನ ಹರಿಸುವುದು, ಎಸ್.ಡಿ.ಎಂ.ಸಿ ಸಭೆಗಳನ್ನು ಸುಸೂತ್ರವಾಗಿ ನಡೆಸುವುದು, ಶಾಲಾ ದಾಖಲಾತಿ ಹೆಚ್ಚಿಸಲು ದಾಖಲಾತಿ ಆಂದೋಲನ, ಶಾಲಾ ಅಭಿವೃದ್ದಿ ಯೋಜನೆ ತಯಾರಿ ಹಾಗು ಶಾಲಾ ಅಭಿವೃದ್ದಿ ಮೇಲ್ವಿಚಾರಣೆ ಇತ್ಯಾದಿಗಳಿಗೆ ಮಹತ್ವ ನೀಡಬೇಕಾಗಿದೆ ಎಂದು ವಿವಿಧ ಹಂತದಲ್ಲಿ ನಮಗೆ ನೀಡಿದ ತರಬೇತಿಯಲ್ಲಿ ಅರಿತುಕೊಂಡು ಶಾಲಾ ಅಭಿವೃದ್ದಿ ಯೋಜನೆಯನ್ನು ತಯಾರಿಸಿ ಅದಕ್ಕೆ ಪೂರಕ ಕ್ರಿಯಾಯೋಜನೆಯನ್ನು ತಯಾರಿಸಿ ದಾನಿಗಳಿಂದ ಶಾಲಾ ರಂಗಮಂದಿರ, ಶಾಲಾ ಕಟ್ಟಡಕ್ಕೆ ಪೈಂಟಿಂಗ್ ಮತ್ತು ಶಾಲಾ ಕಟ್ಟಡ ಮತ್ತು ಮೇಲ್ಚಾವಣಿ ರಿಪೇರಿಗಾಗಿ ಸುಮಾರು ಒಂದು ಲಕ್ಷಕ್ಕೂ ಹೆಚ್ಚು ದೇಣಿಗೆ ಸಂಗ್ರಹಿಸಿ ಶಾಲೆಯನ್ನು ಅಭಿವೃದ್ದಿ ಪಡಿಸಲಾಯಿತು ಎಂದು ಹೆಮ್ಮೆ ಪಡುತ್ತಾರೆ ಈ ಶಾಲೆಯ ಎಸ್.ಡಿ.ಎಂ.ಸಿಯವರು.

ಇದರೊಂದಿಗೆ ಸಮುದಾಯದತ್ತ ಶಾಲಾ ಕಾರ್ಯಕ್ರಮಗಳು ಕ್ರಮಬದ್ಧವಾಗಿ ನಡೆಯುವುದು, ಶಾಲಾಭಿವೃದ್ಧಿ ಯೋಜನೆಗಳನ್ನು ಎಲ್ಲರ ಸಹಕಾರದೊಂದಿಗೆ ತಯಾರಿಸುವುದು, ವಿವಿಧ ಕಾರ್ಯಕ್ರಮಗಳಲ್ಲಿ ಸಮುದಾಯದ ಭಾಗವಹಿಸುವಿಕೆ, ಎಸ್.ಡಿ.ಎಮ್.ಸಿಯಿಂದ ಮಕ್ಕಳ ದಾಖಲಾತಿಗಾಗಿ ಮನೆ–ಮನೆ ಭೇಟಿ ಮಾಡುವುದು, ದಾನಿಗಳಿಂದ ಶಾಲಾ ಅಭಿವೃದ್ಧಿ ಚಟುವಟಿಕೆಗಳಿಗೆ ಕಂಪ್ಯೂಟರ್ ಸಂಗ್ರಹ, ಪೋಷಕರ ಸಭೆಗಳನ್ನು ನಡೆಸುವುದು, ಎಸ್.ಡಿ.ಎಮ್.ಸಿ ಜವಾಬ್ದಾರಿಯಲ್ಲಿ ಶಾಲಾ ಹಬ್ಬ ನಡಸಿರುವುದು. ಬಿಸಿಯೂಟಕ್ಕಾಗಿ ಅಡುಗೆ ಪಾತ್ರೆಗಳನ್ನು ದಾನಿಗಳಿಂದ ಸಂಗ್ರಹಿಸಿರುವುದು ಮಕ್ಕಳ ಕಲಿಕಾ ಮಟ್ಟ ಉತ್ತಮ ಪಡಿಸಲು ಎಸ್.ಡಿ.ಎಮ್.ಸಿ ವತಿಯಿಂದ ಶಿಕ್ಷಕರ ನೇಮಕ, ಇತ್ಯಾದಿಗಳ ಬಗ್ಗೆ ತರಬೇತಿ ಪಡೆದು ಅನುಷ್ಠಾನ ಮಾಡಲು ಸಾಧ್ಯವಾಯಿತು. ಅಲ್ಲದೆ ಮಕ್ಕಳ ಹಕ್ಕುಗಳ ತಂಡ, ಮೀನಾ ತಂಡದ ಸಭೆಗಳು, ಸಲಹಾ ಪೆಟ್ಟಿಗೆ ಉಪಯೋಗಿಸುವ ಕುರಿತು ಅಲ್ಲದೆ ಮಕ್ಕಳ ಕಲಿಕಾ ಮಟ್ಟ ಉತ್ತಮ ಪಡಿಸುವ ಕುರಿತು ತರಬೇತಿಯನ್ನು ನೀಡಿ ಆ ಮೂಲಕ ಮಕ್ಕಳ

ಅಭಿವೃದ್ಧಿಯಲ್ಲಿ ಎಸ್.ಡಿ.ಎಮ್.ಸಿಯವರು ತೊಡಗಿಸಿಕೊಳ್ಳಲು ಅರಿವು ಮೂಡಿಸಲಾಗಿದೆ. ಇದರ ನಂತರ ಮಕ್ಕಳ ಕುರಿತು, ಮಕ್ಕಳ ಭಾಗವಹಿಸುವಿಕೆ ಕುರಿತು, ಮಕ್ಕಳ ರಕ್ಷಣಾ ನೀತಿ ಕುರಿತು ನಿಯಮ ರೂಪಿಸಿರುವುದು, ಹೆಣ್ಣುಮಕ್ಕಳ ನಾಯಕತ್ವಕ್ಕಾಗಿ ಮೀನಾ ತಂಡದ ಮಕ್ಕಳಿಗೆ ವಿವಿಧ ಕಾರ್ಯಕ್ರಮಗಳನ್ನು ಹಮ್ಮಿಕೊಂಡು ಬೆಳೆಸುವುದು, ಪೋಷಕರ ಸಭೆಗಳಲ್ಲಿ ಮಕ್ಕಳ ಕಲಿಕಾ ಮಟ್ಟದ ಕುರಿತು ಸಲಹೆ-ಸೂಚನೆ ನೀಡುವುದನ್ನು, ಎಸ್.ಡಿ.ಎಮ್.ಸಿಯವರು ಮಾಡಿರುತ್ತಾರೆ.

ಪಡಿ ಸಂಸ್ಥೆಯು ಕಳೆದ 3 ವರ್ಷಗಳಿಂದ ಮಗುಸ್ನೇಹಿ ಯೋಜನೆಯಡಿ ಸರಕಾರಿ ಶಾಲಾಭಿವೃದ್ಧಿಯಲ್ಲಿ ಸಮುದಾಯ ತೊಡಗಿಸಿಕೊಳ್ಳುವ ಕುರಿತು ಶಾಲಾಭಿವೃದ್ಧಿ ಮತ್ತು ಮೇಲುಸ್ತುವಾರಿ ಸಮಿತಿಯವರ ಸಾಮರ್ಥ್ಯ ಹೆಚ್ಚಿಸಲು ಹಲವಾರು ತರಬೇತಿಗಳು, ನಿರಂತರ ಶಾಲಾ ಬೇಟಿ ಮತ್ತು ಎಸ್.ಡಿ.ಎಮ್.ಸಿ ಸಭೆಗಳಲ್ಲಿ ಭಾಗವಹಿಸಿ ಸಲಹೆಗಳನ್ನು ನೀಡುತ್ತಾ ಮಕ್ಕಳ ಹಕ್ಕುಗಳಿಗಾಗಿ ಶಿಕ್ಷಣ ಸಂಪನ್ಮೂಲ ಕೇಂದ್ರದ ಜೊತೆ ಸೇರಿ ಸಮುದಾಯದಲ್ಲಿ ಅರಿವು ಮೂಡಿಸಿ ಮಗುಸ್ನೇಹಿ ವಾತಾವರಣ ನಿರ್ಮಿಸಲು ಸಾಧ್ಯವಾಯಿತು.

## ಬದಲಾವಣೆಯತ್ತ ಶಾಲಾಭಿವೃದ್ಧಿ ಸಮಿತಿ

ತಲ್ಲೂರು ಗ್ರಾಮ ಪಂಚಾಯತ್‌ನ ಇನ್ನೊಂದು ಗ್ರಾಮ ಉಪ್ಪಿನಕುದ್ರು. ಇಲ್ಲಿ ಸರಕಾರಿ ಹಿರಿಯ ಪ್ರಾಥಮಿಕ ಶಾಲೆ ಕಳೆದ 90 ವರ್ಷಗಳಿಂದ ಮಕ್ಕಳಿಗೆ ವಿದ್ಯಾರ್ಜನೆ ಮಾಡುತ್ತಿದೆ. ಕಳೆದ ಮೂರು ವರ್ಷಗಳಲ್ಲಿ 126 ಮಕ್ಕಳು, 6 ಶಿಕ್ಷಕರು ಇದ್ದು ಶಾಲಾ ಭೌತಿಕ ಪರಿಸರವೂ ಉತ್ತಮವಾಗಿಯೇ ಇದೆ. ಆದರೆ ಇಲ್ಲಿರುವ ಸಮುದಾಯಗಳು ಶಾಲೆ ಕಡೆ ಮುಖ ಮಾಡುತ್ತಿರಲಿಲ್ಲ, ಶಾಲಾಭಿವೃದ್ಧಿ ಸಮಿತಿಯು ಕೂಡಾ ನಾಮಕಾವಸ್ಥೆಯಲ್ಲಿದ್ದು, ಇಲ್ಲಿನ ಸದಸ್ಯರು ಕೂಡಾ ಶಾಲೆಯ ವಿಚಾರಗಳಲ್ಲಿ ಚಕಾರ ಎತ್ತುತ್ತಿರಲಿಲ್ಲ. ಮುಖ್ಯ ಶಿಕ್ಷಕರು ಏನೂ ಮಾಡಿದರೂ ಸರಿ ಎನ್ನುವ ಮನೋಭಾವ ಇವರದಾಗಿತ್ತು. ಶಾಲೆಯಲ್ಲಿ ಸಂತಸದಾಯಕ ಕಲಿಕೆಯ ವಾತಾವರಣವು ಕಂಡುಬರುತ್ತಿರಲಿಲ್ಲ.

ಪಡಿ ಸಂಸ್ಥೆಯು ಮಗು ಸ್ನೇಹಿ ಶಾಲಾ ಪರಿಕಲ್ಪನೆಯಲ್ಲಿ ಕಾರ್ಯನಿರ್ವಹಿಸಲು ತೊಡಗಿದಾಗ ಎಸ್.ಡಿ.ಎಂ.ಸಿ ಸದಸ್ಯರು ಬಾವಿಯೊಳಗಿನ ಕಪ್ಪೆ ಇದ್ದ ಹಾಗೆ ಇದ್ದರು. ಅವರಿಗೆ ಅದೆಷ್ಟೋ ಬಾರಿ ನಿಯಾಮಾವಳಿಗಳ ಬಗ್ಗೆ ತಿಳಿಸಿದರೂ ಅವರು ಗಮನವೇ ನೀಡುತ್ತಿರಲಿಲ್ಲ. ಈ ಸಂಧರ್ಭದಲ್ಲಿ ಪಡಿ ಸಂಸ್ಥೆಯು ಮಗುಸ್ನೇಹಿ ಶಾಲೆ ಹಾಗೂ ಸಮುದಾಯದ ಪರಿಕಲ್ಪನೆಯನ್ನು ನಮ್ಮ ಗ್ರಾಮ ಪಂಚಾಯತ್ ಸಮಿತಿಗೆ ತಿಳಿಹೇಳಿ ತರಬೇತಿಗಳನ್ನು ನೀಡಿ ಪಂಚಾಯತ್ ರಾಜ್ ಕಾಯ್ದೆಯಲ್ಲಿ ಮಗುಸ್ನೇಹಿ ಶಿಕ್ಷಣ,

ಉಚಿತ ಮತ್ತು ಕಡ್ಡಾಯ ಶಿಕ್ಷಣ ಹಕ್ಕು ಕಾಯ್ದೆಯಲ್ಲಿ ಸ್ಥಳೀಯ ಸರ್ಕಾರದ ಪಾತ್ರ, ಮಕ್ಕಳ ರಕ್ಷಣಾ ವ್ಯವಸ್ಥೆಗಳು, ಮಗು ಸಂಬಂಧಿ ಕಾನೂನುಗಳು ಮತ್ತು ಪ್ರಾಧಿಕಾರಗಳು ಮತ್ತು ಮಕ್ಕಳ ರಕ್ಷಣಾ ಸಮಿತಿಯ ರಚನೆ ಮಕ್ಕಳ ಗ್ರಾಮ ಸಭೆಯ ಪರಿಣಾಮಕಾರಿ ಅಳವಡಿಸುವಿಕೆ ಮತ್ತು ಅನುಸರಣಾ ವಿಧಾನ ಹಾಗೂ ಶಾಲಾಭಿವೃದ್ಧಿ ಯೋಜನೆಗಳಲ್ಲಿ ಪಂಚಾಯತ್ ಪಾತ್ರ ಮಾತ್ರವಲ್ಲದೆ ಮಗುಸ್ನೇಹಿ ಪಂಚಾಯತ್ ಸೂಚ್ಯಂಕಗಳ ಸ್ವಮೌಲ್ಯಮಾಪನ ವಿಧಾನಗಳನ್ನು ವಿವಿಧ ಹಂತಗಳಲ್ಲಿ ತರಬೇತಿ ನೀಡಿದ್ದರು.

ಅದೇ ಸಮಯದಲ್ಲಿ ಸರಕಾರದ ಸುತ್ತೋಲೆಗಳನ್ನೂ ನಮಗೆ ತಿಳಿಯಪಡಿಸಿ ಈ ಪ್ರಕಾರ ಬದಲಾವಣೆಗಳಿಗೆ ಅವಕಾಶ ಸಿಕ್ಕಿತು. ಹೀಗೆ ನಾವು ಪಂಚಾಯತ್‌ನವರು ಶೈಕ್ಷಣಿಕ ವಿಚಾರಗಳನ್ನು ಮೇಲುಸ್ತುವಾರಿ ಮಾಡುವಲ್ಲಿ ಆಸಕ್ತಿಯನ್ನು ತೋರಿಸಿ, ಸಮರ್ಪಕವಾಗಿ ಕಾರ್ಯ ನಿರ್ವಹಿಸಲು ಆರಂಭಿಸಿದೆವು. ಈ ಅವಕಾಶಗಳ ಸದ್ಬಳಕೆಯನ್ನು ಮಾಡಿಕೊಂಡು ಶಾಲಾಮಕ್ಕಳ ಎಲ್ಲಾ ಪೋಷಕರನ್ನು ಕರೆದು ಅದರಲ್ಲಿ 18 ಜನ ಪೋಷಕರನ್ನು, 3 ಮಂದಿ ನಾಮನಿರ್ದೇಶಿತ ಸದಸ್ಯರನ್ನು, 3 ಮಂದಿ ಪದನಿಮಿತ್ತ ಸದಸ್ಯರನ್ನು ಆರಿಸಿ ಒಟ್ಟು 24 ಜನರ ಸಮಿತಿಯನ್ನು ರಚಿಸಿದರು. ನಂತರ ಕೆಲವೇ ದಿನಗಳಲ್ಲಿ ಶಿಕ್ಷಣ ಇಲಾಖೆಯು ನೀಡಬೇಕಾದ ತರಬೇತಿಯನ್ನು ಪಂಚಾಯತ್‌ನವರು ನಾಗರಿಕ ಸೌಕರ್ಯ ಸಮಿತಿಯ ವತಿಯಿಂದ ತಮ್ಮ ವ್ಯಾಪ್ತಿಯ ಶಾಲೆಗಳಿಗೆ ನುರಿತ ಸಂಪನ್ಮೂಲ ವ್ಯಕ್ತಿಗಳಿಂದ 2 ದಿನಗಳ ತರಬೇತಿಯನ್ನು ನೀಡಿದರು. ಈ ತರಬೇತಿಯು ಉಪ್ಪಿನಕುದ್ರು ಶಾಲೆಯ ಶಾಲಾಭಿವೃದ್ಧಿ ಸಮಿತಿಗೆ ಆಶಾಕಿರಣವಾಯಿತು. ಈ ತರಬೇತಿಯನ್ನು ಪಡೆದುಕೊಂಡ ಸದಸ್ಯರು ತಮ್ಮ ಜ್ಞಾನ ಹಾಗೂ ಆತ್ಮವಿಶ್ವಾಸವನ್ನು ಹೆಚ್ಚಿಸಿಕೊಂಡು ಶಾಲೆಯಲ್ಲಿ ಜವಾಬ್ಧಾರಿಯುತವಾಗಿ ಕಾರ್ಯ ನಿರ್ವಹಿಸತೊಡಗಿದರು.

ಇಂದು ಈ ಎಸ್.ಡಿ.ಎಂ.ಸಿಯು ಪ್ರತಿ ತಿಂಗಳ ಸಭೆಯಲ್ಲಿ ಮಕ್ಕಳ ಕಲಿಕಾಮಟ್ಟದಿಂದ ಹಿಡಿದು ಮಕ್ಕಳ ರಕ್ಷಣೆ ಮತ್ತು ಪೋಷಣೆಗೆ ಸಂಬಂಧಿಸಿ ಮಾತ್ರವಲ್ಲದೆ ಶಾಲೆಯ ಎಲ್ಲಾ ವಿಚಾರಗಳ ಬಗ್ಗೆ ಚರ್ಚಿಸಿ ಮಕ್ಕಳಿಗೆ ಸಂತಸದಾಯಕ ಕಲಿಕೆಯನ್ನು ನೀಡುವಲ್ಲಿ ಯಶಸ್ವಿಯಾಗಿ ನಮ್ಮ ಗ್ರಾಮದ ಮಾದರಿ ಶಾಲೆಯಾಗಿ ಪರಿವರ್ತಿಸಿದೆ ಎಂದು ಹೇಳಲು ಹೆಮ್ಮೆ ಪಡುತ್ತಿದ್ದೇವೆ. ಅದಷ್ಟು ಮಾತ್ರವೇ ಅಲ್ಲದೆ ನಮ್ಮ ಗ್ರಾಮದ ಶಾಲೆಯ ಈ ಎಸ್.ಡಿ.ಎಂ.ಸಿ. ಸದಸ್ಯರು ಶಿಕ್ಷಣ ಸಂಪನ್ಮೂಲ ಕೇಂದ್ರದ ಸದಸ್ಯರಾಗಿ, ಉಡುಪಿ ಜಿಲ್ಲಾ ಎಸ್.ಡಿ.ಎಂ.ಸಿ ಸಮನ್ವಯ ವೇದಿಕೆಯ ಸದಸ್ಯರಾಗಿ ಗುರುತಿಸಲ್ಪಟ್ಟಿದ್ದಾರೆ. ಗುಣಮಟ್ಟದ ಶಿಕ್ಷಣಕ್ಕೆ ಪೂರಕವಾಗಿ ಎಲ್ಲಾ ಚಟುವಟಿಕೆಗಳಲ್ಲಿ ತಮ್ಮನ್ನು ತಾವು ಸಕ್ರಿಯವಾಗಿ ತೊಡಗಿಸಿಕೊಂಡು ಸರಕಾರಿ

ಶಾಲೆ ಉಳಿಯಲಿ–ಬೆಳೆಯಲಿ ಎನ್ನುವ ನೆಲೆಯಲ್ಲಿ ತಮ್ಮ ಸಮಿತಿಯನ್ನು ಬಲಗೊಳಿಸುತ್ತಿದ್ದಾರೆ. ಇವೆಲ್ಲ ಬದಲಾವಣೆಗೆ ಮೂಲ ಕಾರಣರಾಗಿರುವ ಪಡಿ ಸಂಸ್ಥೆಗೆ ನಾವು ಚಿರಋಣಿಗಳಾಗಿದ್ದೇವೆ.

**– ಕುಂದಾಪುರದ ತಲ್ಲೂರು ಮಗು ಸ್ನೇಹಿ ಗ್ರಾಮ ಪಂಚಾಯತ್**

## ಶಾಲಾಭಿವೃದ್ಧಿಯೆಡೆ ಗಮನ ಮತ್ತು ಮನನ – ಎಸ್‌ಡಿಎಂಸಿ

### ಸರಕಾರಿ ಹಿರಿಯ ಪ್ರಾಥಮಿಕ ಶಾಲೆ ತಲ್ಲೂರು :

ಕುಂದಾಪುರ ತಾಲೂಕಿನ ತಲ್ಲೂರು ಕ್ಲಸ್ಟರ್‌ನ ಒಳಗೊಂಡಿರುವ ಸ.ಹಿ.ಪ್ರಾ. ಶಾಲೆ ತಲ್ಲೂರು ಈ ಶಾಲೆಯೂ ಪಂಚಾಯತ್‌ನ ಎದುರುಗಡೆ ಇರುವುದರಿಂದ ಶಾಲೆಗೆ ಉಪಯುಕ್ತವಾದ ಸಹಾಯಗಳು ನಡೆಯುತ್ತದೆ.

ಈ ಶಾಲೆಯಲ್ಲಿ ಅತಿಥಿ ಶಿಕ್ಷಕರನ್ನು ಒಳಗೊಂಡು 9 ಜನ ಶಿಕ್ಷಕರಿದ್ದು ಸುಮಾರು 209 ವಿದ್ಯಾರ್ಥಿಗಳಿದ್ದು, ಶಿಕ್ಷಣವನ್ನು ಪಡೆಯುತ್ತಿದ್ದಾರೆ, ಶಾಲಾ ಭೌತಿಕ ಪರಿಸರ ಉತ್ತಮವಾಗಿರುವುದರಿಂದ ಅಧಿಕ ಸಂಖ್ಯೆಯಲ್ಲಿ ವಿದ್ಯಾರ್ಥಿಗಳು ಈ ಶಾಲೆಗೆ ದಾಖಲಾಗುತ್ತಿದ್ದಾರೆ. ಈ ಶಾಲೆಯ ಎಸ್.ಡಿ.ಎಮ್.ಸಿ ಉತ್ತಮ ರೀತಿಯಲ್ಲಿ ಶಾಲಾ ಕುಂದುಕೊರತೆಗಳನ್ನು ನಿವಾರಿಸಲು ಉತ್ಸಾಹಿ ಸಮಿತಿಯಾಗಿರುವುದರಿಂದ ಶಾಲೆಯನ್ನು ಅಭಿವೃದ್ಧಿಪಡಿಸಲು ಸಹಾಯಕಾರಿಯಾಗಿದೆ. ಜೊತೆಗೆ ಸ್ಥಳೀಯ ಸರಕಾರವಾದ ತಲ್ಲೂರು ಗ್ರಾಮ ಪಂಚಾಯತ್ ಕೂಡ ಶಾಲೆಗೆ ಪರೋಕ್ಷವಾಗಿ ಸಹಕರಿಸುತ್ತಿದೆ. ಶಾಲಾ ಆಡಳಿತ ಮಂಡಳಿಯೂ ಶಾಲೆಗೆ ಹೊಸ ಮಕ್ಕಳ ಸೇರ್ಪಡೆ, ಮಕ್ಕಳ ಹಿತದೃಷ್ಟಿಯಿಂದ ಕೆಲವು ಯೋಜನೆಗಳನ್ನು ಶಾಲಾ ಅಭಿವೃದ್ಧಿ ಯೋಜನೆಯಲ್ಲಿ ಹಾಕಿಕೊಂಡಿರುದರಿಂದ ಸಾಕಷ್ಟು ರೀತಿಯ ಅಭಿವೃದ್ಧಿಯ ಕೆಲಸಗಳು ನಡೆದಿವೆ. ಅದರಂತೆ ಕಳೆದ ವರ್ಷದಲ್ಲಿ ಮಣಿಪಾಲದಲ್ಲಿ ನಡೆದ ಮಕ್ಕಳ ರಕ್ಷಣಾ ನೀತಿಯ ಕುರಿತು ತರಬೇತಿ ಕಾರ್ಯಗಾರದಲ್ಲಿ ಮುಖ್ಯ ಶಿಕ್ಷಕರು ಈ ತರಬೇತಿಯಲ್ಲಿ ಭಾಗವಹಿಸಿ, ತರಬೇತಿಯನ್ನು ಪಡೆದು, ಶಾಲೆಯಲ್ಲಿ ಮಕ್ಕಳ ರಕ್ಷಣಾ ನೀತಿಯನ್ನು ಕ್ಲಸ್ಟರ್ ಸಂಪನ್ಮೂಲ ವ್ಯಕ್ತಿ, ಶಾಲಾ ಎಸ್.ಡಿ.ಎಮ್.ಸಿ ಮತ್ತು ಪಂಚಾಯತ್ ನಾಮ ನಿರ್ದೇಶನ ಸದಸ್ಯರೊಂದಿಗೆ ಸೇರಿ ರಚನೆ ಮಾಡಿ, ಕೆಲವು ಯೋಜನೆಯನ್ನು ಅದರಲ್ಲಿ ಸೇರಿಸಿಕೊಂಡಿರುತ್ತಾರೆ. ಅದರಂತೆ ಯೋಜನೆಯು ಸಫಲವಾಗಬೇಕಾದರೆ ಸ್ಥಳೀಯ ಸರಕಾರಿ ಶಾಲೆ ಹಳೆ ವಿದ್ಯಾರ್ಥಿ ಸಂಘ, ಊರ ದಾನಿಗಳು ಮುಂತಾದವರ ಸಹಾಯವನ್ನು ಅಪೇಕ್ಷಿಸಬೇಕಾಗುತ್ತದೆ.

ಅದರಂತೆ 1. ಮಾರಣಕಟ್ಟೆ ಕೃಷ್ಣ ಮೂರ್ತಿ ಮಂಜರು (ಟ್ರಸ್ಟ್) ದಾನಿಗಳು ಶಾಲೆಗೆ ಶುದ್ಧಕುಡಿಯುವ ನೀರಿನ ಘಟಕವನ್ನು ಕೊಡುಗೆಯಾಗಿ ನೀಡಿರುತ್ತಾರೆ.

ಶಾಲೆಯಲ್ಲಿ ಕೆಲವು ತರಕಾರಿ ಗಿಡಗಳನ್ನು ಬೆಳೆಸಿದ್ದು ಶಾಲಾ ಶಿಕ್ಷಕ ವೃಂದ, ಮಕ್ಕಳು, ಎಸ್.ಡಿ.ಎಮ್.ಸಿ ಯವರ ಸಹಭಾಗಿತ್ವದಲ್ಲಿ ಶಾಲಾ ಕೈ ತೋಟ ನಿರ್ಮಾಣ ಮಾಡಿರುತ್ತಾರೆ.

ಈ ಶಾಲೆಯಲ್ಲಿ ಇಂಗ್ಲೀಷ್ ಮಾಧ್ಯಮವನ್ನು ಕಲಿಸಲಾಗುತ್ತಿದೆ. ಇಬ್ಬರು ಅತಿಥಿ ಶಿಕ್ಷಕಿಯರನ್ನು ನೇಮಕ ಮಾಡಲಾಗಿರುತ್ತದೆ.

ಶಾಲಾ ಮಂತ್ರಿಮಂಡಲ, ಮೀನಾ ಕ್ಲಬ್, ಮಕ್ಕಳ ಹಕ್ಕುಗಳ ಕ್ಲಬ್, ಈ ಕ್ಲಬ್‌ಗಳ ಸಭೆಯಲ್ಲಿ ಶಾಲೆಯಿಂದ ಹೊರಗುಳಿದ ಮಕ್ಕಳ ಬಗ್ಗೆ, ಶಿಕ್ಷಣದಿಂದ ವಂಚಿತರಾದ ಮಕ್ಕಳು ಶಾಲಾ ಸ್ವಚ್ಛತೆಯ ವಿಷಯ, ಮಕ್ಕಳಿಗೆ ಹಕ್ಕುಗಳ ಏಕೆ ಬೇಕು ಎನ್ನುವ ಸಲುವಾಗಿ ಸಭೆಯಲ್ಲಿ ಚರ್ಚೆಗಳಾಗುತ್ತದೆ. ಈ ಎಲ್ಲಾ ವಿಚಾರಗಳನ್ನು ಕೇವಲ ಮಕ್ಕಳೆ ನಿಭಾಯಿಸಿಕೊಂಡು ಹೋಗುವಷ್ಟು ಸಾಮರ್ಥ್ಯವನ್ನು ಪಡೆದಿರುತ್ತಾರೆ.

## ಶಾಲೆಯಲ್ಲಿ ಮಕ್ಕಳಿಗೆ ಅವರವರ ತರಗತಿಯಲ್ಲಿಯೇ ಶುದ್ಧ ಕುಡಿಯುವ ನೀರು ಪೂರೈಕೆ

**ಸರಕಾರಿ ಹಿರಿಯ ಪ್ರಾಥಮಿಕ ಶಾಲೆ ಕೊಡಿಪ್ಪಾಡಿ :**

ಶುದ್ಧ ಕುಡಿಯುವ ನೀರಿನ ಘಟಕ ನಿರ್ಮಿಸಿದ್ದು ಸರಕಾರಿ ಹಿರಿಯ ಪ್ರಾಥಮಿಕ ಶಾಲೆ ಕೊಡಿಪ್ಪಾಡಿ ಶಾಲೆಯಲ್ಲಿ ಇದು ಕೊಡಿಪ್ಪಾಡಿ ಪಂಚಾಯತ್ ವ್ಯಾಪ್ತಿಯಲ್ಲಿ ಗ್ರಾಮೀಣ ಭಾಗದಲ್ಲಿದೆ. ಇಲ್ಲಿ 120 ಮಕ್ಕಳು 8ನೇ ತರಗತಿ ತನಕ ಕಲಿಯುತ್ತಿದ್ದಾರೆ. ಇಲ್ಲಿನ ಮಕ್ಕಳ ಪೋಷಕರು ಹೆಚ್ಚಿನವರು ಕೂಲಿ ಕಾರ್ಮಿಕರಾಗಿದ್ದಾರೆ. ಮಕ್ಕಳ ಅಭಿವೃದ್ಧಿಗೆ ಪೂರಕ ವಾತಾವರಣವಿದ್ದರೂ ಇಲ್ಲಿ ಮಕ್ಕಳಿಗೆ ತರಗತಿವಾರು ಕುಡಿಯುವ ನೀರಿನ ವ್ಯವಸ್ಥೆಯ ಕೊರತೆ ಕಾಡುತ್ತಿತ್ತು. ಈ ವಿಷಯವನ್ನು ಶಿಕ್ಷಕರು ಶಾಲಾಭಿವೃದ್ಧಿ ಮತ್ತು ಮೇಲುಸ್ತುವಾರಿ ಸಮಿತಿಯವರ ಗಮನಕ್ಕೆ ತಂದರು.



ಹಾಗೆಯೇ ಶಾಲಾಭಿವೃದ್ಧಿ ಮತ್ತು ಮೇಲುಸ್ತುವಾರಿ ಸಮಿತಿಯವರು ಪೋಷಕರ ಮುಂದೆ ಈ ವಿಷಯವನ್ನು ಪ್ರಸ್ತಾಪಿಸಿ ನಂತರ ಶಾಲಾಭಿವೃದ್ಧಿ ಯೋಜನೆಯನ್ನು ರಚಿಸಿ ಶಾಲಾಭಿವೃದ್ಧಿ ಯೋಜನೆಯಲ್ಲಿ ಮಕ್ಕಳಿಗೆ ಕುಡಿಯುವ ನೀರಿನ ಘಟಕದ ವ್ಯವಸ್ಥೆಯನ್ನು ಸೇರಿಸಿ ಇಲಾಖೆ, ಪಂಚಾಯತ್ ಮತ್ತು ವಿವಿಧ ಸಂಘ ಸಂಸ್ಥೆಗಳಿಗೆ ನೀಡಿದರು.

ಶಾಲಾಭಿವೃದ್ಧಿ ಮತ್ತು ಮೇಲುಸ್ತುವಾರಿ ಸಮಿತಿಯ ಸದಸ್ಯರು ಇದನ್ನು ನಿರಂತರ ಅನುಸರಣೆ ಮಾಡುತ್ತಿದ್ದರು. ಪ್ರತೀ ದಿನ ದಾನಿಗಳ ಸಂಪರ್ಕ ಮಾಡುವುದು ಮತ್ತು ಪೋಷಕರ ಸಭೆಗಳಲ್ಲಿ, ಎಸ್.ಡಿ.ಎಮ್.ಸಿ ಸಭೆಗಳಲ್ಲಿ ಚರ್ಚಿಸುತ್ತಿದ್ದರು. ಇದರ ಫಲವಾಗಿ ದಾನಿಗಳಿಂದ ಶುದ್ಧ ಕುಡಿಯುವ ನೀರಿನ ಘಟಕ ಶಾಲೆಗೆ ದೊರೆಯಿತು. 1 ರಿಂದ 4 ಮತ್ತು 5 ರಿಂದ 8ನೇ ತರಗತಿ ಮಕ್ಕಳಿಗೆ ಅನುಕೂಲವಾಗುವಂತೆ ಎರಡು ನೀರಿನ ಘಟಕಗಳನ್ನು ರಚನೆ ಮಾಡಿ ಅಲ್ಲಿ ನೀರು ಶುದ್ಧೀಕರಣಗೊಂಡು ಮಕ್ಕಳಿಗೆ ತಮ್ಮ ತರಗತಿಗಳಲ್ಲಿ ನೀರು ಕುಡಿಯಲು ವ್ಯವಸ್ಥೆಯನ್ನು ಮಾಡಲಾಯಿತು.

ತರಗತಿಯಲ್ಲಿಯೇ ಮಕ್ಕಳಿಗೆ ನೀರು ಕುಡಿಯಲು ವ್ಯವಸ್ಥೆಯಿರುವುದರಿಂದ ಮಕ್ಕಳು ಆಗಾಗ ನೀರು ಕುಡಿಯುವುದರಿಂದ ಮಕ್ಕಳ ಸುರಕ್ಷತೆ ಹಾಗೂ ಆರೋಗ್ಯಪೂರ್ಣ ವಾತಾವರಣ ಕಲ್ಪಿಸುವಲ್ಲಿ ಶಾಲಾಭಿವೃದ್ಧಿ ಮತ್ತು ಮೇಲುಸ್ತುವಾರಿ ಸಮಿತಿ ತಮ್ಮ ಜವಾಬ್ದಾರಿಯನ್ನು ನಿರ್ವಹಿಸಿದೆ. ಅಲ್ಲದೆ ಮಕ್ಕಳು ಕೂಡ ನೀರು ಮಕ್ಕಳ ಆರೋಗ್ಯ ವೃದ್ಧಿಸುವಲ್ಲಿ ಹೇಗೆ ಸಹಕಾರಿಯಾಗಬಲ್ಲದು ಎಂಬುದನ್ನು ಅರಿತುಕೊಂಡಿದ್ದಾರೆ. ಈ ಮೂಲಕ ಶಾಲಾಭಿವೃದ್ಧಿ ಯೋಜನೆ ರಚಿಸಿ ಅದರ ಅನುಷ್ಠಾನ ಮಾಡುವುದರ ಮೂಲಕ ಮಗುಸ್ನೇಹಿ ವಾತಾವರಣವನ್ನು ಶಾಲಾಭಿವೃದ್ಧಿ ಮತ್ತು ಮೇಲುಸ್ತುವಾರಿ ಸಮಿತಿ ಮಕ್ಕಳಿಗೆ ಕಲ್ಪಿಸಿಕೊಟ್ಟಿದೆ.

**ಸರಕಾರಿ ಹಿರಿಯ ಪ್ರಾಥಮಿಕ ಶಾಲೆ ಬೈಲೂರು ಮೈನ್:**

ಉಡುಪಿ ಜಿಲ್ಲೆಯ ಕಾರ್ಕಳ ತಾಲೂಕಿಗೆ ಸೇರಿದ ಬೈಲೂರು ಗ್ರಾಮ ಪಂಚಾಯತ್ ವ್ಯಾಪ್ತಿಯಲ್ಲಿರುವ ಶಾಲೆ ಸರಕಾರಿ ಹಿರಿಯ ಪ್ರಾಥಮಿಕ ಶಾಲೆ ಬೈಲೂರು ಮೈನ್. ಈ ಶಾಲೆಯಲ್ಲಿ ಸುಮಾರು 82 ಮಕ್ಕಳು ವಿದ್ಯಾಭ್ಯಾಸವನ್ನು ಮಾಡುತ್ತಿದ್ದು, 4 ಶಿಕ್ಷಕಿಯರು ಹಾಗೂ 1 ಗೌರವ ಶಿಕ್ಷಕರಿದ್ದಾರೆ.

**ಹಿಂದಿನ ಪರಿಸ್ಥಿತಿಯ ವಿವರಣೆ:**

ಪ್ರತಿ ತಿಂಗಳು ಎಸ್.ಡಿ.ಎಂ.ಸಿ ಸಭೆಗಳು ನಡೆಯುತ್ತಿದ್ದು, ಶಾಲಾಭಿವೃದ್ಧಿಯ ಕೆಲಸ ಕಾರ್ಯಗಳ ಕುರಿತು ಚರ್ಚೆಗಳಾಗುತ್ತಿದ್ದು, ಮಕ್ಕಳಿಗೆ ಸಂಬಂಧಪಟ್ಟ ವಿಷಯಗಳಾಗಲಿ ಅಥವಾ ಮಕ್ಕಳಿಗಿರುವ ಅನೇಕ ಕ್ಲಬ್‌ಗಳ ಕುರಿತಾಗಲಿ ಚರ್ಚೆಗಳಾಗುತ್ತಿರಲಿಲ್ಲ. ಮಕ್ಕಳ ಹಕ್ಕುಗಳಿಗೆ ಸಂಬಂಧಪಟ್ಟ ವಿಚಾರಗಳೇ ಸದಸ್ಯರಿಗೆ ತಿಳಿದಿರಲಿಲ್ಲ. ಹಾಗಾಗಿ ಅಲ್ಲಿ ಮಕ್ಕಳಿಗೆ ಅಗತ್ಯವಿರುವ ಸಲಹಾ ಪೆಟ್ಟಿಗೆಯ ಬಗ್ಗೆ ಯಾವ ಮಾಹಿತಿಯು ಸದಸ್ಯರಿಗೆ ಗೊತ್ತಿಲ್ಲ. ಇಲ್ಲಿನ ಸಲಹಾ ಪೆಟ್ಟಿಗೆಯು ಸಣ್ಣ ಬಾಕ್ಸ್ ತರಹ ಇದ್ದು, ಅದು ಮುಖ್ಯ ಶಿಕ್ಷಕಿಯ ಕೊಠಡಿಯ ಕಬಾಟಿನ ಮೇಲೆ ಇರುತಿತ್ತು. ಇದರಿಂದ ಮಕ್ಕಳು ಸಲಹೆಗಳನ್ನಾಗಲಿ ಹಾಗೂ ಸಮಸ್ಯೆಗಳನ್ನಾಗಲಿ ಹಾಕಲು ಸಾಧ್ಯವಿರಲಿಲ್ಲ. ಈ ವಿಚಾರವಾಗಿ ಎಸ್.ಡಿ.ಎಂ.ಸಿ ಸದಸ್ಯರುಗಳಿಗೆ ಇಲಾಖೆಯಿಂದ ಯಾವ ತರಬೇತಿಗಳೂ ನಡೆದಿಲ್ಲ. ಶಿಕ್ಷಕರೂ ಇದರ ಬಗ್ಗೆ ಮಾಹಿತಿಯನ್ನು ನೀಡಿಲ್ಲದ ಕಾರಣ ಅವರಿಗೆ ಅದರ ಅರಿವು ಇರಲಿಲ್ಲ.

**ಪರಿಸ್ಥಿತಿಯ ಸುಧಾರಣೆಗೆ ನಡೆಸಿದ ಪ್ರಯತ್ನಗಳು:**

ಪಡಿ ಸಂಸ್ಥೆಯಿಂದ ತರಬೇತಿ ಪಡೆದ ಶಿಕ್ಷಣ ಸಂಪನ್ಮೂಲ ಕೇಂದ್ರದ ಸಂಪನ್ಮೂಲ ವ್ಯಕ್ತಿಯವರು ಈ ಶಾಲೆಗೆ ಆಗಾಗ ಭೇಟಿಕೊಟ್ಟು, ಅಲ್ಲಿರುವ ಲೋಪದೋಷಗಳ ಕುರಿತು ಶಿಕ್ಷಕರಲ್ಲಿ ಚರ್ಚಿಸಿದರು. ಆದರೆ ಶಿಕ್ಷಕರು ಇದರ ಕುರಿತು ಎಸ್.ಡಿ.ಎಂ.ಸಿ ಸಭೆಗಳಲ್ಲಿ ಚರ್ಚಿಸಲಿಲ್ಲ. ಕೊನೆಗೆ ಶಾಲಾ ಮಟ್ಟದಲ್ಲಿ ಎಸ್.ಡಿ.ಎಂ.ಸಿ ಸದಸ್ಯರಿಗೆ ತರಬೇತಿಯನ್ನು ನೀಡಿದರು. ಈ ತರಬೇತಿಯಲ್ಲಿ ಸದಸ್ಯರ ಜವಾಬ್ದಾರಿಗಳೇನು? ಮಕ್ಕಳ ಹಕ್ಕುಗಳು ಮತ್ತು ಶಾಲೆಯಲ್ಲಿರುವ ಮಕ್ಕಳಿಗಾಗಿ ಇರುವ ಕ್ಲಬ್‌ಗಳ ಕುರಿತು ವಿವರಿಸಿದರು. ಅದರಲ್ಲಿ ಮುಖ್ಯವಾಗಿ ಶಾಲೆಯ ಕುಂದುಕೊರತೆ ನಿವಾರಣಾ ವ್ಯವಸ್ಥೆಯಲ್ಲಿ ಒಂದಾದ ಸಲಹಾ ಪೆಟ್ಟಿಗೆಯ ಕುರಿತು ತಿಳಿಸಿದರು. ಶಾಲೆಯಲ್ಲಿ ಈಗ ಇರುವ ಸಲಹಾ ಪೆಟ್ಟಿಗೆ ಸ್ಥಿತಿಯನ್ನು ಸದಸ್ಯರಿಗೆ ವಿವರಿಸಿದರು.

**ಎದುರಿಸಿದ ಸವಾಲುಗಳು:**

ಸಲಹಾ ಪೆಟ್ಟಿಗೆಯ ಬಗ್ಗೆ ಶಿಕ್ಷಕರಲ್ಲಿ ಎಷ್ಟು ಬಾರಿ ಹೇಳಿದರೂ ಸರಿಯಾದ ಸ್ಪಂದನೆ ಸಿಗದೇ ಇರುವುದು ಮಗುಸ್ನೇಹಿ ದೃಷ್ಟಿಕೋನದಿಂದ ಈ ಸಮಸ್ಯೆಯನ್ನು ಬಗೆಹರಿಸುವುದು ಕಷ್ಟ ಸಾಧ್ಯವಾಯಿತು. ಎಸ್.ಡಿ.ಎಂ.ಸಿ ಸದಸ್ಯರಲ್ಲೂ ಹೇಳಿದಾಗಲೂ ಏನೂ ಪ್ರತಿಕ್ರಿಯೆ ಬರಲಿಲ್ಲ. ಪ್ರತೀ ತರಬೇತಿಯಲ್ಲೂ ಒಂದೇ ವಿಚಾರವಾಗಿ ಚರ್ಚೆಗಳಾಗುತ್ತಿತ್ತು.

**ಸವಾಲುಗಳಿಂದ ಹೊರಗೆ ಬರಲು ರೂಪಿಸಿದ ತಂತ್ರ :**

ಮರಳಿ ಯತ್ನವ ಮಾಡು ಎಂಬಂತೆ ಪ್ರತೀ ತರಬೇತಿಯಲ್ಲೂ ಶಾಲಾ ಭೇಟಿಯ ಸಂದರ್ಭದಲ್ಲೂ ಒಂದೇ ವಿಚಾರವಾಗಿ ಚರ್ಚಿಸುತ್ತಿದ್ದು, ಇದರಿಂದ ಎಸ್.ಡಿ.ಎಂ.ಸಿ.ಯವರಿಗೆ ಇದು ಒಂದು ದೊಡ್ಡ ವಿಷಯವಾಗಿರುವುದರಿಂದ ಇವರು ಇಷ್ಟು ಹೇಳುತ್ತಿದ್ದಾರೆ ಎಂದು ಅರಿತುಕೊಂಡು ಕೊನೆಗೂ ಒಂದು ತರಬೇತಿಯಲ್ಲಿ ಎಸ್.ಡಿ.ಎಂ.ಸಿ ಅಧ್ಯಕ್ಷರು ಮುತುವರ್ಜಿ ವಹಿಸಿಕೊಂಡು ಕಬ್ಬಿಣದ ಸಣ್ಣ ಪೆಟ್ಟಿಗೆಯನ್ನು ತಂದರು. ಆದರೆ ಅದಕ್ಕಿಂತ ಮೊದಲು ಶಿಕ್ಷಕರು ಕೂಡ ಇದರ ವ್ಯವಸ್ಥೆಯನ್ನು ಮಾಡಿದ್ದರು.

**ಪ್ರಸ್ತುತ ಸ್ಥಿತಿಗತಿ/ ಬದಲಾವಣೆ:**

ಪ್ರಸ್ತುತ ಎಲ್ಲಾ ಮಕ್ಕಳಿಗೂ ಎಟಕುವ ರೀತಿಯಲ್ಲಿ ಸಲಹಾ ಪೆಟ್ಟಿಗೆಯನ್ನು ಇಟ್ಟಿದ್ದು ಮತ್ತು ಅದರ ಮಹತ್ವ ಎಲ್ಲರಿಗೂ ಅರ್ಥವಾಯಿತು.

ಸಂವಾದದ ಮೂಲಕವೇ ಇಂತಹ ಸಮಸ್ಯೆಗಳಿಗೆ ಪರಿಹಾರ ಕಂಡುಕೊಳ್ಳಲು ಸಾಧ್ಯ ಎನ್ನುವುದನ್ನು ಈ ದೃಷ್ಟಾಂತ ಸಾಬೀತು ಮಾಡಿದೆ. ಮಕ್ಕಳಿಗಿರುವ ಅಗತ್ಯತೆಗಳನ್ನು ತಿಳಿದುಕೊಂಡು ಅದನ್ನು ಪೂರೈಸುವಲ್ಲಿ ಎಲ್ಲರ ಶ್ರಮ ಅತ್ಯಗತ್ಯ ಎಂಬುದನ್ನು ಮನಗಂಡು ಕಾರ್ಯ ಪ್ರವೃತ್ತರಾಗಬೇಕು.

## ವಿಭಿನ್ನ ಮನೋಸ್ಥಿತಿಯನ್ನು ಏಕತೆಗೆ ತರಲು ಶಾಲೆಯಲ್ಲೂ ಸಾಧ್ಯವಿದೆಯಲ್ಲವೇ?

**ಸರಕಾರಿ ಕಿರಿಯ ಪ್ರಾಥಮಿಕ ಶಾಲೆ ಹೆಕ್ಕಡ್ಕ :**

ಉಡುಪಿ ಜಿಲ್ಲೆಯ ಕಾರ್ಕಳ ತಾಲೂಕಿಗೆ ಸೇರಿದ ಎರ್ಲಪಾಡಿ ಗ್ರಾಮ ಪಂಚಾಯತ್ ವ್ಯಾಪ್ತಿಯಲ್ಲಿರುವ ಒಂದು ಪುಟ್ಟ ಹಳ್ಳಿ ಗೋವಿಂದೂರು. ಇಲ್ಲಿರುವ ಏಕೈಕ ಶಾಲೆ ಸರಕಾರಿ ಕಿರಿಯ ಪ್ರಾಥಮಿಕ ಶಾಲೆ ಹೆಕ್ಕಡ್ಕ. ಇಲ್ಲಿ 1 ರಿಂದ 5 ನೇ ತರಗತಿಯವರೆಗೆ ಒಟ್ಟು 5 ತರಗತಿಗಳಿದ್ದರೂ, ಈ ಶಾಲೆಗೆ ಇರುವುದು ಕೇವಲ ಎರಡೇ ಕೋಣೆ. ಇಲ್ಲಿ ಒಟ್ಟು 17 ಮಕ್ಕಳು ಅಭ್ಯಸಿಸುತ್ತಿದ್ದು, ಕೇವಲ ಒಬ್ಬರು ಶಿಕ್ಷಕಿ ಹಾಗೂ ಒಬ್ಬರು ಅತಿಥಿ ಶಿಕ್ಷಕರು ಇದ್ದಾರೆ.

**ಹಿಂದಿನ ಪರಿಸ್ಥಿತಿಯ ವಿವರಣೆ :**

ಸರಕಾರದಿಂದ ಜಾರಿಯಾದ ಕ್ಷೀರಭಾಗ್ಯ ಯೋಜನೆಯು ಈ ಶಾಲೆಯಲ್ಲೂ ಆರಂಭಗೊಂಡಿತು. ವಿತರಿಸಿದ ಹಾಲನ್ನು ಮಕ್ಕಳು ಕುಡಿಯುತ್ತಿರಲಿಲ್ಲ. ಇದಕ್ಕೆ

ಕಾರಣಗಳನ್ನು ಕೇಳಿದಾಗ "ಹಾಲು ಕುಡಿದರೆ ಕಫ ಆಗುತ್ತದೆ, ನಾವು ಮನೆಯಲ್ಲಿ ಹಾಲು ಕುಡಿಯುವುದಿಲ್ಲ, ಈ ಹಾಲು ಕುಡಿದರೆ ಹೊಟ್ಟೆನೋವು" ಎಂಬುದಾಗಿ ಮಕ್ಕಳು ಹೇಳುತ್ತಿದ್ದರು. ಇದರಿಂದಾಗಿ ಶಿಕ್ಷಕಿಗೆ ಮಕ್ಕಳು ಹಾಲು ಕುಡಿಯುವಂತೆ ಏನು ಮಾಡುವುದೆಂಬುದೇ ಚಿಂತೆಯಾಯಿತು.

**ಪರಿಸ್ಥಿತಿಯ ಸುಧಾರಣೆಗೆ ನಡೆಸಿದ ಪ್ರಯತ್ನಗಳು:**

ಮಕ್ಕಳು ಹಾಲು ಕುಡಿಯುವಂತೆ ಮಾಡಲು ಬಹಳಷ್ಟು ಪ್ರಯತ್ನಗಳನ್ನು ಮಾಡಿದರು. ಆದರೂ ಮಕ್ಕಳು ಕುಡಿಯಲೇ ಇಲ್ಲ. ಶಿಕ್ಷಕರೂ ಮಕ್ಕಳ ಎದುರಿಗೆ ಕುಡಿದು ತೋರಿಸಿದರು. ಆದರೂ ಕುಡಿಯಲಿಲ್ಲ. ಮುಖ್ಯ ಶಿಕ್ಷಕರು 'ಕ್ಷೀರ ಭಾಗ್ಯ' ಯೋಜನೆ ಮಕ್ಕಳ ಸಲುವಾಗೆ ಇದೆ. ನಮಗೆ ಸರಕಾರದಿಂದ ಹಾಲಿನ ಪೌಡರ್ ಸರಬರಾಜಾಗುತ್ತದೆ. ಅಡುಗೆಯವರು ಅದನ್ನು ನೀರಿನೊಂದಿಗೆ ಸೇರಿಸಿ, ಚೆನ್ನಾಗಿ ಕಾಯಿಸಿ, ಸಕ್ಕರೆ ಬೆರೆಸಿ ಕೊಡುತ್ತಾರೆ. ಇದು ಮಕ್ಕಳಿಗೆ ಒಳ್ಳೆಯದು, ಅವರ ಆರೋಗ್ಯ ಉತ್ತಮಗೊಳ್ಳುತ್ತದೆ ಎಂದು ಪೋಷಕರಿಗೆ ಮನವರಿಕೆ ಮಾಡಿದರು. ಆದರೂ ಸ್ವಲ್ಪ ಮಕ್ಕಳು ಹಾಲು ಕುಡಿಯುತ್ತಿದ್ದು, ಉಳಿದ ಮಕ್ಕಳು ಕುಡಿಯಲು ಕೇಳುತ್ತಿರಲಿಲ್ಲ.

**ಎದುರಿಸಿದ ಸವಾಲುಗಳು:**

ಮಕ್ಕಳ ಪೋಷಕರಲ್ಲಿ ಈ ಸಮಸ್ಯೆಯನ್ನು ಇಟ್ಟಾಗ ನಮ್ಮ ಮಕ್ಕಳು ಮನೆಯಲ್ಲಿ ಕೂಡ ಹಾಲು ಕುಡಿಯುವುದಿಲ್ಲ, ಬರೀ ಚಹಾ ಕುಡಿಯುತ್ತಾರೆಂದು ವಿಭಿನ್ನ ರೀತಿಯಲ್ಲಿ ಪ್ರತಿಕ್ರಿಯಿಸಿದರು. ಪೋಷಕರೇ ಈ ರೀತಿ ಹೇಳಿದಾಗ ಶಿಕ್ಷಕರಿಗೆ ಏನು ಮಾಡಬೇಕೆಂದು ತೋಚಲಿಲ್ಲ.

**ಸವಾಲುಗಳಿಂದ ಹೊರಗೆ ಬರಲು ರೂಪಿಸಿದ ತಂತ್ರ :**

ಕೊನೆಗೆ ಶಿಕ್ಷಕಿಯೇ ಯೋಚನೆ ಮಾಡಿ ಒಂದು ದಿನ ಶಾಲೆಗೆ ಬರುವಾಗ ಕಾಫಿ ಹುಡಿ ಮತ್ತು ಮಾಲ್ಟ್ ಹುಡಿಯನ್ನು ತಂದರು. ಶಿಕ್ಷಕಿಯೇ ಅಡುಗೆ ಕೋಣೆಗೆ ಹೋಗಿ ಹಾಲನ್ನು ಕಾಯಿಸಿ ಅದಕ್ಕೆ ಕಾಫಿ ಹುಡಿ ಬೆರೆಸಿ ಮಕ್ಕಳಿಗೆ ನೀಡಿದರು, ಈ ಬರೀ ಹಾಲನ್ನು ನೀಡದೇ ಕಾಫಿ ಅಥವಾ ಮಾಲ್ಟ್‌ನ್ನು ಮಾಡಿ ಮಕ್ಕಳಿಗೆ ನೀಡುವುದೆಂದು ತೀರ್ಮಾನಿಸಿದರು.

**ಪ್ರಸ್ತುತ ಸ್ಥಿತಿಗತಿ/ ಬದಲಾವಣೆ:**

ಪ್ರಸ್ತುತ ಎಲ್ಲಾ ಮಕ್ಕಳು ಅದೇ ಹಾಲನ್ನು ಕಾಫಿ ಅಥವಾ ಮಾಲ್ಟ್‌ನ ರೂಪದಲ್ಲಿ ಸಂತೋಷದಿಂದ ಕುಡಿಯುತ್ತಿದ್ದಾರೆ.

**ಭಾವನೆಗಳು/ ಅನಿಸಿಕೆ:**

ಶಾಲೆಗೆ ಬರುವ ಮಕ್ಕಳು ವಿಭಿನ್ನ ಹಿನ್ನೆಲೆಯವರಾಗಿರುತ್ತಾರೆ. ವಿಭಿನ್ನ ಹಿನ್ನೆಲೆಯಿಂದ ಬಂದ ಮಕ್ಕಳಿಗೆ ವಿಭಿನ್ನ ಕಲಿಕೋಪಾಯಗಳನ್ನು ಹುಡುಕಬೇಕಾಗುತ್ತದೆ. ಪ್ರಸ್ತುತ ಈ ದೃಷ್ಟಾಂತದಲ್ಲಿ ಮಕ್ಕಳು ಹಾಲು ಕುಡಿಯುವಂತೆ ಮಾಡಲು ಶಿಕ್ಷಕರು ಹಂತ ಹಂತವಾಗಿ ಕಂಡುಕೊಂಡ ಮಾರ್ಗೋಪಾಯಗಳನ್ನು ಇತರೆ ವಿಷಯಗಳಿಗೂ ವಿಸ್ತರಿಸಿದರೆ ಏನೆಲ್ಲ ಆಗಬಹುದು? ಈ ರೀತಿ ಆಲೋಚನೆ ಮಾಡಿದಲ್ಲಿ ಎಲ್ಲಾ ಮಕ್ಕಳಿಗೂ ಅವರ ವಿಭಿನ್ನತೆಗೆ ಅನುಸಾರವಾಗಿ ಕಲಿಸುವ, ಕಲಿಯುವ ಪರ್ಯಾಯಗಳನ್ನು ಸೃಷ್ಟಿಸಬಹುದಾಗಿದೆ.

## ಮಾದರಿ ಶಾಲೆಯತ್ತ ಕೋಟೆಬಾಗಿಲು ಶಾಲೆ

**ಸರಕಾರಿ ಕಿರಿಯ ಪ್ರಾಥಮಿಕ ಶಾಲೆ ಕೋಟೆಬಾಗಿಲು :**

ಉಡುಪಿ ಜಿಲ್ಲೆಯ ಕುಂದಾಪುರ ತಾಲೂಕಿನ ಒಂದು ಗ್ರಾಮ ತಲ್ಲೂರು. ಈ ಗ್ರಾಮದಲ್ಲಿ ಅತ್ಯಂತ ಹಿಂದುಳಿದ ಹಾಗೂ ಶಿಕ್ಷಣ ವಂಚಿತ ಪ್ರದೇಶವೇ ಕೋಟೆಬಾಗಿಲು. ಇಲ್ಲಿ ಸರಿಸುಮಾರು 150 ಮನೆಗಳಿದ್ದು ಅದರಲ್ಲಿ ಹೆಚ್ಚಿನ ಮನೆಗಳು ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಕ್ಕೆ ಸೇರಿದವು. ಈ ಪರಿಸರದಲ್ಲಿ 1996ರಲ್ಲಿ ಸರಕಾರಿ ಕಿರಿಯ ಪ್ರಾಥಮಿಕ ಶಾಲೆ–ಕೋಟೆಬಾಗಿಲನ್ನು ಸ್ಥಾಪಿಸಲಾಯಿತು. ಹಿಂದೆ ಸುಮಾರು 60 ರಿಂದ 65 ವಿದ್ಯಾರ್ಥಿಗಳು ವಿದ್ಯಾರ್ಜನೆಯನ್ನು ಮಾಡುತ್ತಿದ್ದರು. ಕ್ರಮೇಣ ಮೂಲಭೂತ ಸೌಕರ್ಯ ಹಾಗೂ ಮಕ್ಕಳ ಸಂಖ್ಯೆ ಕ್ಷೀಣಿಸುತ್ತಾ ಬಂತು.

**ಹಿಂದೆ ಶಾಲೆಯ ಚಿತ್ರಣ :**

ಪಡಿ ಸಂಸ್ಥೆಯು ಮಗುಸ್ನೇಹಿ ಶಾಲೆಯನ್ನು ಆಯ್ಕೆ ಮಾಡಿಕೊಂಡ ಸಂದರ್ಭದಲ್ಲಿ ಶಾಲೆಯ ಪರಿಸ್ಥಿತಿಯು ಹೆಂಚಿನ, ಪಕ್ಕಾಸಿನ ಗೆದ್ದಲು ಹಿಡಿದ ತುಂಡುಗಳು ಮಕ್ಕಳ ಬಿಸಿಯೂಟದ ತಟ್ಟೆಯಲ್ಲಿ ಬೀಳುತ್ತಿದ್ದು, ಮಳೆಗಾಲದಲ್ಲಿ ಶಾಲೆಯೊಳಗೆ ಸೋರುತ್ತಿದ್ದು, ಬಣ್ಣ ಮಾಸಿದ ಗೋಡೆಗಳು, ಸಂತಸದಾಯಕ ಕಲಿಕೆಯಿಲ್ಲದಿರುವುದು, ಗೈರುಹಾಜರಾದ ಮಕ್ಕಳ ಸಂಖ್ಯೆ ಹೆಚ್ಚು, ಶಾಲೆಯ ಆವರಣದಲ್ಲಿ ಬಾಟಲುಗಳ ರಾಶಿ, ಗುಟುಕ ಹಾಗೂ ಧೂಮಪಾನದ ಪ್ಯಾಕೇಟುಗಳ ರಾಶಿ, ಶಾಲೆಯ ಕಡೆ ಮುಖ ಮಾಡದೇ ಇರುವ ಜನಸಮುದಾಯ ಮತ್ತು ಜನಪ್ರತಿನಿಧಿಗಳು ಈ ಎಲ್ಲಾ ಸಮಸ್ಯೆಗಳನ್ನು ಮಗ್ಗುಲಲ್ಲಿ ಕಟ್ಟಿಕೊಂಡು 25 ವಿದ್ಯಾರ್ಥಿಗಳು ಹಾಗೂ 3 ಶಿಕ್ಷಕರು ಇದ್ದರು. ಶಿಕ್ಷಣ ಇಲಾಖೆ ಅನುಮತಿಯಿಲ್ಲದೆ ಶಾಲೆಗೆ ಪ್ರವೇಶವನ್ನು ನೀಡವುದೇ ಕಷ್ಟಕರವಾಗಿದ್ದು.

ಈ ಸಂದರ್ಭದಲ್ಲಿ ಜನಪ್ರತಿನಿಧಿಗಳ ಸಹಾಯದಿಂದ ಶಾಲೆಗೆ ಒಳಪ್ರವೇಶಿಸಲು ಸಾಧ್ಯವಾದದ್ದು.

**ಪರಿಸ್ಥಿತಿಯ ಸುಧಾರಣೆಗೆ ನಡೆಸಿದ ಪ್ರಯತ್ನಗಳು:**

ಪಡಿ ಸಂಸ್ಥೆಯು ಶಿಕ್ಷಕರ ಜೊತೆ ಹಾಗೂ ಪಂಚಾಯತ್‌ನವರಿಗೆ ನಿರಂತರ ತರಬೇತಿ ಹಾಗೂ ಅವರಲ್ಲಿ ಶೈಕ್ಷಣಿಕ ವಿಷಯಗಳನ್ನು ಚರ್ಚಿಸುತ್ತಾ, ಶಿಕ್ಷಣದ ಮಹತ್ವವನ್ನು ಅವರಿಗೆ ತಿಳಿಸುತ್ತಾ, ಮಗು ಸ್ನೇಹಿ ಶಾಲೆಯ ಪರಿಸ್ಥಿತಿಯನ್ನು ಅರ್ಥೈಸುವಲ್ಲಿ ಸಫಲರಾದೆವು. ಶಾಲೆಯಿಂದ ಹೊರಗುಳಿದ ಮಕ್ಕಳನ್ನು ಮತ್ತೆ ಶಾಲೆಗೆ ಕರೆತರಲು ಜನಸಮುದಾಯ ಹಾಗೂ ಪಂಚಾಯತ್ ಸದಸ್ಯರನ್ನು ಸಜ್ಜುಗೊಳಿಸಿದೆವು. ಈ ಎಲ್ಲಾ ಪ್ರಕ್ರಿಯೆ ನಡೆದಾಗ ಶಿಕ್ಷಕರ ಬದಲಾವಣೆಯಾಗಿ ಹೊಸ ಶಿಕ್ಷಕರ ಆಗಮನವೋ.... ನಮಗೆ ಹಸಿದ ಹೊಟ್ಟೆಗೆ ಅಮೃತ ಸಿಕ್ಕಂತಾಯಿತು.

ಶಿಕ್ಷಕರು ಸಂಸ್ಥೆಯ ಸಂಪೂರ್ಣ ಮಾರ್ಗದರ್ಶನದಲ್ಲಿ ಊರಿನ ಯುವಕ ಸಂಘಗಳ ಸೇರ್ಪಡೆ, ಶಾಲಾಭಿವೃದ್ಧಿ ಹಾಗೂ ಮೇಲುಸ್ತುವಾರಿ ಸಮಿತಿ ಹಾಗೂ ಪೋಷಕ ಪ್ರತಿನಿಧಿಗಳು ಸೇರಿಕೊಂಡು ಶಾಲಾ ಆವರಣವನ್ನೇ ಬದಲಾಯಿಸಲಾಯಿತು. ಶಾಲಾಭಿವೃದ್ಧಿ ವತಿಯಿಂದ ತಾಲೂಕು ಪಂಚಾಯತ್‌ಗೆ ಮನವಿ ಮಾಡಿ ರೂ. 40,000/– ಅನುದಾನವನ್ನು ಪಡೆದು, ಮಾಡು ರಿಪೇರಿ ಮಾಡಿ, ದಾನಿಗಳ ಸಹಕಾರದಿಂದ ಗೋಡೆಗಳಿಗೆ ಬಣ್ಣ ಹಚ್ಚಿ ತೈಲ ಚಿತ್ರಗಳನ್ನು ಬಿಡಿಸಿ ಜನಸಮುದಾಯವು ಶಾಲೆಯಲ್ಲಿ ಶ್ರಮಿಕರಾಗಿ ದುಡಿದು, ಶಾಲೆಯನ್ನು ಆಕರ್ಷಣೆಗೊಳಿಸಿರುವುದಷ್ಟೇ ಅಲ್ಲದೇ ಮಕ್ಕಳ ಜ್ಞಾನಭಂಡಾರವನ್ನು ಹೆಚ್ಚಿಸುವ ಸಲುವಾಗಿ ವಾಚನಾಲಯವನ್ನು ಕೂಡ ಮಗುಸ್ನೇಹಿಯಾಗಿ ನಿರ್ಮಿಸಲಾಯಿತು. ಅಷ್ಟೇ ಅಲ್ಲದೇ ಮಕ್ಕಳ ಸಂಖ್ಯೆ ಕೂಡ 35ಕ್ಕೇರಿದೆ. ಪಠ್ಯೇತರ ಚಟುವಟಿಕೆಗಳನ್ನು ಕಾಣದೇ ಇರುವ ಈ ಮಕ್ಕಳನ್ನು ಸೇರಿಸಿಕೊಂಡು ಯಕ್ಷಗಾನ ಪ್ರದರ್ಶನವನ್ನು ಕೂಡ ಮಾಡಲಾಗಿದೆ.

ಈ ಎಲ್ಲಾ ವಿಚಾರಗಳು ಜನಸಮುದಾಯದಲ್ಲಿ ಮಹಾ ಸಂಚಲನವನ್ನು ಮೂಡಿಸಿತು. ಜನಸಮುದಾಯದ ಭಾಗವಹಿಸುವಿಕೆಯೇ ಶಾಲಾಭಿವೃದ್ಧಿಗೆ ವರದಾನ ಎಂಬುದಕ್ಕೆ ಕೋಟೆಬಾಗಿಲು ಶಾಲೆಯೇ ಒಂದು ನಿದರ್ಶನವಾಯಿತು.

# ಶಾಲೆಯಲ್ಲೊಂದು ಮಾದರಿ ಮೀನಾ ಕ್ಲಬ್

ಉಡುಪಿ ಜಿಲ್ಲೆಯಲ್ಲಿರುವ ಒಂದು ಗ್ರಾಮ ತೆಂಕನಿಡಿಯೂರು. ಇಲ್ಲಿ 10,342 ಜನಸಂಖ್ಯೆ ಇದ್ದು ಶೈಕ್ಷಣಿಕವಾಗಿ ಬಹಳಷ್ಟು ಮುಂದೆ ಇರುವ ಗ್ರಾಮವಾಗಿದೆ. ಅಂಗನವಾಡಿ ಕೇಂದ್ರದಿಂದ ಹಿಡಿದು ಸ್ನಾತಕೋತ್ತರ ಪದವಿಯವರೆಗೆ ಶೈಕ್ಷಣಿಕ ವ್ಯವಸ್ಥೆಯನ್ನು ಹೊಂದಿದೆ. ಇಂತಹ ಗ್ರಾಮದಲ್ಲಿ ಸರಕಾರಿ ಮಾದರಿ ಹಿರಿಯ ಪ್ರಾಥಮಿಕ ಶಾಲೆ ಗರಡಿಮಜಲು ಒಂದು. ಈ ಶಾಲೆಯಲ್ಲಿ ಒಬ್ಬರು ಮುಖ್ಯ ಶಿಕ್ಷಕರು, 5 ಸಹಶಿಕ್ಷಕರು, 91 ವಿದ್ಯಾರ್ಥಿಗಳು ವ್ಯಾಸಂಗದಲ್ಲಿ ತೊಡಗಿರುತ್ತಾರೆ.

ಪಡಿ ಸಂಸ್ಥೆಯು ಮಗುಸ್ನೇಹಿ ಶಾಲಾ ಪರಿಕಲ್ಪನೆಯಲ್ಲಿ ಕಾರ್ಯ ನಿರ್ವಹಿಸುವ ಆಶಯವನ್ನು ಹೊಂದಿ, ಆ ಶಾಲೆಗೆ ಭೇಟಿ ನೀಡಿದಾಗ ಸಲಹಾಪೆಟ್ಟಿಗೆ, ಮೀನಾ ಫಲಕ ನಮ್ಮನ್ನಾಕರ್ಷಿಸಿದವು. ಆಗ ಈ ಶಾಲೆಯು ಮಗುಸ್ನೇಹಿ ಪರಿಕಲ್ಪನೆಗೆ ಪೂರಕವಾಗಿದೆ ಎಂದೆನಿಸಿ, ಮುಖ್ಯ ಶಿಕ್ಷಕರಲ್ಲಿ ಮೀನಾ ಕುರಿತು ಚರ್ಚಿಸಿದಾಗ ಮೀನಾ ಕ್ಲಬ್ ರಚನೆಯಾಗಿರುವುದು ತಿಳಿಸಿದರು. ಆದರೆ ಇದರ ವಾಸ್ತವಿಕತೆಯನ್ನು ತಿಳಿಯಲು ಹೆಚ್ಚು ಸಮಯ ಬೇಕಾಗಿರಲಿಲ್ಲ. ಇದರ ಬಗ್ಗೆ ವಿದ್ಯಾರ್ಥಿಗಳಲ್ಲಿ ವಿಚಾರಿಸಿದಾಗ ವಿದ್ಯಾರ್ಥಿಗಳಿಗೆ ತಾವು ಮೀನಾ ಕ್ಲಬ್‌ನ ಸದಸ್ಯರೆಂಬುದೇ ತಿಳಿದಿರಲಿಲ್ಲ. ಆಗ ಇದು ಕೇವಲ ನಾಮಕಾವಸ್ಥೆಯಲ್ಲಿರುವುದನ್ನು ಅರಿತುಕೊಂಡು ಮೀನಾ ನಿರ್ಣಯ ಪುಸ್ತಕವನ್ನು ಗಮನಿಸಿದಾಗ ಈ ವಿಚಾರ ಸತ್ಯ ಎಂದು ಗೋಚರಿಸಿತು. ಶಾಲೆಗೆ ನಿರಂತರ ಭೇಟಿಯನ್ನು ನೀಡಲು ಇಲಾಖೆಯ ಅನುಮತಿ ಇಲ್ಲದಿರುವುದರಿಂದ ಮಗುಸ್ನೇಹಿ ಶಾಲಾ ಪರಿಕಲ್ಪನೆಯ ಕಾರ್ಯಚಟುವಟಿಕೆಗೆ ಅವಕಾಶ ಸಿಗದೆ ಸವಾಲನ್ನು ಎದುರಿಸುವಂತಾಯಿತು.

ಆ ಸಂದರ್ಭದಲ್ಲಿ ಪಂಚಾಯತ್ ಸದಸ್ಯರಿಗೆ ಮಗುಸ್ನೇಹಿ ಶಾಲೆ ಮತ್ತು ಪಂಚಾಯತ್ ಪರಿಕಲ್ಪನೆಯನ್ನು ವಿವರಿಸುವ ಸಲುವಾಗಿ ಸಮಾಲೋಚನಾ ಸಭೆಯನ್ನು ನಡೆಸಲಾಯಿತು. ಪಂಚಾಯತ್, ಜನಸಮುದಾಯ, ಶಿಕ್ಷಕರಿಗೆ ಮಗುಸ್ನೇಹಿ ಪರಿಕಲ್ಪನೆಯ ಕುರಿತು ಅರ್ಥೈಸುವಲ್ಲಿ ಯಶಸ್ವಿಯಾದೆವು. ಪಂಚಾಯತ್‌ಗೆ ತಮ್ಮ ಜವಾಬ್ದಾರಿಯನ್ನು ತಿಳಿಸುತ್ತಾ ಪಂಚಾಯತ್ ಮುಖಾಂತರವಾಗಿ ಶಾಲೆಗಳಲ್ಲಿ ಶಿಕ್ಷಕರನ್ನೊಡಗೂಡಿ ಮೀನಾ ಕ್ಲಬ್ ಹಾಗೂ ಮಕ್ಕಳ ಹಕ್ಕುಗಳ ಕ್ಲಬ್‌ನ್ನು ಕ್ರಿಯಾಶೀಲಗೊಳಿಸಲು ಪ್ರಯತ್ನಿಸಿದೆವು. ಮೀನಾ ಕ್ಲಬ್‌ನ ಸಭೆಗಳಲ್ಲಿ ವಿದ್ಯಾರ್ಥಿಗಳನ್ನು ಮಾತನಾಡಿಸಿದಾಗ ಅವರೆಲ್ಲರೂ ಬಹಳ ಹಿಂಜರಿಕೆಯ ಸ್ವಭಾವದಿಂದ ಕೂಡಿರುವುದು ಕಂಡು ಬಂದು ಮೀನಾ ಸಾಕ್ಷ್ಯಚಿತ್ರ ಪ್ರದರ್ಶಿಸಿ ಮಾಹಿತಿ ನೀಡಿದ ಫಲವಾಗಿ ವಿದ್ಯಾರ್ಥಿಗಳಲ್ಲಿ ಆಸಕ್ತಿ, ಭಾಗವಹಿಸುವ ಮನೋಧೈರ್ಯ ದಿನದಿಂದ ದಿನಕ್ಕೆ ವೃದ್ಧಿಸಲ್ಪಟ್ಟಿತು.

ಮೀನಾ ಸಭೆಯಲ್ಲಿ ಶಿಕ್ಷಣ ಸಂಪನ್ಮೂಲ ಕೇಂದ್ರದ ಸಂಪನ್ಮೂಲ ವ್ಯಕ್ತಿಗಳು ಪೋಕ್ಸೋ, ಶಾಲಾ ಸ್ವಚ್ಛತೆ, ಲಿಂಗ ತಾರತಮ್ಯತೆ, ಸುರಕ್ಷಿತ ಸ್ಥಳ ಮತ್ತು ಅಸುರಕ್ಷಿತ ಸ್ಥಳ, ಮಕ್ಕಳ ರಕ್ಷಣಾ ವ್ಯವಸ್ಥೆ ಮಕ್ಕಳ ಹಕ್ಕುಗಳು, ಪ್ಲಾಸ್ಟಿಕ್ ನಿಷೇಧ, ಹದಿಹರೆಯದ ಸಮಸ್ಯೆ ಮುಂತಾದವುಗಳ ಬಗ್ಗೆ ಮಾಹಿತಿಯನ್ನು ನೀಡಿರುವುದರಿಂದ ವಿದ್ಯಾರ್ಥಿಗಳಲ್ಲಿ ಆಸಕ್ತಿ ಹೆಚ್ಚಾಗಿ ಮುಕ್ತವಾಗಿ ಮಾತನಾಡಲು ಪ್ರಾರಂಭಿಸಿ ನಿರೀಕ್ಷೆಗೆ ಮೀರಿದ ಬದಲಾವಣೆಯನ್ನು ಕಾಣುವಂತಾಯಿತು. ಮೀನಾ ಕ್ಲಬ್‌ನ ಉದ್ದೇಶವನ್ನು ಅರಿತ ಸದಸ್ಯರು, ಪದೇ ಪದೇ ಶಾಲೆಗೆ ಗೈರು ಹಾಜರಾಗುತ್ತಿರುವ ತಮ್ಮ ಸಹಪಾಠಿಯ ಬಗ್ಗೆ ಶಿಕ್ಷಕರ ಜೊತೆ ಚರ್ಚಿಸಿ, ಆ ಮಗುವಿನ ಮನೆಗೆ ಭೇಟಿ ಮಾಡಿ ಶಿಕ್ಷಣದ ಮಹತ್ವವನ್ನು ಅವರ ಪೋಷಕರಿಗೆ ಮನವರಿಕೆ ಮಾಡಿ ಮರಳಿ ಶಾಲೆಗೆ ಕರೆ ತರುವಲ್ಲಿ ಯಶಸ್ವಿಯಾದರು.

ಇಂದು ಈ ಕ್ಲಬ್ ಕ್ರಿಯಾಯೋಜನೆ ಮಾಡುವ ಮುಖಾಂತರ ಕಾರ್ಯಕ್ರಮವನ್ನು ಹಮ್ಮಿಕೊಂಡು ನಿರಂತರವಾಗಿ ಸಭೆಗಳನ್ನು ಮಾಡಿ ತಂಡದ ಸದಸ್ಯರೇ ಆ ಸಭೆಯ ನಿರ್ಣಯವನ್ನು ಬರೆಯುತ್ತಿರುವುದರ ಜೊತೆಗೆ ಮಕ್ಕಳಲ್ಲಿ ಆತ್ಮವಿಶ್ವಾಸ, ಧೈರ್ಯ, ವಿಷಯದ ಜ್ಞಾನ ಹೆಚ್ಚಾಗಿರುವುದು ಒಂದು ಗಣನೀಯ ಬದಲಾವಣೆಯಾಗಿ, ಅಭಿವೃದ್ಧಿಯ ಪಥದತ್ತ ಸಾಗುತ್ತಿದೆ.

## ಶಿಕ್ಷಣ ವಂಚಿತ ಮಗುವಿಗೆ ನೆರವಾಯಿತು ಮೀನಾ ಕ್ಲಬ್

ಕಾರ್ಕಳ ತಾಲೂಕಿನ ಬೈಲೂರು ಗ್ರಾಮದ ಒಂದು ಪುಟ್ಟ ಹಳ್ಳಿ ರಂಗನಪಲ್ಕೆಯ ಎಲಿಯಾಳ. ಈ ಹಳ್ಳಿಯಲ್ಲಿರುವ ಮುಗ್ಧ ಮಕ್ಕಳಿಗಾಗಿ 1946ರಲ್ಲಿ ನಿರ್ಮಿಸಿರುವ ಶಾಲೆ ಸರಕಾರಿ ಹಿರಿಯ ಪ್ರಾಥಮಿಕ ಶಾಲೆ ಎಲಿಯಾಳ. ಈ ಶಾಲೆಯಲ್ಲಿ ಒಟ್ಟು 54 ಮಕ್ಕಳು (ಗಂಡು 32 ಹೆಣ್ಣು 22) ವಿದ್ಯಾಭ್ಯಾಸವನ್ನು ಮಾಡುತ್ತಿದ್ದು ಮಕ್ಕಳ ಕಲಿಕೆಯು ಸಂತಸದಾಯಕವಾಗಿತ್ತು.

ಸರಕಾರವು ಪ್ರತೀ ಶಾಲೆಯಲ್ಲಿ ಮೀನಾ ಕ್ಲಬ್ ಇರಬೇಕೆಂದು ಸುತ್ತೋಲೆಯನ್ನು ಹೊರಡಿಸಿತು. ಅದರಂತೆ ಎಲ್ಲಾ ಶಾಲೆಗಳಲ್ಲಿ ರಚನೆಯಾದ ಹಾಗೆ ಸರಕಾರಿ ಹಿರಿಯ ಪ್ರಾಥಮಿಕ ಶಾಲೆ ಎಲಿಯಾಳದಲ್ಲೂ ಕ್ಲಬ್ ರಚನೆಯಾಯಿತು. ಆದರೆ ಬೇಸರದ ವಿಷಯವೆಂದರೆ ಇದು ಬರೀ ಹೆಸರಿಗಷ್ಟೇ ದಾಖಲೆಯಲ್ಲಿತ್ತು,

ಪಡಿ ಯೋಜನೆಯು ಮಗುಸ್ನೇಹಿ ಶಾಲಾ ಪರಿಕಲ್ಪನೆಯಲ್ಲಿ ಕಾರ್ಯನಿರ್ವಹಿಸಲು ತೊಡಗಿದಾಗ ಈ ವಿಚಾರವನ್ನು ತಿಳಿದು, ಮೀನಾ ತಂಡದ ಕೆಲಸ ಕಾರ್ಯಗಳು ಹೆಚ್ಚು ಕ್ರಿಯಾಶೀಲವಾಗುವಂತೆ ಮಾಡಬೇಕೆಂದು ಯೋಚಿಸಲಾಯಿತು. ಮೊದಲು

ಈ ಕಾರ್ಯ ಮಾಡಲು ಅನೇಕ ಸವಾಲುಗಳು ಉಂಟಾಯಿತು. ಕಾರಣ ಶಾಲೆಗೆ ಪ್ರವೇಶಿಸಲು ಇಲಾಖೆಯ ಅನುಮತಿ ಇರಲಿಲ್ಲ. ಇಲಾಖೆಯ ಅನುಮತಿ ಇಲ್ಲದೆ ಶಾಲೆಗೆ ಪ್ರವೇಶಿಸಲು ಕಷ್ಟವಾದ ಕಾರಣ ಮೀನಾ ಕ್ಲಬ್ ಅನ್ನು ಹೇಗೆ ಕ್ರಿಯಾಶೀಲಗೊಳಿಸುವುದೆಂದು ತೋಚದೆ, ಸ್ಥಳೀಯ ಸರ್ಕಾರವಾದ ಪಂಚಾಯತ್‌ನ ಹೆಸರೇ ಇದಕ್ಕೆ ಸೂಕ್ತ ಎಂದರಿತು, ಅದರ ಮೂಲಕ ಕೆಲಸ ಮಾಡಲು ಸ್ವಲ್ಪ ಸಹಕಾರಿಯಾಯಿತು. ಆದರೆ ಇಲಾಖೆಯ ಅನುಮತಿಯೇ ಮುಖ್ಯವಾಗಿತ್ತು.

ಆದರೂ ಯೋಚಿಸದೇ ಶಿಕ್ಷಕರ ಮನಸ್ಸನ್ನು ಸ್ವಲ್ಪಮಟ್ಟಿಗೆ ಬದಲಾಯಿಸಿ, ಮೀನಾ ತಂಡವು ಸುತ್ತೋಲೆ ಪ್ರಕಾರ ರಚನೆ ಮಾಡುವಂತೆ, ಕ್ರಿಯಾಯೋಜನೆ ತಯಾರಿಸಿ ನಿರಂತರ ಸಭೆ ಮಾಡುವಂತೆ, ಶಿಕ್ಷಕರನ್ನು ಪ್ರೇರೇಪಿಸಲಾಯಿತು. ಅದರಂತೆ ಮೀನಾ ತಂಡವು ಸುತ್ತೋಲೆಯ ಪ್ರಕಾರ ಈ ಶಾಲೆಯಲ್ಲಿ ಕ್ಲಬ್‌ನ ರಚನೆ ಮಾಡಿ ಕ್ರಿಯಾಯೋಜನೆಯನ್ನು ಮಾಡಲಾಯಿತು. ಇದರ ಸಭೆಗಳನ್ನು ನಿರಂತರವಾಗಿ ಮಕ್ಕಳೇ ನಡೆಸಿಕೊಂಡು, ಆ ಸಭೆಯ ನಿರ್ಣಯಗಳನ್ನು ಮಕ್ಕಳೇ ಬರೆಯುವಂತೆ ಮಾಡಲಾಯಿತು.

ಈ ಸಭೆಗಳಲ್ಲಿ ದೀರ್ಘ ಗೈರುಹಾಜರಾಗುವ ಮಕ್ಕಳ ಕುರಿತು ಚರ್ಚಿಸಿ, ಶಿಕ್ಷಕರ ಜೊತೆ ಈ ತಂಡದ ಸದಸ್ಯರು ಗೈರು ಹಾಜರಾದ ಮಗುವಿನ ಮನೆಗೆ ಭೇಟಿ ನೀಡಿ ಆ ಮಗುವಿಗೆ ಹಾಗೂ ಪೋಷಕರಿಗೆ ಶಿಕ್ಷಣದ ಮಹತ್ವದ ಬಗ್ಗೆ ತಿಳಿಸಿ ಅವರ ಮನವೊಲಿಸಿ, ಮರಳಿ ಶಾಲೆಗೆ ಕರೆತರುವ ಕೆಲಸವನ್ನು ಈ ಎಲಿಯಾಳ ಶಾಲೆಯ ಮೀನಾ ತಂಡದ ಸದಸ್ಯರು ಮಾಡಿರುತ್ತಾರೆ. ಅಷ್ಟೇ ಅಲ್ಲದೇ ಈ ಕ್ಲಬ್‌ನ ಸದಸ್ಯರಿಗೆ ಹಲವಾರು ಮಾಹಿತಿ ಕಾರ್ಯಕ್ರಮಗಳನ್ನು ನೀಡಲಾಗಿದೆ. ಅದರಲ್ಲಿ ಮುಖ್ಯವಾಗಿ ಪೋಕ್ಸೋ, ಪ್ರಥಮ ಚಿಕಿತ್ಸಾ ತರಬೇತಿ ಕಾರ್ಯಕ್ರಮ, ಹದಿಹರೆಯದ ಶಿಕ್ಷಣ, ಮಕ್ಕಳ ಹಕ್ಕುಗಳು, ಸುರಕ್ಷಿತ ಸ್ಪರ್ಶ ಮತ್ತು ಅಸುರಕ್ಷಿತ ಸ್ಪರ್ಶ, ಮೀನಾಳ ಸಾಕ್ಷ್ಯಚಿತ್ರದ ಪ್ರದರ್ಶನ, ಮಕ್ಕಳ ಗ್ರಾಮ ಸಭೆ, ಬಾಲಕಾರ್ಮಿಕ ವಿರೋಧಿ ದಿನಾಚರಣೆಯ ಪ್ರಯುಕ್ತ ಮಕ್ಕಳ ರಕ್ಷಣಾ ವ್ಯವಸ್ಥೆ, ವಾಚಕ ಸಪ್ತಾಹ ಇತ್ಯಾದಿ. ಇದರ ಜೊತೆಗೆ ವನಮಹೋತ್ಸವ, ಮಕ್ಕಳ ದಿನಾಚರಣೆ, ಶಿಕ್ಷಕರ ದಿನಾಚರಣೆ, ಮೀನಾ ದಿನಾಚರಣೆಗಳನ್ನು ಮಕ್ಕಳೇ ನಡೆಸಿಕೊಂಡು ಬರುತ್ತಿದ್ದಾರೆ. ಒಟ್ಟಾರೆಯಾಗಿ ಸರಕಾರಿ ಹಿರಿಯ ಪ್ರಾಥಮಿಕ ಶಾಲೆ ಎಲಿಯಾಳದಲ್ಲಿ ಮೀನಾ ತಂಡದ ರಚನೆಯನ್ನು ಅರಿತ್ತಿದ್ದು, ಮಕ್ಕಳು ಹೆಚ್ಚು ಮುತುವರ್ಜಿಯಿಂದ ಸಭೆಗಳನ್ನು ನಡೆಸಿಕೊಂಡು ಬರುತ್ತಿದ್ದಾರೆ. ಶಿಕ್ಷಕರು ಎಸ್‌ಡಿಎಂಸಿ, ಪಂಚಾಯತ್ ಸದಸ್ಯರೂ ಅನುಪಾಲನೆ ಮಾಡುತ್ತಿರುವುದು ಶ್ಲಾಘನೀಯ.

# ಜನಸ್ನೇಹಿ ಶಿಕ್ಷಣ ಹಕ್ಕು ಕೋಶ

ಶಿಕ್ಷಣ ಹಕ್ಕು ಕಾಯಿದೆಯು 2009ರಲ್ಲಿ ಜಾರಿಗೆ ಬಂತು. ಈ ಕಾಯಿದೆಯು 6–14 ವರ್ಷದ ಮಕ್ಕಳು ಕಡ್ಡಾಯವಾಗಿ ಶಾಲೆಯಲ್ಲಿರಬೇಕು, ಅದೇ ರೀತಿ ತರಗತಿಗೊಂದು ಕೊಠಡಿ, ಶುದ್ಧ ಕುಡಿಯುವ ನೀರು, ಆಟದ ಮೈದಾನ, ತರಬೇತಿ ಹೊಂದಿದ ತರಗತಿಗೊಬ್ಬರು ವಿಷಯವಾರು ಶಿಕ್ಷಕರು, ವಾಚನಾಲಯದ ವ್ಯವಸ್ಥೆ, ವಿಜ್ಞಾನ ಪ್ರಯೋಗಾಲಯದ ವ್ಯವಸ್ಥೆ, ಸ್ವಚ್ಛ ಶೌಚಾಲಯ, ಶಾಲೆಗೆ ಆವರಣಗೋಡೆ, ಶಾಲೆಗೊಂದು ದೈಹಿಕ ಶಿಕ್ಷಕರು, ಶಾಲಾ ಕೈತೋಟ, ಸ್ವಂತ ಜಮೀನು ಈ ಎಲ್ಲಾ ಮೂಲಭೂತ ಸೌಕರ್ಯಗಳು ಇರಬೇಕಾಗುತ್ತದೆ. ಈ ಕಾಯಿದೆಯಂತೆ ಅನೇಕ ಶಾಲೆಗಳಲ್ಲಿ ಈ ಮೂಲಭೂತ ಸೌಕರ್ಯಗಳು ಇಲ್ಲವಾಗಿದೆ, ಇವೆಲ್ಲವೂ ಸರಕಾರಿ ಶಾಲೆಗಳ ಅಭಿವೃದ್ಧಿಯಲ್ಲಿ ಮಾರಕವಾಗಿರುವುದರಿಂದ ಇಲಾಖೆಯು ಈ ಬಗ್ಗೆ ಗಮನಹರಿಸಿ ಇವುಗಳನ್ನೆಲ್ಲಾ ಸರಿಪಡಿಸಬೇಕು ಹಾಗೂ ಪೋಷಕರಿಗೆ, ಜನಸಮುದಾಯದವರು ತಮ್ಮ ಶಾಲಾ ಸಮಸ್ಯೆಗಳನ್ನು ಮುಕ್ತವಾಗಿ ಹಂಚಿಕೊಳ್ಳುವ ವೇದಿಕೆ ನಿರ್ಮಾಣ ಮಾಡಬೇಕೆನ್ನುವ ಮಹತ್ವಾಕಾಂಕ್ಷೆಯಿಂದ ಜಿಲ್ಲಾ ಮಟ್ಟದಲ್ಲಿರುವ ಶಿಕ್ಷಣ ಹಕ್ಕು ಕೋಶವನ್ನು ಪ್ರತೀ ತಾಲೂಕಿನಲ್ಲಿ ರಚಿಸಬೇಕು ಎಂಬುದು ಪಡಿ ಯೋಜನೆಯ ಆಶಯವಾಗಿತ್ತು.

ಈ ಆಶಯುವನ್ನು ಈಡೇರಿಸುವುದಕೋಸ್ಕರ ಇಲಾಖೆಗಳ ಜೊತೆ ಸಮಾಲೋಚನಾ ಸಭೆಯನ್ನು ಮಾಡಿದೆವು. ಆದರೆ ಎಲ್ಲೋ ಇಲಾಖೆಯು ನಮ್ಮ ಈ ಪರಿಕಲ್ಪನೆಯನ್ನು ಒಪ್ಪಿಕೊಳ್ಳಲು ಹಿಂದೇಟು ಹಾಕಿತು. ಆದರೂ ನಮ್ಮ ಪ್ರಯುತ್ನವನ್ನು ಬಿಡದೆ, ಶಿಕ್ಷಣ ಹಕ್ಕು ಕೋಶದ ಅಗತ್ಯತೆಗಳ ಬಗ್ಗೆ ಜನಸಮುದಾಯವನ್ನು ಜಾಗೃತಿಗೊಳಿಸುತ್ತಿದ್ದೇವೆ. ಯಾಕೆಂದರೆ ಈ ಕಾಯಿದೆಯ ಪ್ರಕಾರ ಮಕ್ಕಳ ಹಕ್ಕುಗಳ ರಕ್ಷಣೆಯ ಜೊತೆಗೆ ಯಾವುದೇ ಮಕ್ಕಳು ಪ್ರಾಥಮಿಕ ಶಿಕ್ಷಣದಿಂದ ವಂಚಿತರಾಗಬಾರದು, ಇಲಾಖೆಗಳು ಮತ್ತು ಶಿಕ್ಷಣಕ್ಕೆ ಸಂಬಂಧಪಟ್ಟ ಪ್ರಾಧಿಕಾರಗಳು ಸಂಪರ್ಕ ಸಾಧನವಾಗಿ ಕಾರ್ಯ ನಿರ್ವಹಿಸಲು, ಶಿಕ್ಷಣ ಹಕ್ಕು ಕಾಯಿದೆಯ ಮಹತ್ವವನ್ನು ಜನಸಮುದಾಯಕ್ಕೆ ಮನದಟ್ಟು ಮಾಡಲು ಈ ಶಿಕ್ಷಣ ಹಕ್ಕು ಕೋಶದ ಅವಶ್ಯಕತೆ ಇದೆ. ಇದಕೋಸ್ಕರ ಪ್ರತೀ ತಾಲೂಕಿನಲ್ಲಿ ಎಸ್.ಡಿ.ಎಂ.ಸಿ ಸದಸ್ಯರಿಗೆ ಶಿಕ್ಷಣ ಹಕ್ಕು ಕೋಶದ ಬಗ್ಗೆ ಮಾಹಿತಿ ಕಾರ್ಯಾಗಾರವನ್ನು ಹಮ್ಮಿಕೊಂಡು, ಎಸ್.ಡಿ.ಎಂ.ಸಿ ಅವರಿಂದಲೇ ಈ ಕೋಶದ ರಚನೆಯನ್ನು ಮಾಡುವಂತೆ ಇಲಾಖೆಗೆ ಒತ್ತಾಯಿಸುವ ಪ್ರಯತ್ನವನ್ನು ಮಾಡಿತ್ತಲ್ಲದೇ ರಾಜ್ಯಮಟ್ಟದಲ್ಲಿ ಸರಕಾರಕ್ಕೆ ಹಕ್ಕೋತ್ತಾಯವನ್ನು ಕೂಡ ಮಾಡಲಾಯಿತು.

ಇಂದು ಇಲಾಖಾ ಮಟ್ಟದಲ್ಲಿ ಶಿಕ್ಷಣ ಹಕ್ಕು ಕೋಶ ಇಲ್ಲದಿದ್ದರು ಶಿಕ್ಷಣ ಸಂಪನ್ಮೂಲ ಕೇಂದ್ರದಲ್ಲಿ ಅದಕ್ಕೆ ಸಂಬಂಧಪಟ್ಟ ಮಾಹಿತಿಗಳು ಕರಪತ್ರಗಳು ಇರುವುದರೊಂದಿಗೆ, ದೂರುಗಳ ಸಂಗ್ರಹ ಹಾಗು ಪರಿಹರಿಸುವ ಪ್ರಯತ್ನವೂ ನಡೆಯುತ್ತಿದೆ. ಉದಾಹರಣೆಗೆ:

- ಶಿಕ್ಷಕರು, ಎಸ್.ಡಿ.ಎಂ.ಸಿಯ ಹಣವನ್ನು ದುರುಪಯೋಗ ಮಾಡಿಕೊಂಡಾಗ ಸೂಕ್ತ ಪ್ರಾಧಿಕಾರಕ್ಕೆ ದೂರು ನೀಡುವ ಮುಖಾಂತರ ಅವರಿಗೆ ನ್ಯಾಯ ಸಿಗುವ ಹಾಗೆ ಕೇಂದ್ರವು ಮಾಡಿರುತ್ತದೆ.
- ಶಿಕ್ಷಕರು, ಎಸ್.ಡಿ.ಎಂ.ಸಿ ಸದಸ್ಯರ ಕರ್ತವ್ಯಕ್ಕೆ ಅಡ್ಡಿಯನ್ನು ಉಂಟು ಮಾಡಿದ ಸಂದರ್ಭದಲ್ಲಿ ಶಿಕ್ಷಣ ಸಂಪನ್ಮೂಲ ಕೇಂದ್ರದ ಸಹಾಯವನ್ನು ಪಡೆದು ಅದನ್ನು ಪರಿಹರಿಸುವ ಪ್ರಾಮಾಣಿಕ ಪ್ರಯತ್ನವನ್ನು ಮಾಡಲಾಗಿದೆ.
- 25% ಮೀಸಲಾತಿಯಲ್ಲಿ ದಾಖಲಾದ ಮಕ್ಕಳಲ್ಲಿ ದಾಖಲಾತಿ ಶುಲ್ಕವನ್ನು ಶಾಲೆಯು ಪಡೆದುಕೊಳ್ಳುವ ಸಂದರ್ಭದಲ್ಲಿ ಕೇಂದ್ರಕ್ಕೆ ದೂರುಗಳು ಬಂದಾಗ ಅದನ್ನು ಮಕ್ಕಳ ಸಹಾಯವಾಣಿಯವರ ಸಹಕಾರದೊಂದಿಗೆ ಜಿಲ್ಲಾಧಿಕಾರಿಯವರ ಗಮನಕ್ಕೆ ತಂದು ಸಮಸ್ಯೆಯನ್ನು ಪರಿಹರಿಸಲಾಗಿದೆ.
- 25% ಮೀಸಲಾತಿಯ ದಾಖಲಾತಿಗೆ ಸಂಬಂಧಪಟ್ಟ ಮಾಹಿತಿಯನ್ನು ನೀಡಿರುವುದು.
- ಸರಕಾರಿ ಶಾಲೆಗಳಲ್ಲಿ ಆವರಣಗೋಡೆ ಹಾಗೂ ಶೌಚಾಲಯಗಳ ಸರಿಯಾದ ವ್ಯವಸ್ಥೆ ಇಲ್ಲದಿದ್ದಾಗ ಕೇಂದ್ರದ ಸದಸ್ಯರು ಮಾನ್ಯ ಸಚಿವರಿಗೆ ಮನವಿಯನ್ನು ಮಾಡಿ ಅವರ ಮುಖಾಂತರ ಜಿಲ್ಲಾ ಪಂಚಾಯತ್ ಹಾಗೂ ತಾಲೂಕು ಪಂಚಾಯತ್‌ಗಳ ಅನುದಾನಗಳು ಲಭ್ಯವಾಗಿ ಕಾಯಿದೆಯ ಪ್ರಕಾರ ಸರಿಯಾದ ವ್ಯವಸ್ಥೆಯನ್ನು ಕಲ್ಪಿಸಲಾಗಿದೆ.
- ಶಾಲೆಗಳಲ್ಲಿ ಆಟದ ಮೈದಾನಗಳು ಮಕ್ಕಳಿಗೆ ಆಟವಾಡಲು ಪೂರಕವಾಗಿರದ ಸಂದರ್ಭದಲ್ಲಿ ಗ್ರಾಮ ಪಂಚಾಯತ್ ಅನುದಾನದಿಂದ ಮೈದಾನದ ವ್ಯವಸ್ಥೆಯನ್ನು ಮಾಡಲಾಗಿದೆ.
- ತಮ್ಮ ಭೌಗೋಳಿಕ ಪ್ರದೇಶದಲ್ಲಿ ವಾಸವಾಗಿರುವ 6–14 ವರ್ಷದೊಳಗಿನ ಮಕ್ಕಳ ವಿವರಗಳು ಗ್ರಾಮ ಪಂಚಾಯತ್‌ಗಳಲ್ಲಿ ಲಭ್ಯವಿರುವಂತೆ ನೋಡಿಕೊಳ್ಳಲಾಗಿದೆ.

- ಕುಂದಾಪುರ ಮತ್ತು ಕಾರ್ಕಳದಲ್ಲಿ 25% ಮೀಸಲಾತಿಯಲ್ಲಿ ದಾಖಲಾತಿ ಹೊಂದಿದ ಮಕ್ಕಳ ಪೋಷಕರಿಗೆ ಕ್ಷೇತ್ರ ಶಿಕ್ಷಣಾಧಿಕಾರಿಗಳೊಂದಿಗೆ ಸಂವಾದ ನಡೆಸುವ ಅವಕಾಶವನ್ನು ಮಾಡಿ ಕೊಡಲಾಯಿತು. ಇಲ್ಲಿ ಬಂದ ಸಮಸ್ಯೆಗಳನ್ನು ತಾಲೂಕು ಶಿಕ್ಷಣ ಸಂಪನ್ಮೂಲ ಕೇಂದ್ರದ ವತಿಯಿಂದ ಪರಿಹರಿಸುವಂತೆ ಮನವಿ ಮಾಡಿದಾಗ, ಕ್ಷೇತ್ರ ಶಿಕ್ಷಣಾಧಿಕಾರಿಯವರು ಶಿಕ್ಷಣ ಕೋಶದ ಅಗತ್ಯತೆ ಇದೆ ಎಂದು ಅರಿತುಕೊಂಡು ಕೋಶವನ್ನು ರಚಿಸಲು ಒಪ್ಪಿಕೊಂಡರು, ಇಂದು ಶಾಲೆಯ ಎಸ್.ಡಿ.ಎಂ.ಸಿ, ಶಾಲಾ ಮಕ್ಕಳ ಗೈರು ಹಾಜರಿಗಳ ಬಗ್ಗೆ ಈ ಸಭೆಗಳಲ್ಲಿ ಚರ್ಚಿಸಲಾಗುತ್ತಿದೆ. ಇನ್ನು ಮುಂದೆ ಈ ಕೋಶವು ಸರಕಾರಿ ಶಾಲೆಯು ಉಳಿಯಲಿ ಬೆಳೆಯಲಿ ಎನ್ನುವ ತತ್ವಕ್ಕೆ ಪೂರಕವಾಗಿ ಕಾರ್ಯನಿರ್ವಹಿಸಿ ಸರಕಾರಿ ಶಾಲೆಯನ್ನು ಇನ್ನಷ್ಟು ಉನ್ನತೀಕರಣಗೊಳಿಸಲಿ ಎನ್ನುವುದೇ ಪಡಿ ಯೋಜನೆಯ ಆಶಯವಾಗಿದೆ.

ಶಿಕ್ಷಣ ಹಕ್ಕು ಕಾಯಿದೆಯ ಆಶಯಗಳನ್ನು ಪೂರೈಸುವುದಕ್ಕೋಸ್ಕರ, ಇದೀಗ ಕಾರ್ಕಳ ಮತ್ತು ಕುಂದಾಪುರದಲ್ಲಿ ಶಿಕ್ಷಣ ಹಕ್ಕು ಕೋಶವು ರಚನೆಯಾಗಿ, ಜನಸಮುದಾಯಕ್ಕೆ ಶಿಕ್ಷಣದ ಜಾಗೃತಿ ಮೂಡಿಸಲು ಕಾರ್ಯಪ್ರವೃತ್ತವಾಗಿದೆ.

## ಶಿಕ್ಷಣದಲ್ಲೊಂದು ಮಾದರಿ ಪಂಚಾಯತ್

ರಾಜ್ಯ ಸಂಪನ್ಮೂಲ ಕ್ರೋಢೀಕರಣ ಪ್ರಶಸ್ತಿ ಪುರಸ್ಕೃತ ಪಂಚಾಯತ್ ಆದ ತಲ್ಲೂರು ಗ್ರಾಮ ಪಂಚಾಯತ್ 2 ಗ್ರಾಮಗಳನ್ನು ಹೊಂದಿದ್ದು, 6250 ಜನಸಂಖ್ಯೆಯನ್ನು ಹೊಂದಿದೆ. 16 ಜನ ಪ್ರತಿನಿಧಿಗಳನ್ನು ಹೊಂದಿರುವ ಈ ಪಂಚಾಯತ್ ನೀರಾವರಿ, ಕಾಮಗಾರಿ, ಉದ್ಯೋಗ ಖಾತರಿ ಯೋಜನೆ, ನಿವೇಶನ ಹಂಚಿಕೆ ಈ ಎಲ್ಲಾ ಕೆಲಸಗಳಲ್ಲಿ ಮಾದರಿ ಪಂಚಾಯತ್ ಆಗಿದ್ದ ತಲ್ಲೂರು ಶೈಕ್ಷಣಿಕ ಬಹಳ ಹಿಂದೆ ಇತ್ತು. ಹೇಗೆಂದರೆ ಶಾಲೆಯಿಂದ ಹೊರಗುಳಿದ ಮಕ್ಕಳು, ಗೈರು ಹಾಜರಾಗುವ ಮಕ್ಕಳು, ಶಾಲೆಯಲ್ಲಿ ಮೂಲಭೂತ ಸೌಲಭ್ಯಗಳ ಕೊರತೆ, ಹೀಗೆ ಹತ್ತಾರು ಸಮಸ್ಯೆಗಳು ಶಾಲೆಯಲ್ಲಿದ್ದರೂ, ಪಂಚಾಯತ್ ಸದಸ್ಯರು ಈ ಬಗ್ಗೆ ಗಮನಹರಿಸದೆ ತಮ್ಮ ಕೆಲಸ ಕಾಮಗಾರಿಗಳ ಅಭಿವೃದ್ಧಿ ಎಂದೇ ತಿಳಿದಿದ್ದರು. ತಲ್ಲೂರನ್ನು ಮಗುಸ್ನೇಹಿ ಪಂಚಾಯತ್ ಎಂದೂ ಆಯ್ಕೆ ಮಾಡಿಕೊಂಡು ಸಮಾಲೋಚನ ಸಭೆಗಳನ್ನು ನಡೆಸಿ ಮಗುಸ್ನೇಹಿ ಪಂಚಾಯತ್ ಪರಿಕಲ್ಪನೆಯನ್ನು ವಿವರಿಸಲಾಯಿತು. ಆಗ ತಮಗೆ ನೂರಾರು ಕೆಲಸಗಳಿವೆ, ಈ ಕೆಲಸಗಳನ್ನು ಮಾಡಲು ಸಮಯವಿಲ್ಲ, ನಮ್ಮಿಂದ ಸಾಧ್ಯವಿಲ್ಲ ಎನ್ನುವ ಉತ್ತರ ಬಂದಾಗಲೂ ಅವರಿಗೆ ಕಾಯಿದೆಗಳ ಬಗ್ಗೆ

ಮಾಹಿತಿ ನೀಡುತ್ತಾ ನಿರಂತರ ಭೇಟಿಗಳಿಂದ ಅವರನ್ನು ಶೈಕ್ಷಣಿಕ ವಿಚಾರಗಳತ್ತ ವಾಲುವಂತೆ ಮಾಡಿತು. ಕ್ರಮೇಣ ಪಂಚಾಯತ್ ಸದಸ್ಯರಲ್ಲಿ ಶೈಕ್ಷಣಿಕ ಸಮಸ್ಯೆಗಳ ಬಗ್ಗೆ ಚರ್ಚಿಸುತ್ತಾ ಶಾಲೆಯಿಂದ ಹೊರಗುಳಿದ ಮಕ್ಕಳ ಬಗ್ಗೆ ಚರ್ಚಿಸಲಾಯಿತು. ಆಗ




ಎಲ್ಲಾ ಸದಸ್ಯರು ತಮ್ಮ ವಾರ್ಡಿನಲ್ಲಿ ಶಾಲೆಯಿಂದ ಹೊರಗುಳಿದ ಮಕ್ಕಳು ಇರಬಾರದು ಎಂದು ಪಣತೊಟ್ಟು ಮಕ್ಕಳ ಮನೆ ಭೇಟಿ ಮಾಡಿ ಮಕ್ಕಳನ್ನು ಮರಳಿ ಶಾಲೆಗೆ ಕರೆತರುವಲ್ಲಿ ಪ್ರಯತ್ನಿಸಿದರು. ಅಷ್ಟೇ ಅಲ್ಲದೆ ಶಾಲೆಗಳಲ್ಲಿ ಇನ್ನಿತರ ಸಮಸ್ಯೆಗಳನ್ನು ಕಂಡುಕೊಂಡಾಗ ತಮ್ಮ ಉಪಸಮಿತಿಯ ಮುಖಾಂತರ ಎಸ್.ಡಿ.ಎಂ.ಸಿ ಹಾಗೂ ಶಿಕ್ಷಕರ ಸಭೆಗಳನ್ನು ಪ್ರತೀ 3 ತಿಂಗಳಿಗೊಮ್ಮೆ ಮಾಡುವ ಯೋಜನೆಯನ್ನು ಹಾಕಿಕೊಂಡು ಸಭೆಗೆ ಅವರನ್ನು ಕರೆಯಲು ಪ್ರಾರಂಭಿಸಿ ಮಕ್ಕಳ ಕಲಿಕಾ ಮಟ್ಟ, ಸುರಕ್ಷತೆ, ಬಿಸಿಯೂಟ, ಮೂಲಭೂತ ಸೌಕರ್ಯಗಳ




ಕೊರತೆ, ಈ ಎಲ್ಲದರ ಬಗ್ಗೆ ಚರ್ಚಿಸಲು ಪ್ರಾರಂಭಿಸಿದರು. ಎಸ್.ಡಿ.ಎಂ.ಸಿಗಳಿಗೆ ತಮ್ಮ ಕರ್ತವ್ಯ ಹಾಗೂ ಜವಾಬ್ದಾರಿಗಳ ಅರಿವು ಇಲ್ಲದೆ ಹೋದರೆ ಶಾಲಾಭಿವೃದ್ಧಿ ಸಾಧ್ಯವಿಲ್ಲ ಎಂದು ಮನಗಂಡು 2 ದಿನಗಳ ಎಸ್.ಡಿ.ಎಂ.ಸಿ ತರಬೇತಿಯನ್ನು ಕೂಡಾ ಪಂಚಾಯತ್ ವತಿಯಿಂದ ನಡೆಸಿ ಶಿಕ್ಷಣ ಇಲಾಖೆ ಹಾಗೂ ಇತರ ಪಂಚಾಯತ್‌ಗೆ ಶೈಕ್ಷಣಿಕ ವಿಚಾರದಲ್ಲಿ ಮಾದರಿ ಎನಿಸಿಕೊಂಡರು. ಪಂಚಾಯತ್ ವ್ಯಾಪ್ತಿಯ ಎಲ್ಲಾ ಶಾಲೆಗಳಲ್ಲಿ ಸುರಕ್ಷಾ ಸಮಿತಿ, ಬಿಸಿಯೂಟದ ಮೇಲ್ವಿಚಾರಣೆಯನ್ನು

ಮಾಡತೊಡಗಿದರು. ಪಂಚಾಯತ್‌ನಲ್ಲಿ ಮಕ್ಕಳ ವಿಶೇಷ ಗ್ರಾಮ ಸಭೆಯನ್ನು ಮಾಡಲು ಮಕ್ಕಳಿಗೆ ಪೂರ್ವತಯಾರಿಯನ್ನು ನಡೆಸಿ ಮುಕ್ತ ಅವಕಾಶವನ್ನು ನೀಡಿ ಅವರ ಸಮಸ್ಯೆಗಳಿಗೆ ಸ್ಪಂದಿಸಿ ಸಾಮಾನ್ಯ ಸಭೆಗಳಲ್ಲಿಯೂ ಕೂಡಾ ಈ ವಿಚಾರಗಳ ಬಗ್ಗೆ ಚರ್ಚಿಸಿ ಪರಿಹಾರವನ್ನು ಕಂಡುಕೊಂಡ ನಿದರ್ಶನಗಳು ಬಹಳಷ್ಟು ಇದೆ. ಇದಕ್ಕೆ ಪೂರಕವಾಗಿ ಕಾಯಿದೆ–ಕಾನೂನುಗಳ ಮಾಹಿತಿ ಫಲಕಗಳು, ಮಕ್ಕಳಿಗೆ ಸಂಬಂಧಪಟ್ಟ ಎಲ್ಲಾ ದಾಖಲೆಗಳು ಪಂಚಾಯತ್‌ನಲ್ಲಿ ಹಾಕಲಾಗಿದೆ. ಮೂಲಭೂತ ಸೌಕರ್ಯಗಳಿಗೆ ಸಂಬಂಧಪಟ್ಟಂತೆ ಶೌಚಾಲಯಗಳ ನಿರ್ಮಾಣವನ್ನು ಮಾಡಿರುವುದು, ಶಾಲೆಯಲ್ಲಿ ಶಿಕ್ಷಕರು ಇಲ್ಲದೆ ಇದ್ದ ಸಂದರ್ಭದಲ್ಲಿ ಶಾಸಕರಿಗೆ, ಇಲಾಖೆಗಳಿಗೆ ಮನವಿ ಮಾಡಿ ಶಿಕ್ಷಕರನ್ನು ನೇಮಕ ಮಾಡುವಲ್ಲಿ ಸಫಲರಾದರು.

ಎಸ್.ಡಿ.ಎಂ.ಸಿ ಸಭೆಗಳಲ್ಲಿ ನಾಮನಿರ್ದೇಶಿತ ಸದಸ್ಯರುಗಳು ತಪ್ಪದೇ ಭಾಗವಹಿಸುವ ಪರಿಪಾಠವನ್ನು ಬೆಳೆಸಿಕೊಂಡರು. ಒಟ್ಟಿನಲ್ಲಿ ತಲ್ಲೂರು ಪಂಚಾಯತ್ ಮಕ್ಕಳ ಅಭಿವೃದ್ಧಿ ಹಾಗೂ ಅವರ ಬೆಳವಣಿಗೆಗೆ ಪೂರಕ ವಾತಾವರಣವನ್ನು ಕಲ್ಪಿಸಿಕೊಟ್ಟು ಮಗುಸ್ನೇಹಿ ಪಂಚಾಯತ್ ಆಗಿ ಇತರರಿಗೆ ಮಾದರಿ ಎನ್ನುವುದರಲ್ಲಿ ಯಾವುದೇ ಸಂಶಯವಿಲ್ಲ.

*****

## ಗುಣಮಟ್ಟದ ಶಿಕ್ಷಣಕ್ಕಾಗಿ ಪಂಚಾಯತ್ ಪಾತ್ರ ಮಹತ್ವದ್ದು

**ಬೈಲೂರು ಗ್ರಾಮ ಪಂಚಾಯತ್:** ಬೈಲೂರು ಮತ್ತು ಕೌಡೂರು ಎಂಬ ಕಾರ್ಕಳ ತಾಲೂಕಿನ 2 ಗ್ರಾಮಗಳನ್ನು ಒಳಗೊಂಡಿದೆ. ಇದರಲ್ಲಿ 6 ವಾರ್ಡುಗಳಿದ್ದು, 14 ಮಂದಿ ಸದಸ್ಯರಿದ್ದಾರೆ. ಈ ಪಂಚಾಯತ್‌ನಲ್ಲಿ ಒಟ್ಟು 5391 ಜನಸಂಖ್ಯೆಯಿದ್ದು, ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ಮತ್ತು ಇತರೆ ಹಿಂದುಳಿದ ವರ್ಗಕ್ಕೆ ಸೇರಿದ ಜನರು ವಾಸಿಸುತ್ತಿದ್ದು ಜೀವನೋಪಾಯಕ್ಕೆ ಕೃಷಿಯ ಜೊತೆಗೆ ಇನ್ನಿತರ ವೃತ್ತಿಗಳನ್ನು ಮಾಡಿ ಜೀವನ ಸಾಗಿಸುತ್ತಿದ್ದಾರೆ. ಈ ಗ್ರಾಮ ಪಂಚಾಯತ್‌ನಲ್ಲಿ ಒಟ್ಟು 5 ಸರ್ಕಾರಿ ಶಾಲೆ, 2 ಅನುದಾನ ರಹಿತ ಶಾಲೆಗಳಿದ್ದು, ಒಟ್ಟು 767 ವಿದ್ಯಾರ್ಥಿಗಳು ವಿದ್ಯಾಭ್ಯಾಸವನ್ನು ಮಾಡುತ್ತಿದ್ದಾರೆ. 6 ಅಂಗನವಾಡಿ ಕೇಂದ್ರಗಳಿದ್ದು, ರೋಟರಿ ಕ್ಲಬ್, ಯುವಕ ಮಂಡಲ, ಮಹಿಳಾ ಮಂಡಲದಂತಹ ಅನೇಕ ಸಂಘ ಸಂಸ್ಥೆಗಳು ಈ ಪಂಚಾಯತ್‌ನಲ್ಲಿದೆ.

ಪಂಚಾಯತ್ ಸದಸ್ಯರು ಮೊದಲು ತಾವಾಯಿತು ತಮ್ಮ ಕೆಲಸವಾಯಿತು ಎನ್ನುವ ರೀತಿಯುಲ್ಲಿದ್ದು, ಅವರವರ ವಾರ್ಡಿನ ಕೆಲಸಕಾರ್ಯಗಳಲ್ಲಿ ತೊಡಗಿಕೊಂಡಿದ್ದರು. ಶಿಕ್ಷಣಕ್ಕೆ ಸಂಬಂಧಪಟ್ಟ ಹಾಗೆ ಏನಾದರೂ ದೂರುಗಳು ಬಂದರೆ ಮಾತ್ರ ಎಚ್ಚೆತ್ತುಕೊಳ್ಳುತ್ತಿದ್ದರೇ ವಿನಃ ಶಾಲೆಯ ಕಡೆ, ಮಕ್ಕಳ ಶಿಕ್ಷಣ ವ್ಯವಸ್ಥೆಯ ಕುರಿತು, ಮಕ್ಕಳ ಕಲಿಕಾ ಪ್ರಗತಿಯ ಕುರಿತು ಚಿಂತಿಸುತ್ತಿರಲಿಲ್ಲ.

ಪಡಿ ಯೋಜನೆಯು ಮಗುಸ್ನೇಹಿ ಪಂಚಾಯತ್ ಪರಿಕಲ್ಪನೆಯಲ್ಲಿ ಬೈಲೂರು ಗ್ರಾಮ ಪಂಚಾಯತ್‌ನಲ್ಲಿ ಕೆಲಸ ಮಾಡಲು ತೊಡಗಿದ ಮೇಲೆ ಸದಸ್ಯರಿಗೆ ಅನೇಕ ಮಾಹಿತಿಗಳನ್ನು ನೀಡಿದ ನಂತರ ಪಂಚಾಯತ್ ಮತ್ತು ಶಾಲೆಯ ನಡುವೆ ಒಳ್ಳೆಯ ಸಂಬಂಧವಿರಬೇಕೆಂದು ಅರಿತುಕೊಂಡು ತಮ್ಮ ವಾರ್ಡಿನ ಶಾಲೆಗಳ ಅಭಿವೃದ್ಧಿ ಕಾರ್ಯಗಳಲ್ಲಿ ಪಂಚಾಯತ್ ಸದಸ್ಯರು ತಮ್ಮನ್ನು ತಾವು ತೊಡಗಿಸಿಕೊಂಡರು. ಆರಂಭದಲ್ಲಿ ಪಂಚಾಯತ್ ಸದಸ್ಯರಿಗೆ ಅರ್ಥ ಮಾಡಿಸುವುದು ಕಷ್ಟವಾದರೂ ಕೊನೆಗೆ ಸದಸ್ಯರು ತಮ್ಮ ಕೆಲಸವನ್ನು ಅರಿತುಕೊಂಡರು. ಶಾಲೆಯ ಶಾಲಾಭಿವೃದ್ಧಿ ಹಾಗೂ ಮೇಲುಸ್ತುವಾರಿ ಸಮಿತಿಯಲ್ಲೂ ತಮ್ಮ ಪಾತ್ರವಿದೆ ಎಂದು ಅರಿತು ನಾಮನಿರ್ದೇಶಿತ ಸದಸ್ಯರಾಗಿ ಆಯ್ಕೆಗೊಂಡು ಶಾಲಾಭಿವೃದ್ಧಿ ಹಾಗೂ ಮೇಲುಸ್ತುವಾರಿ ಸಮಿತಿಯ ಸಭೆಗಳಲ್ಲಿ ಭಾಗವಹಿಸುವುದರ ಜೊತೆಗೆ ಶಾಲೆಗೆ ಬೇಕಾಗುವ ಮೂಲಭೂತ ಸೌಕರ್ಯದ ಕುರಿತು ಚರ್ಚಿಸುತ್ತಿದ್ದರು. ಹಾಗೇ ಮಕ್ಕಳ ಕಲಿಕಾ ಪ್ರಗತಿ, ದೀರ್ಘ ಗೈರುಹಾಜರಾದ ಮಕ್ಕಳ ಬಗ್ಗೆ, ಮೀನಾ ಹಾಗೂ ಮಕ್ಕಳ ಹಕ್ಕುಗಳ ಕ್ಲಬ್ಬಿನ ಬಗ್ಗೆ ತಿಳಿದುಕೊಳ್ಳಲು ಅವಕಾಶ ಕಲ್ಪಿಸಿಕೊಡಲಾಯಿತು. ಅದೇ ರೀತಿ ಪಂಚಾಯತ್ ಸಾಮಾನ್ಯ ಸಭೆಗಳಲ್ಲಿ ಶಿಕ್ಷಣದ ಕುರಿತು ಚರ್ಚಿಸುವಂತಾಯಿತು. ಮಕ್ಕಳು ಪಂಚಾಯತ್ ಸದಸ್ಯರಲ್ಲಿ ತಮ್ಮ ಸಮಸ್ಯೆಗಳನ್ನು ಹೇಳಿಕೊಳ್ಳಲು ಮಕ್ಕಳ ಗ್ರಾಮ ಸಭೆಯಂತಹ ವೇದಿಕೆಯನ್ನು ಕಲ್ಪಿಸಿಕೊಡಲಾಗಿದೆ. ಒಟ್ಟಾರೆಯಾಗಿ ನಮ್ಮ ಸಂಸ್ಥೆಯ ಮೂಲಕ ಶಾಲೆ ಮತ್ತು ಪಂಚಾಯತ್‌ನ ಬಾಂಧವ್ಯವನ್ನು ಗಟ್ಟಿಗೊಳಿಸುವಂತೆ ಮಾಡಲಾಗಿದೆ.

*****

## ಶಿಕ್ಷಣದತ್ತ ಬಾಲಕಾರ್ಮಿಕ – ಒಂದು ಮಾರ್ಪಾಡು

ಕುಂದಾಪುರ ತಾಲೂಕಿನ ಕೋಟೆಬಾಗಿಲು ಪರಿಸರದಲ್ಲಿರುವ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಕಾಲೋನಿಯಲ್ಲಿ ಬಾಬಿ ಮತ್ತು ಮಂಜುನಾಥ ದಂಪತಿಗಳು ವಾಸವಾಗಿದ್ದು, ಇವರಿಗೆ 6 ಜನ ಮಕ್ಕಳು ತೀರಾ ಬಡ ಕುಟುಂಬವಾಗಿದ್ದ ಇವರು ಒಂದು ಹೊತ್ತಿನ ತುತ್ತಿಗೂ ಪರದಾಡುವ ಸ್ಥಿತಿಯಲ್ಲಿ ಇದ್ದರು. ಈ ಸ್ಥಿತಿಯಲ್ಲಿ

ತಮ್ಮ ದೊಡ್ಡ ಮಗನನ್ನು ತಮ್ಮೊಂದಿಗೆ ಬಾರ್ ಆ್ಯಂಡ್ ರೆಸ್ಟೋರೆಂಟ್ ಹೋಟೆಲ್ ಕೆಲಸ ಮಾಡಿಸುತ್ತಿದ್ದರು. ಈ ವಿಚಾರಗಳ ಬಗ್ಗೆ ಕಾರ್ಕಳ ತಾಲೂಕು ಶಿಕ್ಷಣ ಸಂಪನ್ಮೂಲ ಕೇಂದ್ರದ ಸದಸ್ಯರ ಗಮನಕ್ಕೆ ಬಂದಾಗ ಅವರು ಕೇಂದ್ರದ ಸಭೆಯಲ್ಲಿ ಇಟ್ಟು, ಅವರ ಮನೆ ಭೇಟಿ ಮಾಡಿ ಅವರಿಗೆ ತಿಳಿಸಿ ಹೇಳಿದರು. ಕುಟುಂಬದವರು ಈ ಬಗ್ಗೆ ಗಮನ ಹರಿಸಲೇ ಇಲ್ಲ.

ಒಂದು ದಿನ ಜಿಲ್ಲಾ ಪಂಚಾಯತ್ ಎಸ್.ಸಿ/ಎಸ್.ಟಿ. ಕುಂದು ಕೊರತೆಗಳ ಸಭೆಗಳಲ್ಲಿ ಈ ಮಗುವಿನ ಬಗ್ಗೆ ಶಿಕ್ಷಣ ಸಂಪನ್ಮೂಲ ಕೇಂದ್ರದ ಸದಸ್ಯರು ಪ್ರಸ್ತಾಪಿಸಿದರು. ಮಾನ್ಯ ಜಿಲ್ಲಾಧಿಕಾರಿಗಳ ನಿರ್ದೇಶನದಂತೆ ಮರುದಿನವೇ ಬಾರ್ ಆ್ಯಂಡ್ ರೆಸ್ಟೋರೆಂಟ್ ಇಲಾಖೆಗಳ ನಿಯೋಗ ಬೇಟಿ ಮಾಡಿ, ಮಗುವನ್ನು ಬಾಲಕಾರ್ಮಿಕ ಮುಕ್ತನನ್ನಾಗಿ ಮಾಡಿದರು. ಇಂದು ಆ ಮಗು ತಮ್ಮ ಭವಿಷ್ಯದ ಉನ್ನತಿಗಾಗಿ ಐ.ಟಿ.ಐ. ವಿದ್ಯಾಬ್ಯಾಸವನ್ನು ಒಂದು ಸಂಸ್ಥೆಯಲ್ಲಿ ಮಾಡುತ್ತಿದ್ದಾನೆ.

ಪಡಿ ಯೋಜನೆ ಮಾರ್ಗದರ್ಶನ ಹಾಗೂ ತರಬೇತಿಗಳ ಫಲವಾಗಿ ಶಿಕ್ಷಣ ಸಂಪನ್ಮೂಲ ಕೇಂದ್ರಗಳು ಸರಕಾರೀ ಕಾಯಿದೆ ಕಾನೂನುಗಳನ್ನರಿತು ಸಮುದಾಯದಲ್ಲೊಂದು ಬದಲಾವಣೆ ತರುವ ಮೂಲವಾಗಿರುವುದು ಗಮನಾರ್ಹ.

*****

## "ಮಕ್ಕಳ ಸುರಕ್ಷತೆಯ ಮೂಲಕವಾಗಿ ಸಂತೋಷದಾಯಕ ಕಲಿಕೆ"

### ಪೈಂಬೆಚಾಲ್ ಸರಕಾರಿ ಕಿರಿಯ ಪ್ರಾಥಮಿಕ ಶಾಲಾ ಶಿಕ್ಷಕರ ಮನದಾಳದ ಮಾತು

ಸುಳ್ಯ ತಾಲೂಕು ತನ್ನ ಗಡಿ ಭಾಗವನ್ನು ಕಾಸರಗೋಡು ಜಿಲ್ಲೆಯೊಂದಿಗೆ ಹಂಚಿಕೊಂಡಿದೆ. ಇದರ ಪರಿಣಾಮ ಗಡಿಮಂಜಿನ ಭಾಗದಲ್ಲಿ ಮುಸ್ಲಿಂ ಸಮುದಾಯದ ಬಡ ಕುಟುಂಬಗಳು ಹೆಚ್ಚಿನ ಸಂಖ್ಯೆಯಲ್ಲಿದ್ದು ಆರ್ಥಿಕವಾಗಿ ತೀರಾ ಕೆಳಮಟ್ಟದವರೆಂದು ಗಮನಿಸಬಹುದು.

ಇದು ಪಡಿ ಯೋಜನೆಯ 'ಪೈಂಬೆಚಾಲ್' ಸರಕಾರಿ ಕಿರಿಯ ಪ್ರಾಥಮಿಕ ಶಾಲಾ ಪ್ರದೇಶದ ಪರಿಚಯ. ಬೆಟ್ಟ ಗುಡ್ಡಗಳ ಪ್ರದೇಶ ಜೊತೆ ಅರಣ್ಯ ಅಭಿವೃದ್ಧಿ ಹೊಂದುತ್ತಿರುವ ರಸ್ತೆಗಳು ತೀರಾ ವಿರಳ ವಾಹನ ಸಂಪರ್ಕ ತಾಲೂಕು ಕೇಂದ್ರದಿಂದ 13 ಕಿ.ಲೊ. ಮೀಟರ್ ದೂರ ಶಿಕ್ಷಕರಿಗೆ ಸರಿಯಾದ ಬಸ್ಸಿನ ವ್ಯವಸ್ಥೆಗಳಿಲ್ಲದೆ ಬಂದು ಹೋಗುವ ಪ್ರಯಾಸ ಅಷ್ಟಿಷ್ಟಲ್ಲ.

ಈ ಶಾಲೆಯಲ್ಲಿ 40ರಷ್ಟು ಮಕ್ಕಳು ಕಲಿಯುತ್ತಿದ್ದು ಬಹುತೇಕ ಮುಸ್ಲಿಂ ಸಮುದಾಯ ಮಕ್ಕಳಿದ್ದು ಪಕ್ಕದಲ್ಲಿ ಅಂಗನವಾಡಿ ಕೇಂದ್ರ ಇದ್ದು ಜಾರು ಬಂಡಿಯನ್ನು ಏರಿ

ಬರುವಂತಿರುವ ರಸ್ತೆ ಶಾಲೆಯ ಎತ್ತರಕ್ಕೆ ಏರಿದರೆ ಪ್ರಕೃತಿಗೆ ತೆರೆದಿಟ್ಟಂತೆ ನಮ್ಮನ್ನು ಸ್ವಾಗತಿಸುತ್ತದೆ. ಕೆಳಗೆ ನೋಡಿದರೆ ಅಂಗನವಾಡಿಗೆ ದುಮ್ಮಿಕುವಂತಿದೆ. ಇದರಿಂದ ನಮಗಿರುವ ಭಯ ಮಕ್ಕಳು ಆಟವಾಡಲು ಹೋದರೆ ಕಿರಿದಾದ ಆಟದ ಮೈದಾನ ಹೊರ ಬದಿಗೆ ಹೋದಲ್ಲಿ ಎಲ್ಲಿ ಕಾಲು ಜಾರಿ ಕೆಳಕ್ಕೆ ಬೀಳುತ್ತಾರೋ. ಅಪಾಯವಾಗುತ್ತದೋ.. ಎಂಬ ಭಯ.

ಆಟದ ಮೈದಾನಕ್ಕೆ ರಕ್ಷಣೆ ತಡೆಗೋಡೆ ಎಂದರೆ ಅದು ಸುಮಾರು ಲಕ್ಷ ರೂಪಾಯಿಗಳ ಮೇಲಿನದ್ದಾಗಿತ್ತು.

ಶಾಲೆಯ ಎಸ್.ಡಿ.ಎಂ.ಸಿ ಸಭೆಯನ್ನು ಕರೆದು ಇದರ ಬಗ್ಗೆ ಚರ್ಚಿಸಿ ಮಕ್ಕಳ ಸುರಕ್ಷತೆಗಾಗಿ ರಕ್ಷಣಾ ತಡೆಗೋಡೆ ರಚನೆ ಅವಶ್ಯಕ ಎಂಬುವುದನ್ನು ತೀರ್ಮಾನಿಸಿ ಶಾಲಾಭಿವೃದ್ಧಿ ಯೋಜನೆಯನ್ನು ತಯಾರಿಸಿ, ಬಳಿಕ ವಾರ್ಷಿಕ ಕ್ರಿಯಾ ಯೋಜನೆಯನ್ನು ತಯಾರು ಮಾಡಿ ಪತ್ರಿಗಳನ್ನು ಜಿಲ್ಲಾ ಪಂಚಾಯತ್, ತಾಲೂಕು ಪಂಚಾಯತ್ ಗ್ರಾಮ ಪಂಚಾಯತ್ ಹಾಗೂ ದಾನಿಗಳು, ಸ್ಥಳೀಯ ಪ್ರತಿನಿಧಿಗಳಿಗೆ ನೀಡಲಾಯಿತು. ಮಕ್ಕಳು ಮಕ್ಕಳ ಹಕ್ಕುಗಳ ಗ್ರಾಮ ಸಭೆಯಲ್ಲಿ ತಮ್ಮ ರಕ್ಷಣೆಯ ಬಗ್ಗೆ ಧ್ವನಿ ಎತ್ತಿದರು ಫಲವೂ ಇಲ್ಲಿ ಸಾರ್ಥಕವಾಯಿತು..

ಇದನ್ನು ಮನಗಂಡ ಪಂಚಾಯತ್ ಶಾಲೆಯಲ್ಲಿ ತಡೆಗೋಡೆ ನಿರ್ಮಾಣವನ್ನು ಪ್ರಾರಂಭಿಸಿ ಸುಮಾರು 14–15 ಅಡಿ ಎತ್ತರದ ಸುಸಜ್ಜಿತ ತಡೆಗೋಡೆಯನ್ನು ನಿರ್ಮಿಸಿ ಮಕ್ಕಳಿಗೆ ರಕ್ಷಣೆಯನ್ನು ಒದಗಿಸಿಕೊಟ್ಟಿದೆ.

ಈ ಒಂದು ಮಗುಸ್ನೇಹಿ ಶಾಲೆಯ ನಿರ್ಮಾಣದ ಕಲ್ಪನೆಯನ್ನು ಹುಟ್ಟುಹಾಕಿರುವುದು 'ಪಡಿ' ಸಂಸ್ಥೆ. ಪಡಿ ಸಂಸ್ಥೆಯು ನಮಗೆ ನೀಡಿರುವ ಮಾರ್ಗದರ್ಶನದೊಂದಿಗೆ ವಿವಿಧ ರೀತಿಯ ತರಬೇತಿಗಳನ್ನು ನೀಡಿ ಶಾಲಾಭಿವೃದ್ಧಿ ಯೋಜನೆ ತಯಾರಿ ಬಗ್ಗೆ ವಿವರಿಸಿ, ಮೂಲಭೂತ ಸೌಕರ್ಯಗಳು, ಶಾಲೆಯೊಳಗಿನ ಕುಂದುಕೊರತೆ ನಿವಾರಣಾ ವ್ಯವಸ್ಥೆ, ಗುಣಮಟ್ಟದ ಶಿಕ್ಷಣ, ಮಕ್ಕಳ ರಕ್ಷಣೆ ಕಾನೂನು ಹಕ್ಕುಗಳ ಬಗ್ಗೆ ತರಬೇತಿಯನ್ನು ನೀಡಿದ ಪರಿಣಾಮ ನಮ್ಮನ್ನು ಶಾಲೆಗೆ ಬರುವಂತೆ ಮಾಡಿ ಸರಕಾರಿ ಶಾಲೆ ನಮ್ಮ ಶಾಲೆ ಎಂಬ ಬಾವನೆ ನಮ್ಮಲ್ಲಿ ಮೂಡುವಂತೆ ನಮಗೆ ಒತ್ತು ಕೊಟ್ಟವರು ಜೊತೆಗೆ ಸಮುದಾಯವನ್ನು ನಮ್ಮ ಶಾಲೆಗೆ ಬರುವಂತೆ ಮಾಡಿದ್ದು ನಮಗೆ ದೊರೆತ ಮಹಾ ಶಕ್ತಿಯೇ ಸರಿ.

ಶಾಲೆಯ ಅಭಿವೃದ್ಧಿ ಮೂಲಕ ಮೌಲ್ಯಧಾರಿತ ಶಿಕ್ಷಣ ಮಕ್ಕಳಿಗೆ ದೊರಕುವಲ್ಲಿ ಭಾವನೆಗಳು ಹಾಗೂ ಕರ್ತವ್ಯಗಳನ್ನು ಕೊಂಡೊಯ್ಯಲು ಮಾಹಿತಿ ಅರಿವಿನ ಮೂಲಕ ನಮ್ಮೊಂದಿಗಿದ್ದ "ಪಡಿ" ಸಂಸ್ಥೆಗೆ ಮನಪೂರ್ವಕ ಧನ್ಯವಾದಗಳನ್ನು ಹೇಳುತ್ತೇವೆ.

## ಎಂಕ್ಲೆನ ಪೆರ್ಮೆದ ಶಾಲೆ – ನಮ್ಮ ಹೆಮ್ಮೆಯ ಶಾಲೆ ಪ್ರಶಸ್ತಿ ಗಳಿಸಿದ ಸರಕಾರಿ ಹಿರಿಯ ಪ್ರಾಥಮಿಕ ಶಾಲೆ, ಎಳಿಯಾಳ ಬೈಲೂರು, ಕ್ಲಸ್ಟರ್ ಕಾರ್ಕಳ

ಕಾರ್ಕಳ ತಾಲೂಕಿನ ಬೈಲೂರು ಕ್ಲಸ್ಟರ್‌ಗೆ ಒಳಗೊಂಡಿರುವ ಎಂಕ್ಲೆನ ಪೆರ್ಮೆದ ಶಾಲೆ ಪ್ರಶಸ್ತಿ ಸಿಕ್ಕಿದ ಶಾಲೆ. ಅದು ಸರಕಾರಿ ಹಿರಿಯ ಪ್ರಾಥಮಿಕ ಶಾಲೆ ಎಳಿಯಾಳ. ಈ ಶಾಲೆಯಲ್ಲಿ 8 ಶಿಕ್ಷಕರಿದ್ದು, ಶಾಲೆಯ ಭೌತಿಕ ಪರಿಸರ ಉತ್ತಮವಾಗಿದ್ದು, ಒಟ್ಟು 120 ಮಕ್ಕಳಿರುತ್ತಾರೆ. ಆದರೆ ಈ ಶಾಲಾ ಮಕ್ಕಳಿಗೆ ಉತ್ತಮ ಶಿಕ್ಷಣ ಮತ್ತು ಶಾಲಾ ಮಕ್ಕಳಿಗೆ ಅನುಕೂಲವಾಗುವಂತ ವ್ಯವಸ್ಥೆಯನ್ನು ನಿರ್ಮಾಣ ಮಾಡುವಲ್ಲಿ ಶಾಲಾ ಮುಖ್ಯೋಪಾದ್ಯಾಯರು, ಎಸ್.ಡಿ.ಎಮ್.ಸಿ.ಯವರು ತಮ್ಮ ಸಭೆಗಳಲ್ಲಿ ಎಸ್.ಡಿ.ಪಿ. ಯೋಜನೆಯ ಮೂಲಕ ಕೆಲವು ಯೋಜನೆಗಳನ್ನು ಹಮ್ಮಿಕೊಂಡಿದ್ದರು. ಆದರೆ ಯೋಜನೆಗಳು ಸಫಲವಾಗಬೇಕಾದರೆ ಮುಖ್ಯವಾಗಿ ಊರಿನವರು ಹಾಗೂ ಕೆಲವು ದಾನಿಗಳ ಸಂಪರ್ಕ ಮಾಡಬೇಕಾಗುತ್ತದೆ. ಕೊನೆಗೆ ಎಸ್.ಡಿ.ಎಮ್.ಸಿ ಶಾಲಾ ಶಿಕ್ಷಕರ ಅನುಕೂಲವಾಗುವಂತೆ ಮಕ್ಕಳಿಗೆ ಊಟ ಮಾಡಲು ಮತ್ತು ಶಾಲಾ ಕಾರ್ಯಕ್ರಮಗಳನ್ನು ಮಾಡಲು ಶಾಲಾ ಅಂಗಳದ ವ್ಯವಸ್ಥೆಯನ್ನು ಊರಿನ ಗಣೇಶೋತ್ಸವ ಸಮಿತಿಯ ಮುಖಾಂತರ ಒಳ್ಳೆಯ ವ್ಯವಸ್ಥೆಯನ್ನು ಕಲ್ಪಿಸಲಾಯಿತು.

ತದನಂತರದಲ್ಲಿ ಎಸ್.ಡಿ.ಪಿ. ಯೋಜನೆಯಂತೆ ದಾನಿಗಳ ಸಂಪರ್ಕದಿಂದ ಮಕ್ಕಳ ಕಲಿಕಾ ಮಟ್ಟ ಹೆಚ್ಚಿಸುವ ನಿಟ್ಟಿನಲ್ಲಿ ಶಾಲೆಗೆ ಕಂಪ್ಯೂಟರ್ ಹಾಗೂ ಪ್ರಾಜೆಕ್ಟರ್, ಸೌಂಡ್ ಬಾಕ್ಸ್‌ಗಳನ್ನು ನೀಡಿದ್ದು, ಇದರಿಂದಾಗಿ ಮಕ್ಕಳಿಗೆ ಪಠ್ಯಗಳು ಸುಲಭವಾಗಿ ಅರ್ಥವಾಗುವಂತೆ ಸಹಾಯಕವಾಗುತ್ತದೆ. ಈ ಮಕ್ಕಳಿಗೆ ಬೇಕಾಗುವ ಎಲ್ಲಾ ವ್ಯವಸ್ಥೆಗಳನ್ನು ಎಸ್.ಡಿ.ಎಮ್.ಸಿ ಮತ್ತು ಶಿಕ್ಷಕರು ಎಳಿಯಾಳ ಶಾಲೆ ಒಂದು ಉತ್ತಮ ಮಾದರಿ ಶಾಲೆಯನ್ನಾಗಿ ಮಾಡಲು ಪ್ರಯತ್ನ ಪಟ್ಟಿದ್ದಾರೆ.

*****

# ಶಾಲಾ ದುರಸ್ತಿಗೆ ದೊರೆಯಿತು ಶಾಸಕರ ಅನುದಾನ

ಶಾಲೆ ಎಂದರೆ ಮಕ್ಕಳಿಗೆ ಆಕರ್ಷಕವಾಗಿರಬೇಕು ಮಕ್ಕಳು ಮುಕ್ತವಾಗಿ ಓಡಾಡಲು ಅನುಕೂಲವಾಗಬೇಕು ಮಕ್ಕಳಿಗೆ ಸೂಕ್ತ ವೇದಿಕೆಯಿರಬೇಕು ಎಂಬುದು ಎಲ್ಲಾ



ಪೋಷಕರ ಆಶಯ ವಾಗಿರುತ್ತದೆ. ಹೀಗೆ ಪೋಷಕರ ಆಶಯಕ್ಕೆ ಮಕ್ಕಳ ಕನಸಿಗೆ ಬಣ್ಣ ತುಂಬಿರುವವರು ಕಬಕ ಶಾಲೆಯ ಶಾಲಾಭಿ ವೃದ್ಧಿ ಮತ್ತು ಮೇಲುಸ್ತುವಾರಿ ಸಮಿತಿಯವರು. ಸರಕಾರಿ ಹಿರಿಯ ಪ್ರಾಥಮಿಕ ಶಾಲೆ, ಕಬಕ ಇದು ಕಬಕ ಗ್ರಾಮ ಪಂಚಾಯತ್ ವ್ಯಾಪ್ತಿಯಲ್ಲಿ ಇದೆ. ಇಲ್ಲಿ ಹಿಂದುಳಿದ, ಅಲ್ಪಸಂಖ್ಯಾತ ಹಾಗೂ ಪರಿಶಿಷ್ಟ ವರ್ಗದ ಮಕ್ಕಳು ಓದುತ್ತಿದ್ದಾರೆ. ಹೆಚ್ಚಿನ ಪೋಷಕರು ಕೂಲಿ ಕಾರ್ಮಿಕರಾಗಿ ದುಡಿಯುತ್ತಿದಾರೆ. ಪಡಿ ಸಂಸ್ಥೆಯು ಮಗುಸ್ನೇಹಿ ಯೋಜನೆಯಡಿಯಲ್ಲಿ ಈ ಶಾಲೆಯನ್ನು ಆಯ್ಕೆ ಮಾಡಿಕೊಂಡು ಶಾಲಾ ಸ್ಥಿತಿ–ಗತಿಗಳನ್ನು ಅಧ್ಯಯನ ಮಾಡಿದಾಗ ಶಾಲೆಯ ಮಕ್ಕಳ ಕಲಿಕಾ ಮಟ್ಟ, ಮೂಲಭೂತ ಸೌಕರ್ಯ ಪೋಷಕರ ಭಾಗವಹಿಸುವಿಕೆ, ಎಸ್.ಡಿ.ಎಮ್.ಸಿ ಭಾಗವಹಿಸುವಿಕೆ ಇರಲಿಲ್ಲ. ನಂತರ ಸಂಸ್ಥೆಯು ಶಿಕ್ಷಣ ಸಂಪನ್ಮೂಲ ಕೇಂದ್ರದ ಸದಸ್ಯರಿಗೆ ಸೂಚ್ಯಂಕಗಳ ಆಧಾರದಲ್ಲಿ ಮೌಲ್ಯಮಾಪನ ಮಾಡುವ ತರಬೇತಿಯನ್ನು ನೀಡಿ ಆ ಮೂಲಕ ಶಾಲಾಭಿವೃದ್ಧಿ ಮತ್ತು ಮೇಲುಸ್ತುವಾರಿ ಸಮಿತಿಯವರು ಪರಿಣಾಮಕಾರಿಯಾಗಿ ಭಾಗವಹಿಸುವಂತೆ ಮಾಡಲಾಯಿತು.

ನಂತರದ ದಿನಗಳಲ್ಲಿ ಶಾಲಾಭಿವೃದ್ಧಿ ಮತ್ತು ಮೇಲುಸ್ತುವಾರಿ ಸಮಿತಿಯವರು ಪೋಷಕರ ಸಭೆ, ಮತ್ತು ಅವರ ಸಮಿತಿ ಸಭೆಗಳಲ್ಲಿ ಶಾಲಾ ಅಭಿವೃದ್ಧಿ ಕುರಿತು ಚರ್ಚಿಸುತ್ತಿದ್ದರು. ಆಗ ಪೋಷಕರು ಮಕ್ಕಳು, ಸಮಿತಿಯವರು ಶಾಲಾ



ದುರಸ್ತಿ ಮಾಡಬೇಕು ಮತ್ತು ಮಕ್ಕಳ ರಕ್ಷಣೆಗೆ ಆದ್ಯತೆ ನೀಡಬೇಕು ಎಂಬ ವಿಷಯವನ್ನು ಗಂಭೀರವಾಗಿ ಪರಿಗಣಿಸಿ ಶಾಲಾಭಿವೃದ್ಧಿ ಯೋಜನೆಯನ್ನು ರಚಿಸಿ ಅದರಲ್ಲಿ ದುರಸ್ತಿಗಾಗಿ 100000 ರೂ ಬೇಡಿಕೆಯಿಟ್ಟು ಪಂಚಾಯತ್, ಇಲಾಖೆಗಳು ಹಾಗೂ ತಾಲೂಕು ಪಂಚಾಯತ್ ಮತ್ತು ಜಿಲ್ಲಾ ಪಂಚಾಯತ್‌ಗಳಿಗೆ ನೀಡಿದರು. ಮತ್ತು ಸತತವಾಗಿ ಶಾಲಾಭಿವೃದ್ಧಿ ಮತ್ತು ಮೇಲುಸ್ತುವಾರಿ ಸಮಿತಿಯವರು ಅನುಸರಣೆ ಮಾಡಿರುವ ಫಲವಾಗಿ ಶಾಸಕರ ನಿಧಿಯಿಂದ ಪಂಚಾಯತ್ ಮೂಲಕ ಶಾಲಾ ದುರಸ್ತಿಗಾಗಿ ಅನುದಾನ ದೊರೆಯಿತು. ಇದನ್ನು ಸ್ವತಃ ಶಾಲಾಭಿವೃದ್ಧಿ ಸಮಿತಿ ಮುಂದೆ ನಿಂತು ದುರಸ್ತಿ ಕಾರ್ಯವನ್ನು ಮೇಲ್ವಿಚಾರಣೆ ನಡೆಸಿ ಶಾಲೆಯ ಮಕ್ಕಳ, ಪೋಷಕರ ಆಶಯವನ್ನು ಈಡೇರಿಸಿತು.



ಇದರಿಂದಾಗಿ ಶಾಲೆ ಮಕ್ಕಳಿಗೆ ಆಕರ್ಷಕವಾಗಿ ಮಕ್ಕಳು ಯಾವುದೇ ಭೀತಿಯಿಲ್ಲದೆ ಮುಕ್ತವಾಗಿ ಓಡಾಡಲು ಅನುಕೂಲ ವಾಯಿತು. ಮಳೆಗಾಲದಲ್ಲಿ ಸೋರುವುದು ನಿಂತು ಮಕ್ಕಳು ಆರಾಮವಾಗಿ ಬೆಚ್ಚನೆ ಕುಳಿತು ಪಾಠ ಕೇಳಲು ಅನುಕೂಲ ವಾಯಿತು. ಪೋಷಕರಿಗೂ ಮಕ್ಕಳ ಸುರಕ್ಷತೆಯ ಕುರಿತು ಇದ್ದ ಆತಂಕ ದೂರವಾಗಿ ಪ್ರತಿದಿನ ಮಕ್ಕಳು ಶಾಲೆಗೆ ಬರಲು ಪ್ರೇರೇಪಿಸುತ್ತಿದ್ದಾರೆ.

ಪಡಿ ಸಂಸ್ಥೆಯು ಶಾಲಾಭಿವೃದ್ಧಿ ಮತ್ತು ಮೇಲುಸ್ತುವಾರಿ ಸಮಿತಿ ಸದಸ್ಯರಿಗೆ ತರಬೇತಿ ನೀಡಿ ಶಾಲಾಭಿವೃದ್ಧಿ ಯೋಜನೆ ರಚಿಸಿ ಎಸ್.ಡಿ.ಎಮ್.ಸಿಯವರು ಅದರ ಅನುಸರಣೆ ಅನುಷ್ಠಾನ ಮಾಡುವುದು ಹಾಗೂ ಶಾಲಾಭಿವೃದ್ಧಿಯಲ್ಲಿ ತಮ್ಮ ಜವಾಬ್ದಾರಿಯನ್ನು ನಿಭಾಯಿಸುವಲ್ಲಿ ಪ್ರತೀ ಮೂರು ತಿಂಗಳಿಗೊಮ್ಮೆ ಮೌಲ್ಯಮಾಪನ ನಡೆಸುವುದರ ಮೂಲಕ ಎಸ್.ಡಿ.ಎಮ್.ಸಿ ಕರ್ತವ್ಯಗಳನ್ನು ತಿಳಿಸಿ ಮಾರ್ಗದರ್ಶನ ನೀಡುವುದರ ಮೂಲಕ ಶಾಲಾಬಿವೃದ್ಧಿ ಸಮಿತಿ ಕ್ರಿಯಾಶೀಲರಾಗಿ ಶಾಲಾಭಿವೃದ್ಧಿಯಲ್ಲಿ ಭಾಗವಹಿಸುವಂತಾಯಿತು ಎಂಬುದು ಶಿಕ್ಷಕರ ನಿಲುವು.

*****

# ಶಾಲಾ ಭದ್ರತೆಗೆ ರೆಡಿಯಾಯಿತು ತಂತಿ ಬೇಲಿ

ಸರಕಾರಿ ಹಿರಿಯ ಪ್ರಾಥಮಿಕ ಶಾಲೆ, ರಾಗಿ ಕುಮೇರು ಇದು ಪುತ್ತೂರು ನಗರ ಸಭೆ ವ್ಯಾಪ್ತಿಯಲ್ಲಿ ಇದೆ. ಇಲ್ಲಿ ಹಿಂದುಳಿದ, ಅಲ್ಪಸಂಖ್ಯಾತ ಹಾಗೂ ಪರಿಶಿಷ್ಟ ವರ್ಗದ ಮಕ್ಕಳು ಓದುತ್ತಿದ್ದಾರೆ. ಹೆಚ್ಚಿನ ಪೋಷಕರು ಕೂಲಿ ಕಾರ್ಮಿಕರಾಗಿ ದುಡಿಯುತ್ತಿದ್ದಾರೆ.

ಪಡಿ ಮಗುಸ್ನೇಹಿ ಯೋಜನೆಯಡಿಯಲ್ಲಿ ಈ ಶಾಲೆಯನ್ನು ಆಯ್ಕೆ ಮಾಡಿಕೊಂಡು ಶಾಲಾ ಸ್ಥಿತಿ–ಗತಿಗಳನ್ನು ಅಧ್ಯಯನ ಮಾಡಿದಾಗ ಶಾಲೆಯ ಮಕ್ಕಳ ಕಲಿಕಾ ಮಟ್ಟ, ಮೂಲಭೂತ ಸೌಕರ್ಯ, ಪೋಷಕರ ಭಾಗವಹಿಸುವಿಕೆ, ಎಸ್.ಡಿ.ಎಮ್.ಸಿ ಭಾಗವಹಿಸುವಿಕೆ ಇರಲಿಲ್ಲ. ಈ ಶಾಲೆಯು ನಗರ ಸಭಾ ವ್ಯಾಪ್ತಿಗೆ ಒಳಪಟ್ಟಿರುವುದರಿಂದ ಇಲ್ಲಿಗೆ ಯಾವುದೇ ರೀತಿಯ ಸೌಲಭ್ಯ ದೊರೆತಿರಲಿಲ್ಲ. ಇಲ್ಲಿನ ಪೋಷಕರು ಕೂಡ ಶಾಲಾ ಚಟುವಟಿಕೆಗಳಲ್ಲಿ ಭಾಗವಹಿಸುತ್ತಿರಲಿಲ್ಲ. ಎಸ್.ಡಿ.ಎಮ್.ಸಿಯೂ ಕೂಡ ನಿರಾಸಕ್ತಿಯನ್ನು ಹೊಂದಿತ್ತು. ಶಾಲಾ ಮಕ್ಕಳಿಗೆ ಯವುದೇ ರೀತಿಯ ಸುರಕ್ಷತೆ ಕೂಡ ಇರಲಿಲ್ಲ. ಶಾಲಾ ಆವರಣಾ ಗೋಡೆ ಇಲ್ಲದಿದ್ದುದರಿಂದ ಶಾಲಾ ಸಮಯದ ನಂತರ ಊರಿನ ಕೆಲ ಯುವಕರು ಶಾಲಾ ವಠಾರದಲ್ಲಿ ಗುಟ್ಕಾ, ಪಾನ್ ಪರಾಗ್ ತಿನ್ನುವುದು, ಸಿಗರೇಟ್ ಸೇದುವುದು, ಮದ್ಯಪಾನ ಮಾಡುವುದು ಒಟ್ಟಾರೆಯಾಗಿ ಶಾಲಾ ವಾತಾವರಣಕ್ಕೆ ಧಕ್ಕೆ ತರುವಂತಹ ಕೆಲಸ ಮಾಡುತ್ತಿದ್ದರು. ಆದರೆ ಶಾಲೆಗೆ ಆವರಣ ಗೋಡೆ ಮಾಡಲು ಶಾಲೆಗೆ ಯಾವುದೇ ರೀತಿಯ ಅನುದಾನ ಸಿಗುತ್ತಿರಲಿಲ್ಲ ಹಾಗೂ ದಾನಿಗಳ ನೆರವು ಇರಲಿಲ್ಲ. ಇವೆಲ್ಲಕ್ಕಿಂತ ಹೆಚ್ಚಾಗಿ ದಾನಿಗಳ ನೆರವು ಯಾವ ರೀತಿ ಪಡೆದುಕೊಳ್ಳಬೇಕೆಂಬುದು ಎಸ್.ಡಿ.ಎಮ್.ಸಿ. ಗೆ ತಿಳಿದಿರಲಿಲ್ಲ.

ಇದನ್ನೆಲ್ಲ ಮನಗಂಡ ಪಡಿ ಯೋಜನೆಯು ಶಿಕ್ಷಣ ಸಂಪನ್ಮೂಲ ಕೇಂದ್ರದ ಜತೆಗೂಡಿ ಈ ಶಾಲೆಯ ಶಾಲಾಭಿವೃದ್ಧಿ ಸಮಿತಿಯನ್ನು ಬಲವರ್ಧನೆಗೊಳಿಸಿ ಅವರೇ ಈ ಸಮಸ್ಯೆಗೆ ಪರಿಹಾರ ಕಂಡುಕೊಳ್ಳಲು ಅವರನ್ನು ಸಜ್ಜುಗೊಳಿಸಲು ಯೋಜನೆಗಳನ್ನು ರೂಪಿಸಿತು. ಹಾಗೂ ಎಸ್.ಡಿ.ಎವ್.ಸಿಯುವರ ಜವಾಬ್ದಾರಿ ಪಾತ್ರದ ಕುರಿತು ತರಬೇತಿ. 2. ಶಾಲಾಭಿವೃದ್ಧಿ ಯೋಜನೆ ಕುರಿತು ತರಬೇತಿ.



3. ಶಾಲಾಭಿವೃದ್ಧಿ ಯೋಜನೆಯನ್ನು ವಿವಿಧ ಇಲಾಖೆಗಳು ಮತ್ತು ದಾನಿಗಳಿಗೆ ನೀಡಿರುವುದು. ನಿರಂತರ ಅನುಸರಣೆ ಹಾಗೂ ಪ್ರತೀ ಎಸ್.ಡಿ.ಎಮ್.ಸಿ ಸಭೆಗಳಲ್ಲಿ ಇದರ ಕುರಿತು ಚರ್ಚಿಸುವುದು.



ಈ ರೀತಿಯಾಗಿ ತರಬೇತಿಯನ್ನು ನೀಡಲಾಯಿತು. ನಂತರ ಶಾಲಾಭಿವೃದ್ಧಿ ಯೋಜನೆಯನ್ನು ತಯಾರಿಸಿ ಇಲಾಖೆ, ನಗರ ಸಭೆ, ಹಾಗೂ ವಿವಿಧ ಸಂಘ–ಸಂಸ್ಥೆಗಳಿಗೆ ನೀಡಿದರು. ಆದರೆ ಶಾಲಾಭಿವೃದ್ಧಿ ಯೋಜನೆಯನ್ನು ವಿವಿಧ ಇಲಾಖೆಗಳಿಗೆ ನೀಡಿದರೂ ಯಾರೋ ಸ್ಪಂದಿಸಲಿಲ್ಲ ಹಾಗೂ ಯಾವುದೇ ಅನುದಾನ ನಿಮ್ಮ ಶಾಲೆಗೆ ಇಲ್ಲ ಎಂದು ಹೇಳುತ್ತಿದ್ದರು. ಇದನ್ನು ಸವಾಲಾಗಿ ಸ್ವೀಕರಿಸಿದ ಎಸ್.ಡಿ.ಎಮ್.ಸಿ. ಯು ಸಮುದಾಯ ದತ್ತ ಶಾಲೆಯಂದು ಪೋಷಕರು ಹಾಗೂ ಎಸ್.ಡಿ.ಎಮ್.ಸಿಯವರು ಶಾಲಾ ಅವರಣ ಗೋಡೆಯ ಕುರಿತು ಚರ್ಚಿಸುತ್ತಾರೆ ನಂತರ ಪೋಷಕರು ಮತ್ತು ಎಸ್.ಡಿ.ಎಮ್.ಸಿಯವರು ಸ್ವತಃ ಹಣ ಹಾಕಿ ತಂತಿ ಬೇಲಿ ನಿರ್ಮಿಸುವುದೆಂದು ನಿರ್ಧರಿಸುತ್ತಾರೆ ಮತ್ತು ಅದಕ್ಕೆ ತಗಲುವ ಕೂಲಿ ಕೆಲಸವನ್ನು ಶ್ರಮದಾನದ ಮೂಲಕ ಮಾಡುವುದೆಂದು ತೀರ್ಮಾನಿಸುತ್ತಾರೆ. ಎಲ್ಲರೂ ಸೇರಿ 30000 ಸಾವಿರದಷ್ಟು ಹಣ ಹೊಂದಿಸಿ ನಂತರ ಶಿಕ್ಷಣ ಸಂಪನ್ಮೂಲ ಕೇಂದ್ರದಿಂದ 2500, ಶಾಲಾ ಅನುದಾನ 12000 ಬಳಸಿಕೊಂಡು ಶಾಲೆಗೆ ತಂತಿ ಬೇಲಿ ಮತ್ತು ಗೇಟ್ ಅನ್ನು ಮಾಡಿರುತ್ತಾರೆ.

ಇದೀಗ ಶಾಲೆಗೆ ತಂತಿ ಬೇಲಿ ಹಾಕಿರುವುದರಿಂದ ಶಾಲಾ ಅವರಣಕ್ಕೆ ಅನ್ಯ ವ್ಯಕ್ತಿಗಳು ಪ್ರವೇಶಿಸುವುದಿಲ್ಲ. ಶಾಲಾ ಅವರಣ ಸ್ವಚ್ಚವಾಗಿದೆ. ಮತ್ತು ಮಕ್ಕಳು ಭಯ–ಭೀತಿಯಿಲ್ಲದೆ ಶಾಲೆಗೆ ಬರುವಂತಾಗಿದೆ. ಇದೀಗ ಮಕ್ಕಳ ಬಿಸಿಯೂಟಕ್ಕಾಗಿ ಎಸ್.ಡಿ.ಎಮ್.ಸಿಯವರು ತರಕಾರಿಗಳನ್ನು ಬೆಳೆಯುತ್ತಿದ್ದಾರೆ. ಮಕ್ಕಳ ಸುರಕ್ಷತೆಗಾಗಿ ಶಾಲಾಭಿವೃದ್ಧಿ ಮತ್ತು ಮೇಲುಸ್ತುವಾರಿ ಸಮಿತಿ ಆವರಣವನ್ನು ನಿರ್ಮಿಸಿ ಮಗುಸ್ನೇಹಿ ವಾತಾವರಣವನ್ನು ನಿರ್ಮಿಸಿ ಮಕ್ಕಳು ಸ್ವಚ್ಛಂದವಾಗಿ ಓಡಾಡಲು ಅನುವು ಮಾಡಿಕೊಟ್ಟಿರುತ್ತಾರೆ. ಅವರ ಈ ಧನ್ಯತಾ ಭಾವವನ್ನು ಅವರು ವ್ಯಕ್ತಪಡಿಸಿರುವುದು ಹೀಗೆ :

ಶಾಲಾಭಿವೃದ್ಧಿ ಯೋಜನೆಯನ್ನು ರಚಿಸಿ ಅದನ್ನು ಹಾಗೇ ಬಿಡದೆ ನಿರಂತರ ಅನುಸರಣೆ ಮಾಡಿರುವುದರಿಂದ ನಾವು ನಮ್ಮ ಶಾಲೆಗೆ ತಂತಿ ಬೇಲಿ ನಿರ್ಮಿಸಲು ಸಾಧ್ಯವಾಗಿದೆ. ಈ ರೀತಿ ನಾವು, ಪೋಷಕರು ಶ್ರಮವಹಿಸಲು ಪಡಿ ಯೋಜನೆಯಿಂದ ದೊರೆತ ತರಬೇತಿ, ಮಾರ್ಗದರ್ಶನ ಕಾರಣವಾಗಿದೆ.

*****

## ನಮ್ಮ ಪಠ್ಯೇತರ ಚಟುವಟಿಕೆಗಳಿಗೆ ಭವ್ಯ ರಂಗಮಂದಿರ

**– ಕಾವಳ ಮೂಡೂರು ಶಾಲೆಯ ವಿದ್ಯಾರ್ಥಿಗಳು**

ಮಕ್ಕಳು ಕೇವಲ ಪಾಠಪ್ರವಚನಗಳಲ್ಲಿ ಗುರುತಿಸಿಕೊಂಡರೆ ಸಾಲದು. ಪಠ್ಯೇತರ ಚಟುವಟಿಕೆಗಳಲ್ಲೂ ತಮ್ಮನ್ನು ತೊಡಗಿಸಿಕೊಂಡು ಆಟಪಾಠಗಳಲ್ಲಿ ಸಮಾನವಾಗಿ ಬೆರೆತು ಮಗುಸ್ನೇಹಿ ಶಿಕ್ಷಣ ಪಡೆಯುವಂತವರಾಗಬೇಕು. ಈ ನಿಟ್ಟಿನಲ್ಲಿ ನಮಗೆ ಎಲ್ಲಾ ಚಟುವಟಿಕೆಗಳಲ್ಲಿ ಭಾಗವಹಿಸಲು ಅವಕಾಶ ಸಿಕ್ಕಿದೆ ಎಂದು ಕುಣಿದಾಡುತ್ತಾ ಹೇಳುತ್ತಾರೆ ಕಾವಳ ಮೂಡೂರು ಶಾಲೆಯ ವಿದ್ಯಾರ್ಥಿಗಳು.

ಮುಖ್ಯ ರಸ್ತೆಯ ಪಕ್ಕದಲ್ಲಿ ಕಾವಳಮೂಡೂರು ಶಾಲೆ ಇದ್ದರೂ ಇಲ್ಲಿ ಕಲಿಯುತ್ತಿರುವ ಮಕ್ಕಳು ಹಳ್ಳಿ ಪ್ರದೇಶದ ಬಡತನ ವರ್ಗದವರು ಇಲ್ಲಿ ಅಲ್ಪಸಂಖ್ಯಾತ SC/ST ವರ್ಗದ ಮಕ್ಕಳು ಅಧಿಕವಾಗಿ ಕಲಿಯುತ್ತಿದ್ದಾರೆ. ಖಾಸಗಿ ಶಾಲೆಗಳು ಮತ್ತು ಶಾಲಾ ವಾಹನಗಳು ಬೇಕಾದಷ್ಟು ಇದ್ದರೂ ಪೋಷಕರು ಸರ್ಕಾರಿ ಶಾಲೆಗೆ ತಮ್ಮ ಮಕ್ಕಳನ್ನು ಸೇರಿಸುತ್ತಿದ್ದಾರೆ. ಇದಕ್ಕೆ ಬಹುಮುಖ್ಯ ಕಾರಣ ಇಲ್ಲಿಯ ಕ್ರಿಯಾಶೀಲ SDMC ಸದಸ್ಯರು ಇಲ್ಲಿಯ SDMC ಸದಸ್ಯರು ತಮ್ಮ ಶಾಲೆಯ ಮಕ್ಕಳಿಗೆ ಮಗುಸ್ನೇಹಿ ಕಲಿಕಾ ವಾತಾವರಣ ನಿರ್ಮಿಸಲು ಕಂಕಣಬದ್ಧರಾಗಿ ಕ್ರಿಯಾಯೋಜನೆಗಳನ್ನು ಅಳವಡಿಸಿಕೊಂಡು ಕಾರ್ಯಪ್ರವೃತರಾಗಿ ಯಶಸ್ವಿಯಾಗಿದ್ದಾರೆ.

ಇಲ್ಲಿನ SDMCಯವರು ಕ್ರಿಯಾಯೋಜನೆಗಳನ್ನು ರಚಿಸಿ ಸಂಬಂಧಪಟ್ಟ ಗ್ರಾಮಪಂಚಾಯತ್, ತಾಲೂಕು ಪಂಚಾಯತ್, ಜಿಲ್ಲಾ ಪಂಚಾಯತ್ ಸದಸ್ಯರಿಗೆ ನೀಡಿದೆ. ಕೆಲವು ದಾನಿಗಳಿಗೂ ನೀಡಿ ನಿರಂತರ ಅನುಸರಣೆಯನ್ನು ಮಾಡಿದ್ದುದರ ಫಲವಾಗಿ ತಮ್ಮ ಶಾಲಾ ಮಕ್ಕಳಿಗೆ ಉತ್ತಮ ರಂಗಮಂದಿರ ನಿರ್ಮಿಸಿ ಮಕ್ಕಳ ಪಠ್ಯೇತರ ಚಟುವಟಿಕೆಗಳಿಗೂ ಅವಕಾಶ ಮಾಡಿಕೊಟ್ಟಿರುತ್ತಾರೆ. ಅಲ್ಲದೆ ಶಾಲಾ ಮದ್ಯಾಹ್ನದ ಬಿಸಿಯೂಟಕ್ಕೆ ಕೊಠಡಿಯನ್ನು ಜಿಲ್ಲಾ ಪಂಚಾಯತ್ ಮುಖಾಂತರ ಪಡೆದುಕೊಂಡಿರುತ್ತಾರೆ. ಶಾಲೆಗೆ ತಡೆಗೋಡೆ ಮತ್ತು ಗೇಟ್ ಗ್ರಾಮ ಪಂಚಾಯತ್

ಮತ್ತು ದಾನಿಗಳಿಂದ ಪಡೆದುಕೊಂಡಿರುತ್ತಾರೆ. ಹೀಗೆ ಹತ್ತು ಹಲವು ರೀತಿಗಳಲ್ಲಿ SDMC ಯವರು ತಮ್ಮ ಕಾರ್ಯ ವೈಖರಿಯನ್ನು ವಿಶಿಷ್ಟ ರೀತಿಯಲ್ಲಿ ನಿಭಾಯಿಸುತ್ತಾ ತಮ್ಮ ಶಾಲೆಯ ಸರ್ವತೋಮುಖ ಅಭಿವೃದ್ಧಿಯೆಡೆ ಕಾರ್ಯಚರಿಸುವ ಪ್ರವೃತ್ತಿಯನ್ನು ಬೆಳೆಸಿಕೊಂಡಿದ್ದಾರೆ.

**ಈ ಎಲ್ಲಾ ಅಂಶಗಳ ಮೇಲೆ SDMCಯವರ ಜೊತೆ ಮಾತಕತೆ ನಡೆಸಿದಾಗ:–** ನಮಗೆ ನಮ್ಮ ಶಾಲೆಯನ್ನು ಒಳ್ಳೆಯ ರೀತಿಯಲ್ಲಿ ಅಭಿವೃದ್ಧಿ ಪಡಿಸಬೇಕು ಎನ್ನುವ ಬಯಕೆಗಳು ಇದ್ದವು. ಆದರೆ ಹೇಗೆ ಕೆಲಸಕಾರ್ಯಗಳನ್ನು ಮಾಡುವುದು ಅನ್ನುವುದರ ಅರಿವೇ ನಮಗಿರಲಿಲ್ಲ. ಈ ಸಮಯದಲ್ಲಿ ನಮಗೆ ವರವಾಗಿ ಸಿಕ್ಕಿದ್ದು ಪಡಿಸಂಸ್ಥೆ. ನಮ್ಮ ಶಾಲೆಯಲ್ಲಿ ಪಡಿ ಸಂಸ್ಥೆಯ ಮಗುಸ್ನೇಹಿ ಯೋಜನೆಯ ಅನುಷ್ಠಾನದ ಕುರಿತು ನಡೆದ ವಿವಿಧ ತರಬೇತಿ, ಮಾಹಿತಿ ಕಾರ್ಯಾಗಾರ, ಶಾಲಾಭಿವೃದ್ಧಿಯಲ್ಲಿ SDMCಯವರ ಪಾತ್ರ ಮತ್ತು ಜವಾಬ್ದಾರಿಗಳು, ಮಗುಸ್ನೇಹಿ ಸಮುದಾಯ, ಯಾವ ರೀತಿ ನಮ್ಮ ಕಾರ್ಯಗಳ ಮೌಲ್ಯಮಾಪನಗಳನ್ನು ಮಾಡುತ್ತಾ ಕ್ರಿಯಾಶೀಲರಾಗುವುದು, ಸರಕಾರದ ವಿವಿಧ ಇಲಾಖೆಗಳ ಜವಾಬ್ದಾರಿಗಳ ಅರಿವುಗಳನ್ನು ಮೂಡಿಸಿದ್ದು. ಅಲ್ಲದೆ ನಿರಂತರ ಶಾಲಾ ಬೇಟಿ, SDMC ಸಭೆಗಳನ್ನು ಮಾಡುವಾಗ ಭೇಟಿ ನೀಡಿ ಮಾಹಿತಿಗಳನ್ನು ನೀಡಿರುವುದಷ್ಟೇ ಅಲ್ಲ ಶಾಲಾ ಕ್ರಿಯಾಯೋಜನೆಗಳನ್ನು ರಚಿಸುವಲ್ಲಿ ಮಾರ್ಗದರ್ಶನ ಸಹಕಾರವನ್ನು ನೀಡಿರುತ್ತಾರೆ.

ಪಡಿ ಯೋಜನೆಯ ಸತತ ಮಾರ್ಗದರ್ಶನದಿಂದಾಗಿ ಶಾಲಾ ಮೂಲಭೂತ ಸೌಕರ್ಯಗಳಾದ ರಂಗಮಂದಿರ ನಿರ್ಮಾಣ, ಬಿಸಿಯೂಟದ ಕೊಠಡಿ, ಶಾಲಾ ಆವರಣಕ್ಕೆ ಆವರಣ ಗೋಡೆ, ಗೋಡೆಗಳ ಅಳವಡಿಕೆ, ಪಂಚಾಯತ್ ಮುಖಾಂತರ ಶಾಲಾ ಬಾವಿಯನ್ನು ಶುದ್ದಗೊಳಿಸಿ ಪಂಪ್‌ಗಳ ಅಳವಡಿಕೆ ಮಾತ್ರವಲ್ಲದೆ, ಮಕ್ಕಳ ಹಕ್ಕುಗಳ ಕ್ಲಬ್, ಮಕ್ಕಳ ಸಂಸತ್ತು, ಮಕ್ಕಳ ಸುರಕ್ಷಾ ಸಮಿತಿ, ಮಕ್ಕಳ ಸುರಕ್ಷಾ ನೀತಿ ಉತ್ತಮ ರೀತಿಯಲ್ಲಿ ರಚಿಸಿ ಕಾರ್ಯ ನಿರ್ವಹಿಸಲು ಅವಕಾಶ ಸಿಕ್ಕಿರುತ್ತದೆ.

ಇದರೊಂದಿಗೆ ಪೋಷಕರೊಂದಿಗೆ ಸೇರಿಕೊಂಡು ಉತ್ತಮ ಹಾಜರಾತಿಯೊಂದಿಗೆ ಸಮುದಾಯದತ್ತ ಶಾಲಾ ಕಾರ್ಯಕ್ರಮ ಶಾಲಾ ದಾಖಲಾತಿ ಆಂದೋಲನಕ್ಕಾಗಿ ಮನೆ ಭೇಟಿ, 3 ತಿಂಗಳಿಗೊಮ್ಮೆ ಪೋಷಕರ ಸಭೆ, ಪಂಚಾಯತ್ ನಡೆಸುವ ಕೆಡಿಪಿ ಸಭೆಗಳಿಗೆ ಭೇಟಿ ನೀಡಿ ಶಾಲಾ ಸಮಸ್ಯೆಗಳ ಬಗ್ಗೆ ಪಂಚಾಯತ್ ಜೊತೆ ತಿಳಿಸುವುದು ಮುಂತಾದ ಕಾರ್ಯಗಳನ್ನು ಎಸ್‌ಡಿಎಂಸಿ. ನಿರಂತರವಾಗಿ ಕೈಗೊಳ್ಳುತ್ತಿದೆ ಮತ್ತು ಶಾಲಾಭಿವೃದ್ಧಿಯ ಮೇಲುಸ್ತುವಾರಿಗಳನ್ನು ಮಾಡುತ್ತಿದೆ.

ನಮ್ಮ ಶಾಲೆಯಲ್ಲಿ ಹಿಂದೆ ಯಾವುದೇ ಮೂಲಭೂತ ಸೌಕರ್ಯಗಳು ಇರಲಿಲ್ಲ. ಆದರೆ ನಮ್ಮ SDMCಯ ಸದಸ್ಯರು ನಮ್ಮ ಸಮಸ್ಯೆಗಳನ್ನು ಮನಗಂಡು ನಮಗೆ ಅಗತ್ಯವಿದ್ದ ರಂಗಮಂದಿರವನ್ನು ನಿರ್ಮಿಸಿ ನಮ್ಮ ಎಲ್ಲಾ ಹಕ್ಕುಗಳನ್ನು ಅನುಭವಿಸಲು ಅವಕಾಶ ಮಾಡಿಕೊಟ್ಟಿದ್ದಾರೆ ಎಂದು ಶಾಲಾ ವಿದ್ಯಾರ್ಥಿಗಳು ಸಂತೋಷ ಪಡುತ್ತಿದ್ದಾರೆ.

*****

## ಬೀದಿಯಲ್ಲಿ ಅಲೆಯುತ್ತಿದ್ದ ಮಕ್ಕಳನ್ನು ಶಾಲೆಗೆ ತಂದ ಮಾದರಿ ಎಸ್‌ಡಿಎಂಸಿ

ಒಂದು ಶಾಲೆಯಲ್ಲಿ ಎಲ್ಲಾ ಸೌಲಭ್ಯಗಳು ಇದ್ದರೆ ಸಾಲದು. ಆ ಸೌಲಭ್ಯಗಳನ್ನು ಅನುಭವಿಸಿಕೊಂಡು ಕಲಿಯಲು ಆ ಶಾಲಾ ವ್ಯಾಪ್ತಿಯಲ್ಲಿ ಎಲ್ಲಾ ಮಕ್ಕಳು ಶಾಲೆಗೆ ಹಾಜರಾಗಬೇಕು. ಇದಕ್ಕಾಗಿ ಪಣತೊಟ್ಟು ಮದ್ವ ಸರಕಾರಿ ಹಿರಿಯ ಪ್ರಾಥಮಿಕ ಶಾಲೆಯ ಎಸ್‌ಡಿಎಂಸಿಯ ಸಾಹಸವಿದು. ಮದ್ವ ಹಿರಿಯ ಪ್ರಾಥಮಿಕ ಶಾಲೆಯು ಬಂಟ್ವಾಳ ತಾಲೂಕಿನ ಕಾವಳಪಡೂರು ಗ್ರಾಮಪಂಚಾಯತ್ ವ್ಯಾಪ್ತಿಯಲ್ಲಿದೆ. ಈ ಶಾಲಾ ವ್ಯಾಪ್ತಿಯಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡ ಸಮುದಾಯ ಅಲ್ಲದೆ ಅಲ್ಪಸಂಖ್ಯಾತ ಸಮುದಾಯ ಹೆಚ್ಚಿನ ಸಂಖ್ಯೆಯಲ್ಲಿದ್ದು ಪರಿಶಿಷ್ಟ ಜಾತಿ ಕಾಲೊನಿಯ ಮಕ್ಕಳು ಶಾಲೆಗೆ ದಾಖಲಾಗುತ್ತಿದ್ದು ಸರಿಯಾಗಿ ಹಾಜರಾತಿ ಇರುತ್ತಿರಲಿಲ್ಲ. ಈ ಬಗ್ಗೆ ಶಿಕ್ಷಕರು ಅನೇಕ ಸಲ ಮನೆ ಭೇಟಿ ನಡೆಸಿ ಫಲಿತಾಂಶ ಕಾಣದೆ ಸೋತಿದ್ದರು.

ಆದರೆ ಅಲ್ಲಿಯ ಎಸ್‌ಡಿಎಂಸಿ ಸಮಿತಿಯ ಸದಸ್ಯರು ಒಟ್ಟಾಗಿ ಈ ಬಗ್ಗೆ ಕಾರ್ಯಪ್ರವೃತರಾದರು. ಸೂಕ್ತ ಸಲಹೆಗಳನ್ನು ಪಡೆದುಕೊಂಡು ಎಸ್‌ಡಿಎಂಸಿ ಸಭೆಗಳನ್ನು ನಡೆಸಿ ಅದರಲ್ಲಿ ನಿರ್ಣಯಿಸಿ ಪೊಲೀಸ್ ಸಹಕಾರದೊಂದಿಗೆ ಕಾಲೋನಿಗಳಿಗೆ ಭೇಟಿ ನೀಡಿ ಶಾಲೆಗೆ ಹಾಜರಾಗುತ್ತಿದ್ದ ಮಕ್ಕಳಿಗೆ ಮತ್ತು ಮನೆಯವರಿಗೆ ತಿಳಿಹೇಳಿ ಮನವರಿಕೆ ಮಾಡಿಸಿ ಶಾಲೆಗೆ ಕರೆತಂದರು. ಅಲ್ಲದೆ ಆಗಾಗೆ ಈ ಮಕ್ಕಳ ಪೋಷಕರನ್ನು ಬೇಟಿ ಮಾಡಿ ಸಮಸ್ಯೆಗಳ ಬಗ್ಗೆ ತಿಳಿದು ಪರಿಹಾರಗಳನ್ನು ನೀಡುತ್ತಿದ್ದರು. ಸದ್ರಿ ಆ ಮಕ್ಕಳು ನಿರಂತರ ಶಾಲೆಗೆ ಹಾಜರಾಗಿ ಸಂತೋಷದಿಂದ ಶಾಲಾ ಕಲಿಕೆಯಲ್ಲಿ ಪಾಲ್ಗೊಳ್ಳುತ್ತಿದ್ದಾರೆ ಅಲ್ಲದೆ ಎಲ್ಲಾ ಚಟುವಟಿಕೆಗಳಲ್ಲಿ ಆಸಕ್ತಿಯಿಂದ ಭಾಗಿದಾರರಾಗುತ್ತಿದ್ದಾರೆ. ಇದರಿಂದಾಗಿ ಆ ವ್ಯಾಪ್ತಿಯಲ್ಲಿ ಜನರಿಗೆ ಎಸ್‌ಡಿಎಂಸಿಯ ಬಗ್ಗೆ ಉತ್ತಮ ಅಭಿಪ್ರಾಯ ವ್ಯಕ್ತವಾಗಿದೆ. ಅಲ್ಲದೆ ಎಸ್‌ಡಿಎಂಸಿ ಶಾಲೆಯ ಎಲ್ಲಾ ಕಾರ್ಯಗಳಲ್ಲೂ ತನ್ನನ್ನು ಸಕ್ರಿಯವಾಗಿ ತೊಡಗಿಸಿಕೊಂಡಿರುವುದು ಶ್ಲಾಘನೀಯ. ತರಕಾರಿಗಳನ್ನು ಬೆಳೆಸಿ ಮಕ್ಕಳಿಗೆ ಉತ್ತಮವಾಗಿ ಬಿಸಿಯೂಟ ನೀಡುತ್ತಾರೆ. ಶುಚಿತ್ವಕ್ಕೆ ಆದ್ಯತೆಯನ್ನು ನೀಡಿ ಮೇಲ್ವಿಚಾರಣೆಯನ್ನು ಮಾಡುತ್ತಿದ್ದಾರೆ. ಬಿಸಿಯೂಟದ ಅಡುಗೆಯವರಿಗೆ Apronಗಳನ್ನು ಸ್ವತಃ ತಮ್ಮ ಖರ್ಚಿನಿಂದ ನೀಡುತ್ತಿದ್ದಾರೆ.

ಎಸ್‌ಡಿಎಂಸಿಯು ಶಾಲಾ ಕ್ರಿಯಾಯೋಜನೆಯನ್ನು ಮಾಡಿ ಪಂಚಾಯತ್ ಅನುಸರಣೆಯನ್ನು ಮಾಡಿ ಪಂಚಾಯತ್ ಮುಖಾಂತರ ಶಾಲಾ ತಡೆಗೋಡೆ ಗೇಟುಗಳನ್ನು ಮಾಡಿಸಿರುತ್ತಾರೆ. ಶಿಕ್ಷಣದ ಗುಣಮಟ್ಟವನ್ನು ಹೆಚ್ಚಿಸಲು 2 ಪ್ರತ್ಯೇಕ ಶಿಕ್ಷಕರ ನೇಮಕ ಮಾಡಿರುತ್ತಾರೆ. ಮಕ್ಕಳಿಗೆ ಬಿಸಿಯೂಟವನ್ನು ಕೂತು ಮಾಡಲು ಊಟದ ಹಾಲ್ ರಚನೆಗೆ ದಾನಿ–ಸೈನಿಕರೊಬ್ಬರು 15 ಲಕ್ಷ ಅನುದಾನ ನೀಡಿದ್ದು ಕಟ್ಟಡದ ಕೆಲಸ ಪ್ರಗತಿಯಲ್ಲಿದೆ.

ಮಳೆಹಾನಿ ಪರಿಹಾರ ನಿಧಿಯಿಂದ ರೂ.2,50,000/– ಅನುದಾನ ಸಿಕ್ಕಿದ್ದು ಇದರಲ್ಲಿ ಕೊಠಡಿಗಳಿಗೆ ಟೈಲ್ಸ್‌ಗಳನ್ನು ಅಳವಡಿಸುವ ಕಾರ್ಯ ಸಂಪೂರ್ಣಯಾಗಿದೆ. ಅಲ್ಲದೆ ಮಕ್ಕಳ ಹಕ್ಕುಗಳ ಕ್ಲಬ್ ಮಕ್ಕಳ ಹಕ್ಕುಗಳ ಪಾರ್ಲಿಮೆಂಟ್ ಮಕ್ಕಳ ಸುರಕ್ಷಾ ಸಮಿತಿಗಳು ಉತ್ತಮ ರೀತಿಯಲ್ಲಿ ಕಾರ್ಯ ನಿರ್ವಹಿಸುವಂತೆ ಎಸ್‌ಡಿಎಂಸಿ ಮೇಲ್ವಿಚಾರಣೆ ಮಾಡುತ್ತಿರುವುದು ವಿಶೇಷ.

ಇದರಿಂದಾಗಿ ಪ್ರತಿವರ್ಷ ಮಕ್ಕಳ ದಾಖಲಾತಿಯೂ ಅಧಿಕವಾಗುತ್ತಿದೆ. ಎಸ್‌ಡಿಎಂಸಿಯು ಬಹಳ ಸಂತೋಷದಿಂದ ಈ ಬಗ್ಗೆ ಮಾತನಾಡುತ್ತಾ ಈ ಎಲ್ಲಾ ನಮ್ಮ ಕೆಲಸಗಳಿಗೆ ಬೆನ್ನೆಲುಬಾಗಿ ನಿಂತಿರುವುದು ನಮ್ಮ ಪಡಿ ಯೋಜನೆ. ನಮಗೆ ಅವರಿಂದ ಸಿಕ್ಕಿರುವ ವಿವಿಧ ಹಂತದ ತರಬೇತಿ ನಮ್ಮ ಸಭೆಗಳಿಗೆ ಭೇಟಿ ನೀಡಿ ಅವರು ನೀಡುತ್ತಿದ್ದ ಸಲಹೆ–ಮಾರ್ಗದರ್ಶನ, ಆಗಾಗ ಶಾಲೆಗಳನ್ನು ಭೇಟಿ ಮಾಡಿ ನಮ್ಮ ಜೊತೆ ಮಾತುಕತೆ–ಚರ್ಚೆಗಳನ್ನು ಮಾಡಿದ್ದು ನಮ್ಮ ಕಾರ್ಯಸಾಧನೆ ಯಶಸ್ವಿಯಾಗಿದೆ ಎನ್ನುತ್ತಾರೆ.

ಮಕ್ಕಳು ಶಾಲೆಗೆ ಹಾಜರಾಗದೆ ಇರುತ್ತಿದ್ದುದು ನಮಗೆ ದೊಡ್ಡ ಸವಾಲಾಗಿತ್ತು. ಈ ಸಂದರ್ಭ ನಮ್ಮ ಜೊತೆ ಮನೆ ಭೇಟಿ ಮಾಡಿ ಸೂಕ್ತ ಸಲಹೆ ಮಾರ್ಗದರ್ಶನ ನೀಡಿ ಸವಾಲನ್ನು ಜಯಿಸುವಂತೆ ಮಾಡಿದ್ದು ಪಡಿ ಸಂಸ್ಥೆ ಎಂಬುದು ಎಸ್‌ಡಿಎಂಸಿ ಅಧ್ಯಕ್ಷರ ಮನದಾಳದ ಮಾತು.

ಆರಂಭದಲ್ಲಿ ಈ ಎಸ್‌ಸಿ ಕಾಲೋನಿಯ ಶಾಲೆಯಿಂದ ಹೊರಗುಳಿದ ಮತ್ತು ಧೀರ್ಘಗೈರು ಮಕ್ಕಳ ಸಮಸ್ಯೆ ಸವಾಲಾಗಿದ್ದರೂ ಮುಂದೆ ಸಮುದಾಯ ಭಾಗವಹಿಸುವಿಕೆಯಿಂದ ಮಗುಸ್ನೇಹಿ ವಾತಾವಾರಣ ನಿರ್ಮಾಣಗೊಳಿಸಬಹುದು ಎಂಬುದನ್ನು ಕಾರ್ಯರೂಪದಲ್ಲಿ ಮಾಡಿ ತೋರಿಸಿದೆ. ಆ ಮುಖಾಂತರ ಇತರರಿಗೆ ಮಾದರಿಯಾಗಿದೆ.

*****

## ಹಲವು ವರ್ಷಗಳಿಂದ ಅವಕಾಶ ಸಿಗದ ಮಕ್ಕಳ ಪ್ರತಿಭಾ ಪ್ರದರ್ಶನಕ್ಕೆ ಅವಕಾಶ ಮಾಡಿಕೊಟ್ಟ ಕಾಡಬೆಟ್ಟು SDMC

ಶಿಕ್ಷಣ ಅದರಲ್ಲೂ ಮಗುಸ್ನೇಹಿ ಶಿಕ್ಷಣ ಎಂದರೆ ಕೇವಲ ಕ್ಲಾಸ್‌ರೂಂ ಒಳಗಿನ ಶಿಕ್ಷಣಕ್ಕೆ ಮಾತ್ರ ಸೀಮಿತವಾಗಿತ್ತು. ಕಾಡಬೆಟ್ಟು ಸರ್ಕಾರಿ ಶಾಲಾ ಮಕ್ಕಳ ಶಿಕ್ಷಣ ಕಾರಣ. ಇಲ್ಲಿಯ ಸಮುದಾಯದ ಜನರು ಶಾಲಾ ವಾರ್ಷಿಕೋತ್ಸವವನ್ನು ಮಾಡಲು ಸಹಕಾರ ನೀಡುತ್ತಿರಲಿಲ್ಲ. ಅಲ್ಲದೆ ಇಲ್ಲಿಯ ಶಿಕ್ಷಕವರ್ಗವೂ ಈ ಬಗ್ಗೆ ಆಸಕ್ತಿಯನ್ನು ತೋರುತ್ತಿರಲಿಲ್ಲ. ಇದರ ಪರಿಣಾಮವಾಗಿ ವರ್ಷದಿಂದ ವರ್ಷಕ್ಕೆ ಮಕ್ಕಳ ಸಂಖ್ಯೆಯು ಕಡಿಮೆಯಾಗುತ್ತಾ ಬರುತ್ತಿತ್ತು. ಇದನ್ನು ಮನಗಂಡ SDMC ಮತ್ತು ಪಂಚಾಯತ್ ಅಧ್ಯಕ್ಷರು ಈ ಬಗ್ಗೆ ಏನಾದರೂ ಕ್ರಮ ಕೈಗೊಳ್ಳಬೇಕು. ಶಾಲೆ ಮುಂದಿನ ದಿನಗಳಲ್ಲಿ ಮುಚ್ಚುವಂತಾಗಬಾರದು ಎಂದು ಪಣತೊಟ್ಟರು.

ಪಣತೊಟ್ಟು ಮುಂದುವರಿದ SDMCಯು ಆರಂಭದಲ್ಲಿ ಶಾಲಾ ಕ್ರಿಯಾಯೋಜನೆಯನ್ನು ಪಂಚಾಯತ್ ಸಹಕಾರದೊಂದಿಗೆ ರಚಿಸಿ ಸಂಬಂಧಪಟ್ಟ ಗ್ರಾಮ ಪಂಚಾಯತ್, ತಾಲೂಕು ಪಂಚಾಯತ್, ಜಿಲ್ಲಾ ಪಂಚಾಯತ್ ದಾನಿಗಳಿಗೆ ನೀಡಿ ತಮ್ಮ ಕೆಲಸಗಳನ್ನು ಆರಂಭಿಸಿದರು. ಊರಿನ ಎಲ್ಲಾ ಸಂಘಸಂಸ್ಥೆ, ದಾನಿಗಳ, ಗಣ್ಯರ ಭೇಟಿಯನ್ನು ಮಾಡಿದ SDMC ಅವರ ಸಹಕಾರದಲ್ಲಿ ಆರಂಭದಲ್ಲಿ ಶಾಲಾ ಜಾಗದ ಅಳತೆಯನ್ನು ಮಾಡಿ ಸೂಕ್ತ ದಾಖಲೆಗಳನ್ನು ನಿರ್ಮಿಸಿಕೊಂಡು ತರಕಾರಿಗಳನ್ನು ಬೆಳೆಸಿದರು, ಅಡಿಕೆ ತೋಟಗಳನ್ನು ನಿರ್ಮಿಸಿಕೊಂಡು ಇದಕ್ಕೆ ಪಂಚಾಯತ್ ಬೋರ್ ಮುಖಾಂತರ ನೀರಿನ ವ್ಯವಸ್ಥೆಯನ್ನು ಮಾಡಲಾಯಿತು. ಎಸ್‌ಡಿಎಂಸಿಯ ಮುಖಾಂತರ ಮಕ್ಕಳ ಗುಣಮಟ್ಟದ ಕಲಿಕಾ ಪ್ರಗತಿಗೋಸ್ಕರ ಶಿಕ್ಷಕರನ್ನು ನೇಮಿಸಲಾಯಿತು. ಕೌಶಲ್ಯಾಭಿವೃದ್ಧಿಪಡಿಸಲು ಯಕ್ಷಗಾನ ಸಂಗೀತ ತರಬೇತಿಯನ್ನು ಹಮ್ಮಿಕೊಳ್ಳಲಾಯಿತು. ಮುಂದಿನ ಹೆಜ್ಜೆಯನ್ನು ಸುಮಾರು 15 ವರ್ಷಗಳಿಂದ ನಡೆಯದ ಮಕ್ಕಳ ಬಹುನಿರೀಕ್ಷೆಯ ಶಾಲಾ ವಾರ್ಷಿಕೋತ್ಸವವನ್ನು ಆಯೋಜಿಸುವುದಾಗಿತ್ತು.

ಇದಕ್ಕಾಗಿ ಎಸ್‌ಡಿಎಂಸಿ SDMCಯ ಪಂಚಾಯತ್ ಮತ್ತು ವಿವಿಧ ಸಂಘಸಂಸ್ಥೆಗಳ ಸಹಕಾರ ಪಡೆದುಕೊಂಡರು. ದಾನಿಗಳೊಬ್ಬರು ರಂಗಮಂದಿರ ನಿರ್ಮಿಸಿಕೊಟ್ಟರು. ಹಳೆವಿದ್ಯಾರ್ಥಿ ಸಂಘವು ಶಾಲೆಗೆ ಪೈಂಟಿಂಗ್ ವ್ಯವಸ್ಥೆಯನ್ನು ಮಾಡಿ ಶಾಲೆ ಅಲಂಕಾರಗೊಂಡಿತು. ಎಲ್ಲರ ಸಹಕಾರದಿಂದ ಉತ್ತಮವಾಗಿ ಶಾಲಾ ವಾರ್ಷಿಕೋತ್ಸವವು ಅದ್ದೂರಿಯಾಗಿ ನಡೆಯಿತು. ಮಕ್ಕಳು ಎಲ್ಲಿಲ್ಲದ ಸಂತೋಷದಿಂದ

ಕುಣಿದಾಡಿದರು. ಅಲ್ಲದೆ ರಂಗಮಂದಿರದ ಎದುರುಗಡೆ ಮಕ್ಕಳಿಗೆ ಕುಳಿತುಕೊಳ್ಳಲು ಪ್ರಯೋಜನವಾಗುವಂತೆ ಶೀಟ್‌ಗಳನ್ನು MRPL ಮುಖಾಂತರ ಅಳವಡಿಸಿರುತ್ತಾರೆ.

ಮುಂದೆ ಶಾಲಾ ಕಟ್ಟಡವು ತುಂಬ ಹಳೆಯದಾಗಿದ್ದು ಕೆಲವು ಕಡೆ ಬಿರುಕು ಬಿಟ್ಟಿರುವುದರಿಂದ ಹೊಸ ಕಟ್ಟಡ ನಿರ್ಮಾಣಕ್ಕೆ ಇನ್ಫೋಸಿಸ್‌ನಿಂದ 15 ಲಕ್ಷ ಅನುದಾನ ಬಿಡುಗಡೆಗೊಂಡಿದ್ದು ಕಾಮಗಾರಿ ಪ್ರಗತಿಯಲ್ಲಿದೆ.

ಈ ಎಲ್ಲಾ ಅಂಶಗಳ ಮೇಲೆ SDMC ಅಧ್ಯಕ್ಷರಲ್ಲಿ ಮಾತನಾಡಿದಾಗ ನಮ್ಮ ಶಾಲೆ ಮುಚ್ಚುವ ಸ್ಥಿತಿಯಲ್ಲಿದ್ದು ಈ ಸಮಯದಲ್ಲಿ ನಮಗೆ ತಕ್ಕ ಸಮಯದಲ್ಲಿ ಮಾರ್ಗದರ್ಶನ, ಸಹಕಾರ ನೀಡಿರುವುದು ಪಡಿ ಸಂಸ್ಥೆ. ಇಲ್ಲಿಯ ಸಿಬ್ಬಂದಿಗಳ ನಿರಂತರ ಶಾಲಾ ಭೇಟಿ, SDMC ಗೆ ವಿವಿಧ ಹಂತದ ತರಬೇತಿ, SDMC ಸಭೆಗಳಿಗೆ ಭೇಟಿ ನೀಡಿ ಸೂಕ್ತ ಮಾಹಿತಿ ಮಾರ್ಗದರ್ಶನ ನೀಡಿರುವುದರಿಂದ ಕೇವಲ 2–3 ವರ್ಷಗಳಲ್ಲಿ ಇಷ್ಟೆಲ್ಲ ಸಾಧನೆ ನಮ್ಮಿಂದ ಸಾಧ್ಯವಾಯಿತು ಎನ್ನುತ್ತಾರೆ. ಅಲ್ಲದೆ ಮಕ್ಕಳ ಹಕ್ಕುಗಳ ಕ್ಲಬ್, ಮಕ್ಕಳ ಪಾರ್ಲಿಮೆಂಟ್, ಮಕ್ಕಳ ಸುರಕ್ಷಾ ಸಮಿತಿ, ಮಕ್ಕಳ ರಕ್ಷಣಾ ನೀತಿಗಳನ್ನು ಶಾಲೆಗಳಲ್ಲಿ ಅಳವಡಿಸುವಲ್ಲಿ ಪಡಿ ಯೋಜನೆಯ ಮಗುಸ್ನೇಹಿ ಯೋಜನೆಯ ಅನುಷ್ಠಾನ ಪ್ರಕ್ರಿಯೆಯಿಂದಲೇ ಎಂಬುದು ಅವರ ಅಂತರಾಳದ ಮಾತು.

ಮುಂದೆ ನಿಯಮಿತವಾಗಿ SDMC ಸಭೆಗಳು, ಪೋಷಕರ ಸಭೆಗಳು, ಸಮುದಾಯದತ್ತ ಶಾಲಾ ಕಾರ್ಯಕ್ರಮ, ವಿಜ್ಞಾನ ಮೇಳ, ಮೆಟ್ರಿಕ್ ಮೇಳ ಮುಂತಾದ ಎಲ್ಲಾ ಕಾರ್ಯಕ್ರಮಗಳನ್ನು ಯಶಸ್ವಿಯಾಗಿ ನಡೆಸಿಕೊಂಡು ಬಂದಿರುತ್ತಾರೆ. ಪಂಚಾಯತ್, ತಾಲೂಕು ಪಂಚಾಯತ್ ಸಭೆಗಳಲ್ಲಿ SDMCಯವರು ಭಾಗವಹಿಸಿ ತಮ್ಮ ಶಾಲಾ ಸಮಸ್ಯೆ, ಮಕ್ಕಳ ಸಮಸ್ಯೆಗಳ ಬಗ್ಗೆ ಧ್ವನಿ ಎತ್ತಿ ಪರಿಹಾರ ಕಂಡುಕೊಂಡಿರುತ್ತಾರೆ. ಅದೇ ರೀತಿ ಮಕ್ಕಳ ಕಲಿಕಾ ಗುಣಮಟ್ಟವನ್ನು ಪೋಷಕರ ಸಭೆಯಲ್ಲಿ ತಿಳಿಸಿ ಸಲಹೆ ಸೂಚನೆಗಳನ್ನು SDMC ನೀಡುತ್ತಿದೆ.

*****

# ಸರಕಾರಿ ಶಾಲೆಯ ಸಂಪೂರ್ಣ ಪರಿವರ್ತನೆ ಎಸ್.ಡಿ.ಎಂ.ಸಿ ಸದಸ್ಯರ ಸಕ್ರಿಯ ಭಾಗವಹಿಸುವಿಕೆಯಿಂದ

ಸರಕಾರಿ ಹಿರಿಯ ಪ್ರಾಥಮಿಕ ಶಾಲೆ ಗಾಂಧಿನಗರ. ದಕ್ಷಿಣ ಕನ್ನಡ ಜಿಲ್ಲೆಯ ಬೆಳ್ತಂಗಡಿ ತಾಲೂಕಿನ ಉಜಿರೆ ಕ್ಲಸ್ಟರ್ ವ್ಯಾಪ್ತಿಗೆ ಬರುವ ಶಾಲೆ. ಈ ಶಾಲೆಯಲ್ಲಿ ಒಂದರಿಂದ 5ನೇ ತರಗತಿಯವರೆಗೆ ಕಲಿಕೆಗೆ ಅವಕಾಶವಿದ್ದು, 36 ಮಕ್ಕಳು ಕಲಿಯುತ್ತಿದ್ದಾರೆ. ಇಬ್ಬರು ಶಿಕ್ಷಕಿಯರು ಕರ್ತವ್ಯ ನಿರ್ವಹಿಸುತ್ತಿದ್ದಾರೆ.

ಎಲ್ಲಾ ಶಾಲೆಗಳಲ್ಲಿ ಶಾಲಾಭಿವೃದ್ಧಿ ಮತ್ತು ಮೇಲ್ವಿಚಾರಣೆ ಸಮಿತಿ ಇದ್ದರೂ ಈ ಶಾಲೆಯಲ್ಲಿ ಮೊದಲ ಹಂತದ ಶಾಲಾ ಭೇಟಿಯಲ್ಲಿ ಗಮನಿಸಿದ ಅಂಶವೆಂದರೆ, ಪ್ರತೀ ತಿಂಗಳು ಎಸ್.ಡಿ.ಎಂ.ಸಿ ಸಭೆ ನಡೆಯುತ್ತಿರಲಿಲ್ಲ. ಎಲ್ಲಾ ಸದಸ್ಯರ ಭಾಗವಹಿಸುವಿಕೆ ಇಲ್ಲದೇ ಇರುವುದು, ಮಹಿಳಾ ಸದಸ್ಯರು ಚರ್ಚೆಯಲ್ಲಿ ಭಾಗವಹಿಸದೇ ಇರುವುದು. ಇವೆಲ್ಲಾ ಸಮಸ್ಯೆಯನ್ನು ಪಡಿ ಯೋಜನೆಯು 2016–17ರಲ್ಲಿ ನಡೆಸಲ್ಪಟ್ಟ ಯೋಜನಾ ಪೂರ್ವ ಅಧ್ಯಯನ ನಡೆಸಿದ ಸಂದರ್ಭದಲ್ಲಿ ಎಸ್.ಡಿ.ಎಂ.ಸಿ ಸದಸ್ಯರ ಅಭಿಪ್ರಾಯದ ಮೂಲಕ ಕಂಡುಕೊಳ್ಳಲಾಯಿತು.

ಮುಖ್ಯ ಶಿಕ್ಷಕಿ ಹಾಗೂ ಎಸ್.ಡಿ.ಎಂ.ಸಿ ಸದಸ್ಯರ ಸಹಕಾರ ತೃಪ್ತಿಕರವಾಗಿರಲಿಲ್ಲ. ಶಾಲಾಭಿವೃದ್ಧಿ ಮತ್ತು ಮೇಲುಸ್ತುವಾರಿ ಸಮಿತಿಯ ಸದಸ್ಯರ ಭಾಗವಹಿಸುವಿಕೆ ಇಲ್ಲದಿರುವುದರಿಂದ ಶಾಲಾ ಅಭಿವೃದ್ಧಿ ಸಾಧ್ಯವಿಲ್ಲ ಅನ್ನುವ ಭಾವನೆ ಮುಖ್ಯ ಶಿಕ್ಷಕಿಯವರಲ್ಲಿತ್ತು.

ಯೋಜನೆಯ ಆರಂಭದಲ್ಲಿ ಅಂದರೆ, 2017–18ರ ಸಾಲಿನಲ್ಲಿ, ಎಸ್.ಡಿ.ಎಂ.ಸಿ ಸಭೆಯಲ್ಲಿ ಪಡಿ ಯೋಜನೆಯ ತರಬೇತಿದಾರರು ಮತ್ತು ಮಾರ್ಗದರ್ಶಕರು ಭಾಗವಹಿಸಿ, ಎಸ್.ಡಿ.ಎಂ,ಸಿ. ಸಭೆ ನಡೆಸುವ ರೀತಿಯನ್ನು ಗಮನಿಸಲಾಯಿತು. ಮೊದಲ ಹಂತದಲ್ಲಿ ಎಸ್.ಡಿ.ಎಂ.ಸಿ ಸದಸ್ಯರ ಕರ್ತವ್ಯ ಮತ್ತು ಜವಾಬ್ದಾರಿಗಳು, 2ನೇ ಹಂತದಲ್ಲಿ ಶಾಲಾಭಿವೃದ್ಧಿ ಯೋಜನೆ ತಯಾರಿ ಕುರಿತು ತರಬೇತಿ ನೀಡಲಾಯಿತು. ನಂತರದ ದಿನಗಳಲ್ಲಿ ಎಸ್.ಡಿ.ಎಂ.ಸಿ ಪ್ರತೀ ತಿಂಗಳಂತೆ ನಡೆಯುತ್ತಿದ್ದು, ಪಂಚಾಯತ್ ಸದಸ್ಯರು ಸೇರಿದಂತೆ ಪ್ರತೀ ತಿಂಗಳು ಶಾಲಾ ಚಟುವಟಿಕೆಗಳು ಮತ್ತು ಶಾಲಾ ಅಭಿವೃದ್ಧಿಗಳ ಬಗ್ಗೆ ಹೆಚ್ಚು ಚರ್ಚೆಯಾಗುವುದನ್ನು ಎಸ್.ಡಿ.ಎಂ.ಸಿ ಸಭೆಗಳಲ್ಲಿ ಕಂಡುಕೊಂಡ ಪ್ರಮುಖ ಅಂಶ. ಆದರೆ, ಒಂದು ಶಾಲೆ ಅಭಿವೃದ್ಧಿ ಪಥದತ್ತ ಸಾಗಬೇಕಾದರೆ ಶಾಲಾಭಿವೃದ್ಧಿಯ ಸದಸ್ಯರು ಹಾಗೂ ಶಿಕ್ಷಕಿ ಒಮ್ಮತದಿಂದ ಹೋಗಲೇಬೇಕಿತ್ತು. ಆಗಸ್ಟ್ 2018ರ ಸಭೆಯಲ್ಲಿ ಶಾಲಾ ಗೇಟಿನ ಸಮಸ್ಯೆಯ ಕುರಿತು ಶಾಲಾ ಶಿಕ್ಷಕಿ ಮತ್ತು ಎಸ್.ಡಿ.ಎಂ.ಸಿ ಸದಸ್ಯರೊಳಗೆ ಮಾತುಕತೆ ನಡೆಯಿತು. ಶಾಲೆಗೆ ಕಾಂಪೌಂಡು ಇಲ್ಲದೇ ಇರುವುದರಿಂದ ಮಳೆಗಾಲದಲ್ಲಿ ನೀರೆಲ್ಲ ಶಾಲಾ ಮೈದಾನದಲ್ಲಿ

ತುಂಬಿಕೊಳ್ಳುತ್ತಿದ್ದು ಮಕ್ಕಳಿಗೆ ಆಟವಾಡಲು ತೊಂದರೆ ಮತ್ತು ಶಾಲಾ ರಜಾ ಸಮಯದಲ್ಲಿ ಆಡು, ದನ ಇವೆಲ್ಲವು ಶಾಲಾ ಆವರಣದ ಒಳಗೆ ಬಂದು ಶಾಲಾ ಆವರಣವನ್ನೆಲ್ಲ ಹಾಳು ಮಾಡುತ್ತದೆ ಎನ್ನುವ ಬಗ್ಗೆ ಎಸ್ .ಡಿ.ಎಂ.ಸಿ ಸದಸ್ಯರು ಈ ಸಭೆಯಲ್ಲಿ ಚರ್ಚಿಸಿದ್ದರು.

ಕ್ರಮೇಣ ಪಡಿ ಯೋಜನೆಯು 6 ತಿಂಗಳಿಗೊಮ್ಮೆ ನಡೆಸುವ ಶಾಲಾಭಿವೃದ್ಧಿ ಸಮಿತಿಯ ಮೌಲ್ಯಮಾಪನ ಸಮಯದಲ್ಲಿ ಎಲ್ಲ ಸದಸ್ಯರು ಶಾಲಾಭಿವೃದ್ಧಿ ಯೋಜನೆಯಲ್ಲಿ ಶಾಲಾ ಕಾಂಪೌಂಡು ಮತ್ತು ಗೇಟು ನಿರ್ಮಿಸುವ ಬಗ್ಗೆ ಚರ್ಚೆ ನಡೆಸಿರುವುದು ಮತ್ತು ಪಂಚಾಯತ್‌ಗೆ ಮನವಿ ನೀಡಿರುವುದನ್ನು ತಿಳಿಯಲಾಯಿತು. ಈ ಸಭೆಯಲ್ಲಿ ಶಾಲಾ ಕಾಂಪೌಂಡು ಮತ್ತು ಗೇಟಿನ ಸಮಸ್ಯೆ



ಒಂದಾದರೆ ಶಾಲಾ ಇನ್ನಿತರ ಸಮಸ್ಯೆಯ ಬಗ್ಗೆ ಕೂಡ ಎಸ್.ಡಿ.ಎಂ.ಸಿ ಸದಸ್ಯರು ಚರ್ಚಿಸಿರುವುದನ್ನು ಸಭೆಯ ನಿರ್ಣಯ ಪುಸ್ತಕದಲ್ಲಿ ಗಮನಿಸಲಾಯಿತು.

ನಾಮನಿರ್ದೇಶಿತ ಪಂಚಾಯತ್ ಸದಸ್ಯರು ಮತ್ತು ಇನ್ನಿತರ ಎಸ್.ಡಿ.ಎಂ.ಸಿ ಸದಸ್ಯರು ಶಾಲಾ ಮಕ್ಕಳಿಗೆ ತೊಂದರೆ ಆಗದಂತೆ ಹಾದಿ ಸುಗಮವಾಗಿಸುವಲ್ಲಿ ಕೈ ಜೋಡಿಸಿ, 2019ರ ಸಾಲಿನ ಜನವರಿ ತಿಂಗಳಲ್ಲಿ ಶಾಲೆಗೆ ಗೇಟನ್ನು ದಾನಿಗಳು (ಮೈತ್ರಿ ಫ್ರೆಂಡ್ಸ್ ಕ್ಲಬ್ ಗಾಂಧಿನಗರ ಇವರ ಕೊಡುಗೆ) ನೀಡಿದ್ದು, ಶಾಲಾ ಕಾಂಪೌಂಡನ್ನು ಉಜಿರೆ ಪಂಚಾಯತ್ ವತಿಯಿಂದ ಅನುದಾನದ ಮೂಲಕ ನಿರ್ಮಾಣ ಮಾಡಲಾಯಿತು.

ಶಾಲಾ ಕಾಂಪೌಂಡು ಮತ್ತು ಗೇಟ್ ನಿರ್ಮಾಣಗೊಂಡಿರುವುದರಿಂದ, 2019–20ರ ಸಾಲಿನ ಎಸ್‌ಡಿ.ಎಂ.ಸಿ ಶಾಲಾಭಿವೃದ್ಧಿ ಯೋಜನೆಯಲ್ಲಿ ಶಾಲಾ ಕೈತೋಟ ನಿರ್ಮಾಣದ ಯೋಜನೆಯನ್ನು ಹಾಕಿಕೊಂಡರು.

ಈ ರೀತಿಯಲ್ಲಿ ಶಿಕ್ಷಕ ವೃಂದ, ಎಸ್‌ಡಿಎಂಸಿ ಪಂಚಾಯತ್ ಜತೆ ಸೇರಿ ಮಗುಸ್ನೇಹಿ ಶಾಲಾ ವಾತಾವರಣ ಸಾಮರಸ್ಯತೆಯಿಂದ ನಡೆಸುವ ಪ್ರಕ್ರಿಯೆ ಪ್ರಸ್ತುತ ಅವರ ನಿಯಮಿತ ಕಾರ್ಯಾಚರಣೆಯಾಗಿ ನಡೆಯುತ್ತಿರುವುದು ಅತೀ ಶ್ಲಾಘನೀಯ.

*****

## ಮಕ್ಕಳ ಹಕ್ಕು ರಕ್ಷಣೆಗೆ ಪಣತೊಟ್ಟ ದಿಟ್ಟ SDMC

ಸಂತೋಷದಾಯಕ ಕಲಿಕಾ ವಾತಾವರಣವೇ ಮಕ್ಕಳ ಹಕ್ಕುಗಳ ರಕ್ಷಣೆಯನ್ನು ಮಾಡುವಲ್ಲಿ ಕಂಕಣಬದ್ದರಾಗಿ ಯಶಸ್ವಿಯಾದ SDMCಯ ಕಥೆಯಿದು. ಬಂಟ್ವಾಳ ತಾಲೂಕಿನ ಕಾವಳ ಮೂಡೂರು ಗ್ರಾಮದ ಕೆದ್ದಳಿಕೆ ಸರಕಾರಿ ಹಿರಿಯ ಪ್ರಾಥಮಿಕ ಶಾಲೆಯ SDMC ಇಂತಹ ಒಂದು ಪ್ರಯತ್ನವನ್ನು ನಡೆಸಿ ರಾಜ್ಯಕ್ಕೆ ಮಾದರಿ ಎನಿಸಿಕೊಂಡಿದ್ದಾರೆ.

ತೀರಾ ಗ್ರಾಮೀಣ ಪ್ರದೇಶದಲ್ಲಿರುವ ಈ ಶಾಲೆಯಲ್ಲಿ ಹಿಂದುಳಿದ ವರ್ಗ, ಅಲ್ಪಸಂಖ್ಯಾತ SC/ST ಸಮುದಾಯದ ಮಕ್ಕಳು ಶಿಕ್ಷಣ ಪಡೆಯುತ್ತಿದ್ದಾರೆ. ಈ ಭಾಗದಿಂದ ಅನೇಕ ಆಂಗ್ಲಮಾಧ್ಯಮ ಶಾಲೆಗಳ ವಾಹನಗಳು ಓಡಾಟ ನಡೆಸುತ್ತಿವೆಯಾದರೂ ಈ ಶಾಲೆಯಲ್ಲಿ ವರ್ಷದಿಂದ ವರ್ಷಕ್ಕೆ ಮಕ್ಕಳ ಸಂಖ್ಯೆ ಅಧಿಕವಾಗುತ್ತಿದೆ. ಇಲ್ಲಿಯ SDMC ಒಂದು ಉತ್ತಮ ನಾಯಕತ್ವವನ್ನು ಹೊಂದಿದ ಮಾದರಿ ಸಮಿತಿಯಾಗಿದ್ದು ಶಾಲೆಯ ಚಟುವಟಿಕೆಗಳಲ್ಲಿ ಪ್ರತಿಯೊಬ್ಬರು ತನ್ನನ್ನು ತಾನು ತೊಡಗಿಸಿಕೊಂಡು ಯಶಸ್ಸು ಕಂಡುಕೊಂಡಿರುತ್ತಾರೆ. ಈ ಸಮಿತಿಯು ಮಕ್ಕಳ ಹಕ್ಕುಗಳ ರಕ್ಷಣೆಗೆ ಪೂರಕವಾಗಿ ಮದ್ಯಾಹ್ನದ ಬಿಸಿಯೂಟವನ್ನು ಮಕ್ಕಳು ಆರಾಮದಿಂದ ಕುಳಿತು ಸ್ವೀಕರಿಸುವಂತೆ ಊಟದ ಹಾಲ್‌ನ್ನು ರಚಿಸುತ್ತಾರೆ. ಹಾಗಂತ ಈ ಸಮಿತಿಯವರು ಸದಸ್ಯರು ಶ್ರೀಮಂತರಲ್ಲ ಬದಲಾಗಿ ಹೃದಯ ಶ್ರೀಮಂತಿಕೆ ಉಳ್ಳವರು ದಾನಿಗಳನ್ನು ಸಂಪರ್ಕಿಸಿ ಮಕ್ಕಳಿಗೆ ಉತ್ತಮ ಊಟದ ಕೊಠಡಿ ನಿರ್ಮಿಸಿಕೊಡುವಲ್ಲಿ ಯಶಸ್ವಿಯಾಗಿದ್ದಾರೆ.

ನಮ್ಮ SDMC ಮತ್ತು ಶಿಕ್ಷಕ ವರ್ಗ ತುಂಬ ಆತ್ಮೀಯರು ಮಕ್ಕಳ ಪರವಾಗಿ ಕೆಲಸ ಮಾಡುವವರು, SDMCಯವರಲ್ಲಿ ನಮ್ಮ ಬೇಡಿಕೆ ತಿಳಿಸಿದರೆ ಸಾಕು ಅದು ಈಡೇರಿದಂತೆ. ಶಾಲೆಗಳಲ್ಲಿ ನಮಗೆ ಸಿಗಬೇಕಾದ ಪೌಷ್ಟಿಕಾಂಶಯುಕ್ತ ಬಿಸಿಯೂಟಕ್ಕೆ ತರಕಾರಿಯನ್ನು ಬೆಳೆಸಿ, ಹಣ್ಣುಗಳನ್ನು ಬೆಳೆಸಿ ನೀಡುತ್ತಾರೆ, ಆರೋಗ್ಯದಾಯಕವಾಗಿ ಕುಳಿತು ಊಟ ಮಾಡಲು ಸುಸಜ್ಜಿತ ಕೊಠಡಿಯನ್ನು ನಿರ್ಮಿಸಿರುತ್ತಾರೆ ಎಂಬುದು ವಿದ್ಯಾರ್ಥಿಗಳ ಮನದಾಳದ ಮಾತು.

ಗ್ರಾಮೀಣ ಭಾಗದ ಜನರಲ್ಲಿ ಹಣದ ಕೊರತೆ ಇರಬಹುದು ಆದರೆ ಶ್ರಮದ ಕೊರತೆ ಇಲ್ಲ. ನಮ್ಮ ಶಾಲೆಯ ಮಕ್ಕಳಿಗೆ ಯಾವುದೇ ರೀತಿಯ ಕೊರತೆಗಳು ಉಂಟಾಗಬಾರದು. ಅವರ ಹಕ್ಕುಗಳಿಗೆ ಚ್ಯುತಿ ಬರಬಾರದು ಎಂಬುದು ನಮ್ಮ ಆಶಯವಾಗಿತ್ತು. ಅದರಂತೆ ಮಕ್ಕಳಿಗೆ ಕೇವಲ ಪಾಠದ ಕಡೆ ಮಾತ್ರವಲ್ಲದೆ ಪಠ್ಯೇತರ ಚಟುವಟಿಕೆಗಳ ಕಡೆಗೂ ಅವರ ರಕ್ಷಣೆ, ಪೌಷ್ಟಿಕ ಆಹಾರದ ಕಡೆಗೂ ಗಮನ

ನೀಡುತ್ತಿದ್ದೇವೆ. ಅಲ್ಲದೆ ಮಕ್ಕಳಿಗೆ ಸ್ವತ ನಾವೇ ಕೃಷಿ ಪಾಠವನ್ನು ಕೂಡ ನೀಡುತ್ತಿದ್ದೇವೆ. ಇದರಿಂದಾಗಿ ಎಲ್ಲಾ ಕ್ಷೇತ್ರದಲ್ಲೂ ನಮ್ಮ ಮಕ್ಕಳು ಮುಂದೆ ಬರಲು ಅನುಕೂಲವಾಗಿದೆ. ರಾಜ್ಯಮಟ್ಟದಲ್ಲಿ ಗುರುತಿಸಿಕೊಂಡಿದ್ದಾರೆ ಎನ್ನುತ್ತಾರೆ SDMC ಸಮಿತಿ ಸದಸ್ಯರು.

ಹಾಗಂತ ನಾವು ಇಷ್ಟೆಲ್ಲಾ ಕೆಲಸಗಳನ್ನು ಮಾಡಲು ಒಂದು ಬಲವಾದ ಕೈವಾಡ ನಮ್ಮ ಜೊತೆಗಿತ್ತು ಅದುವೇ ಪಡಿ ಮಗುಸ್ನೇಹಿ ಶಾಲಾ ಯೋಜನೆ. ಇವರು ನೀಡಿದ ತರಬೇತಿ ಮತ್ತು ಮಾರ್ಗದರ್ಶನದಿಂದಾಗಿ ನಮ್ಮ ಶಾಲೆಯನ್ನು ಮಾದರಿಯಾಗಿ ಮಾಡಲು ಸಾಧ್ಯವಾಯಿತು. SDMCಯ ಕರ್ತವ್ಯ ಜವಾಬ್ದಾರಿಗಳಾದ ಬಿಸಿಯೂಟದ ಮೇಲ್ವಿಚಾರಣೆ ಶಾಲೆ ಬಿಟ್ಟ ಮಕ್ಕಳ ಕಡೆ, ದೀರ್ಘ ಗೈರು ಮಕ್ಕಳ ಕಡೆ ಗಮನ ಹರಿಸುವುದು, SDMC ಸಭೆಗಳನ್ನು ನಿರಂತರ ನಡೆಸುವುದು ಅಲ್ಲದೆ ಶಾಲಾ ಕ್ರಿಯಾಯೋಜನೆಗಳನ್ನು ರಚಿಸುವುದು. ಹೀಗೆ ನಿಯಮಿತವಾಗಿ ಹಾಗೂ ಸುಸೂತ್ರವಾಗಿ ಶಾಲಾಭಿವೃದ್ಧಿ ಮೇಲ್ವಿಚಾರಣೆ ನಡೆಸುವುದು. ಶಾಲಾಭಿವೃದ್ಧಿಯು ಹಾಗೂ ಮೇಲುಸ್ತುವಾರಿ ಸೂಕ್ಷ್ಮ ವಿಚಾರಗಳನ್ನು ವಿವಿಧ ಹಂತದ ತರಬೇತಿಯಲ್ಲಿ ನಮಗೆ ನೀಡಿರುತ್ತದೆ. ಅದನ್ನು ಅರಿತುಕೊಂಡು ಶಾಲಾಭಿವೃದ್ಧಿ ಯೋಜನೆಗಳನ್ನು ತಯಾರಿಸಿಕೊಂಡು ಪೂರಕ ಯೋಜನೆ ಅಳವಡಿಸಿ ದಾನಿಗಳಿಂದ ಊಟದ ಹಾಲ್, ಸೋಲಾರ್ ಲೈಟ್, ಆಟದ ಮೈದಾನಕ್ಕೆ ಶೀಟ್‌ಗಳ ಅಳವಡಿಕೆ, ಶೌಚಾಲಯಕ್ಕೆ ನಿರ್ಮಾಣ ಕಲಿಕಾ ಗುಣಮಟ್ಟ ಹೆಚ್ಚಿಸಲು ಶಿಕ್ಷಕರ ನೇಮಕ ಅಲ್ಲದೆ ಪಠ್ಯೇತರ ಚಟುವಟಿಕೆಗಳಾದ ವೃತ್ತಿ, ಕೌಶಲ್ಯ, ಯೋಗಾಸನ, ಯಕ್ಷಗಾನಗಳನ್ನು ಮಕ್ಕಳಿಗೆ ಕಲಿಸಲು ಬೇಕಾದ ವ್ಯವಸ್ಥೆ ದಾನಿಗಳಿಂದ ಕಂಪ್ಯೂಟರ್ ಶಿಕ್ಷಣಕ್ಕೆ ವ್ಯವಸ್ಥೆ ಸ್ವತಃ ಎಸ್‌ಡಿಎಂಸಿಯವರೇ ಉದ್ಯೋಗ ಖಾತರಿ ಮೂಲಕ ತರಕಾರಿ ಹಣ್ಣು ಹಂಪಲುಗಳನ್ನು ಬೆಳೆಸಿ ರಾಜ್ಯಕ್ಕೆ ಮಾದರಿಯಾಗಿದ್ದು ಇದು ನಮಗೆ ಹೆಮ್ಮೆಯೆನಿಸುತ್ತಿದೆ ಎಂದು ತಿಳಿಸುತ್ತಾರೆ ಎಸ್‌ಡಿಎಂಸಿ ಸದಸ್ಯರು.

ಇದರೊಂದಿಗೆ ಎಲ್ಲಾ ಪೋಷಕರನ್ನು ಸೇರಿಸಿಕೊಂಡು ಉತ್ತಮ ರೀತಿಯಲ್ಲಿ ಸಮುದಾಯದತ್ತ ಶಾಲಾ ಕಾರ್ಯಕ್ರಮ ಆಯೋಜನೆ, ಪೋಷಕರಿಂದಲೂ ಸಲಹೆಗಳನ್ನು ತಿಳಿದುಕೊಂಡು ಎಲ್ಲರ ಸಹಕಾರವನ್ನು ಶಾಲಾಭಿವೃದ್ಧಿ ಯೋಜನೆ ತಯಾರಿಸುವುದು. ಎಸ್‌ಡಿಎಂಸಿಯಿಂದ ದಾಖಲಾತಿ ಆಂದೋಲನ, ಮನೆ ಮನೆ ಭೇಟಿ, 3 ತಿಂಗಳಿಗೊಮ್ಮೆ ಪೋಷಕರ ಸಭೆ ನಡೆಸುವುದು ಮತ್ತು ಮಕ್ಕಳ ಕಲಿಕಾ ಗುಣಮಟ್ಟವನ್ನು ತರಬೇತಿಯಾಧಾರಿತ ಸಾಧನದ ಮೂಲಕ ಮೌಲ್ಯಮಾಪನವನ್ನು ಮಾಡುವುದು, ಪಂಚಾಯತ್ ನಡೆಸುವ ಕೆಡಿಪಿ ಸಭೆಗಳಿಗೆ ಭೇಟಿ ನೀಡಿ ಶಾಲಾ ಸಮಸ್ಯೆಗಳ ಬಗ್ಗೆ ಪಂಚಾಯತ್ ಜೊತೆ ತಿಳಿಸುವುದು, ಶಾಲಾ ವಾರ್ಷಿಕೋತ್ಸವ, ಶಾಲಾ ಹಬ್ಬ,

ಮೆಟ್ರಿಕ್ ಮೇಳ, ವಿಜ್ಞಾನ ಮೇಳಗಳನ್ನು ಎಸ್‌ಡಿಎಂಸಿ ಮುಂದಾಳತ್ವದಲ್ಲಿ ನಡೆಸುವುದು ಅಲ್ಲದೆ ಶಾಲಾ ಮಂತ್ರಿಮಂಡಲ, ಮಕ್ಕಳ ಹಕ್ಕುಗಳ ಕ್ಲಬ್, ಮೀನಾ ಕ್ಲಬ್, ಮಕ್ಕಳ ಸುರಕ್ಷಾ ಸಮಿತಿ, ಮಕ್ಕಳ ರಕ್ಷಣಾ ನೀತಿಗಳನ್ನು ಎಸ್‌ಡಿಎಂಸಿಯು ಮೇಲ್ವಿಚಾರಣೆ ನಡೆಸುತ್ತಿದ್ದು ಉತ್ತಮ ರೀತಿಯಲ್ಲಿ ಕಾರ್ಯನಿರ್ವಹಿಸುತ್ತಿದೆ.

ಅನೇಕ ಗಣ್ಯರು, ಜನಪ್ರತಿನಿಧಿಗಳು, ಸಚಿವರು, ಶಾಲಾ ಕಾಲೇಜುಗಳು ಅಲ್ಲದೆ ಅನೇಕ ಕಂಪನಿಗಳು ಶಾಲೆಯನ್ನು ರಾಜ್ಯದ ಮಾದರಿ ಶಾಲೆ ಅಂದು ಸಂದರ್ಶಿಸುವಾಗ ಬಹಳಷ್ಟು ಉತ್ಸುಕತೆ ಹೊರಹೊಮ್ಮುತ್ತದೆ ಮತ್ತು ಶಾಲೆಯನ್ನು ಸತತ ಈ ರೀತಿಯಾಗಿ ಮುಂದುವರೆಸಿಕೊಂಡು ನಮ್ಮೂರಿನ ಮಗುಸ್ನೇಹಿ ಸಮುದಾಯದ ಶಾಲೆ ಎಂದು ಎದೆಯುಬ್ಬಿಸಿ ಹೇಳಬಯಸುತ್ತೇವೆ ಅನ್ನುತ್ತಾರೆ ಶಿಕ್ಷಕ ವೃಂದ ಹಾಗೂ ಎಸ್‌ಡಿಎಂಸಿ ಸದಸ್ಯರು.

*****

## ಗ್ರಾಮ ಮಟ್ಟದ ಮಕ್ಕಳ ಹಕ್ಕುಗಳ ರಕ್ಷಣೆ ತಮ್ಮ ಹೊಣೆ ಎಂದು ಕಾರ್ಯಪ್ರವೃತವಾದ ಕಾವಳಪಡೂರು ಗ್ರಾಮ ಪಂಚಾಯತಿ

ಮಕ್ಕಳ ಹಕ್ಕುಗಳ ರಕ್ಷಣೆಯಲ್ಲಿ ಸ್ಥಳೀಯ ಸರಕಾರದ ಜವಾಬ್ದಾರಿ ಪ್ರಮುಖವಾದುದು ಎಂಬುದನ್ನು ನಾವು ಹೇಳುತ್ತಾ ಬಂದಿರುತ್ತೇವೆ. ಆದರೆ ಕಾರ್ಯಸಾಧನೆಯಲ್ಲಿ ಕಂಡದ್ದು ವಿರಳ. ಆದರೆ ಬಂಟ್ವಾಳ ತಾಲೂಕಿನ ಕಾವಳ ಪಡೂರು ಗ್ರಾಮ ಪಂಚಾಯತ್ ಅದನ್ನು ಸಾಧಿಸಿ ತೋರಿಸಿ ಇತರರಿಗೆ ಮಾದರಿಯಾಗಿದೆ.

ಈ ಗ್ರಾಮ ಪಂಚಾಯತ್ ವ್ಯಾಪ್ತಿಯಲ್ಲಿ 4 ಸರಕಾರಿ ಪ್ರಾಥಮಿಕ ಶಾಲೆಗಳು, 1 ಸರಕಾರಿ ಹೈಸ್ಕೂಲ್, 3 ಖಾಸಗಿ ಶಾಲೆಗಳಿದ್ದು ಅಧಿಕ ಸಂಖ್ಯೆಯಲ್ಲಿ ಎಸ್‌ಸಿಎಸ್‌ಟಿ ಸಮುದಾಯದ ಮಕ್ಕಳು ಕಲಿಯುತ್ತಿದ್ದಾರೆ. ಇಲ್ಲಿಯ ಪಂಚಾಯತ್ ಅಧ್ಯಕ್ಷರಿಗೆ ಮಕ್ಕಳ ಬಗ್ಗೆ ಎಲ್ಲಿಲ್ಲದ ಕಾಳಜಿ ಶಾಲೆಯಿಂದ ಹೊರಗುಳಿದ, ಧೀರ್ಘಗೈರು ಮಕ್ಕಳನ್ನು ಗುರುತಿಸಿ ಅವರ ಮನೆಭೇಟಿ ಮಾಡಿ ಆಪ್ತಸಮಾಲೋಚನೆ ಅಗತ್ಯವಿರುವ ಮಕ್ಕಳಿಗೆ ನುರಿತರಿಂದ ಕೌನ್ಸಲಿಂಗ್ ನಡೆಸಿ ಶಾಲೆಗೆ ಸೇರಿಸುವಲ್ಲಿ, ನಿರಂತರ ಹಾಜರಾಗಿಸುವಲ್ಲಿ ಪ್ರಮುಖ ಪಾತ್ರ ವಹಿಸುತ್ತಾರೆ. ಬಡತನದಿಂದ ವಿದ್ಯಾಭ್ಯಾಸ ಮಾಡಲಾಗದ ಮಕ್ಕಳನ್ನು ಗುರುತಿಸಿ ಅವರಿಗೆ ದಾನಿಗಳ ಮುಖಾಂತರ ಮತ್ತು ಸ್ವತಃ ತಾವೇ ಆರ್ಥಿಕ ಸಹಕಾರ ನೀಡುತ್ತಿದ್ದಾರೆ. ಕುಡಿತದ ಚಟದಿಂದ ಬಳಲುತ್ತಿರುವ ಕುಟುಂಬದ ಮಕ್ಕಳನ್ನು ರಕ್ಷಿಸಿ ಅವರನ್ನು ವಸತಿ ಗೃಹಗಳಲ್ಲಿರಿಸಿ ವಿದ್ಯಾಭ್ಯಾಸ ನೀಡಿ ಉತ್ತಮ ಪ್ರಜೆಯಾಗಿ ಬೆಳೆಸುವಲ್ಲಿ ಇವರ ಪಾತ್ರ ಹಿರಿದು.

ಈ ಅಧ್ಯಕ್ಷರ ಕಾರ್ಯವೈಖರಿಗೆ ಮಣಿದ ಉಳಿದ ಎಲ್ಲಾ ಸದಸ್ಯರು, ಪಂಚಾಯತ್ ಸಿಬ್ಬಂದಿಗಳು ಇವರೊಂದಿಗೆ ಕೈಜೋಡಿಸಿ ಕಾರ್ಯಪ್ರವೃತರಾಗುತ್ತಿದ್ದಾರೆ. ತಮ್ಮ ತಮ್ಮ

ವ್ಯಾಪ್ತಿಯ ಶಾಲೆಗಳಲ್ಲಿ ಮೇಲ್ವಿಚಾರಣೆ ಮಾಡುತ್ತಿರುವ ಸದಸ್ಯರು ಶಾಲೆಗಳ ಎಲ್ಲಾ ಕೆಲಸ ಕಾರ್ಯಗಳಲ್ಲಿ ತಮ್ಮನ್ನು ತೊಡಗಿಸಿಕೊಳ್ಳುತ್ತಿದ್ದಾರೆ. ಪಂಚಾಯತ್‌ನಲ್ಲಿ ನಡೆಯಬೇಕಾದ ಮಕ್ಕಳ ಗ್ರಾಮಸಭೆ, ಮಹಿಳಾ ಮತ್ತು ಮಕ್ಕಳ ಕಾವಲು ಸಮಿತಿ ಸಭೆಗಳು, ಕೆಡಿಪಿ ಸಭೆಗಳನ್ನು ಪೂರ್ವತಯಾರಿಯೊಂದಿಗೆ ಪರಿಣಾಮಕಾರಿಯಾಗಿ ನಡೆಸುತ್ತಿದ್ದು ಅನುಸರಣಾ ಸೇವೆಯನ್ನು ಕೈಗೊಳ್ಳುತ್ತಿದೆ.

3 ತಿಂಗಳಿಗೊಮ್ಮೆ ಪಂಚಾಯತ್ ವ್ಯಾಪ್ತಿಯ ಶಾಲೆಗಳ ಮೇಲ್ವಿಚಾರಣಾ ಸಭೆಗಳನ್ನು ನಡೆಸಿ ಮಕ್ಕಳ ಕಲಿಕಾ ಗುಣಮಟ್ಟ, ಮಕ್ಕಳ ಹಾಜರಾತಿ, ಅಪೌಷ್ಠಿಕ ಮಕ್ಕಳ ಮಾಹಿತಿ ಮುಂತಾದ ಎಲ್ಲಾ ವಿಷಯಗಳ ಬಗ್ಗೆ ತಿಳಿದುಕೊಂಡು ಸೂಕ್ತ ಕ್ರಮ ಕೈಗೊಳ್ಳುತ್ತಿದೆ. ಮಕ್ಕಳ ರಕ್ಷಣಾ ವ್ಯವಸ್ಥೆಗಳ ಬಗ್ಗೆ ಗೋಡೆ ಬರಹಗಳನ್ನು ಅಳವಡಿಸಿದ್ದು, ಈಗ ಬಂಟ್ವಾಳ ತಾಲೂಕಿಗೆ ಮಾದರಿ ಎನಿಸಿಕೊಂಡಿದೆ. ತನ್ನ ವ್ಯಾಪ್ತಿಯು ಶಾಲೆಗಳ ಮಕ್ಕಳಿಗೆ ಪಂಚಾಯುತ್ 2% ಅನುದಾನದಿಂದ ಕ್ರೀಡೋಪಕರಣಗಳನ್ನು ನೀಡುತ್ತಿದೆ. ಅಲ್ಲದೆ ಎಸ್‌ಸಿ/ಎಸ್‌ಟಿ ಅನುದಾನದಿಂದ ಮಕ್ಕಳಿಗೆ ಸಹಾಯಧನ ನೀಡುತ್ತಿದೆ, ಪಂಚಾಯತ್ ಅನುದಾನದಲ್ಲಿ ಎಸ್‌ಸಿ/ಎಸ್‌ಟಿ ಕಾಲೋನಿಗಳಿಗೆ ಆದ್ಯತೆಯನ್ನು ನೀಡಿ ಪರಿಹಾರ ನೀಡುತ್ತಿದೆ. ಪಂಚಾಯತ್ ಸದಸ್ಯರು, ಸಿಬ್ಬಂದಿ ವರ್ಗ ಒಟ್ಟಾಗಿ ತಮ್ಮ ವ್ಯಾಪ್ತಿಯ ಜನರ ಸೇವೆಯಲ್ಲಿ ತೊಡಗಿಸಿಕೊಂಡಿದ್ದು ಕಛೇರಿಯಲ್ಲಿ ಇರಬೇಕಾದ ಮಕ್ಕಳ ಸಂಬಂಧಿ ದಾಖಲೆಗಳನ್ನು ನಿರ್ವಹಿಸುತ್ತಿದೆ.

ಈ ಬಗ್ಗೆ ಪಂಚಾಯತ್ ಅಧ್ಯಕ್ಷರಲ್ಲಿ ಮಾತನಾಡಿದಾಗ ಅವರು ತಿಳಿಸಿದ ಮನದಾಳದ ಮಾತುಗಳೆಂದರೆ ಅಧ್ಯಕ್ಷನಾಗಿ ಆಯ್ಕೆಯಾದ ಆರಂಭದಲ್ಲಿಯೇ ಮಕ್ಕಳ ಬಗ್ಗೆ ಕೆಲಸ ಮಾಡುವ ಆಸಕ್ತಿ ಇದ್ದು ಆದರೆ ಯಾವ ರೀತಿ ಮುಂದುವರಿಯಬೇಕು ಎಂದು ಯೋಚಿಸುತ್ತಿರುವಾಗ ಪಡಿ ಸಂಸ್ಥೆಯವರು ಪಂಚಾಯತ್‌ಗೆ ಭೇಟಿ ನೀಡಿದರು, ಮುಂದೆ 3 ವರ್ಷ ತಮ್ಮ ಜೊತೆ ಕೈಜೋಡಿಸುತ್ತಾರೆ ಎಂದು ತಿಳಿದು ಸಂತೋಷವಾಯಿತು. ಅಲ್ಲದೆ ಮಕ್ಕಳ ಬಗ್ಗೆ ಪಡಿ ಸಂಸ್ಥೆಯವರಿಗಿದ್ದ ಕಾಳಜಿ, ಮಕ್ಕಳ ಹಕ್ಕುಗಳ ರಕ್ಷಣೆಗೋಸ್ಕರ ರೂಪಿಸಿದ ಕಾರ್ಯತಂತ್ರಗಳು ಮತ್ತು ಆ ಮೂಲಕ ಮಗುಸ್ನೇಹಿ ಪಂಚಾಯತ್ ನಿರ್ಮಾಣದ ಗುರಿಯನ್ನು ತಿಳಿದುಕೊಂಡು, ಅವರಿಂದ ಕಾಲ ಕಾಲಕ್ಕೆ ಪಡೆದ ವಿವಿಧ ಹಂತದ ತರಬೇತಿಗಳು, ಸಾಮಾನ್ಯ ಸಭೆಗಳಿಗೆ ಭೇಟಿ ನೀಡಿ ತಿಳಿಸಿದ ಮಾಹಿತಿ, ವಿವಿಧ ಸಮಸ್ಯೆ ಸವಾಲುಗಳ ಬಗ್ಗೆ ಪಂಚಾಯತ್‌ಗೆ ಆಗಾಗ ಭೇಟಿ ನೀಡಿ ಚರ್ಚಿಸಿದ ವಿಷಯಗಳು ಇವೆಲ್ಲವೂ ನಮ್ಮ ಪಂಚಾಯತ್‌ನಲ್ಲಿ ಮಕ್ಕಳ ಪರವಾಗಿ ಕೆಲಸ ಮಾಡುವಲ್ಲಿ ಮಾರ್ಗದರ್ಶನವಾಯಿತು ಎಂದು ಸಂತೋಷದಿಂದ ತಿಳಿಸುತ್ತಾರೆ.

ಬಹಳ ಮುಖ್ಯವಾಗಿ ಸರಕಾರಿ ಶಾಲೆಗಳ ಅಭಿವೃದ್ಧಿಗೆ, ಮಕ್ಕಳ ಹಕ್ಕುಗಳ ರಕ್ಷಣೆಗೆ, ಎಸ್‌ಡಿಎಂಸಿ, ಶಿಕ್ಷಕರು, ಸಮುದಾಯದ ಜೊತೆ ಸ್ಥಳೀಯ ಸರಕಾರಗಳ ಪಾತ್ರ ಬಹಳ ಮುಖ್ಯವಾಗಿದ್ದು ಎಂಬುದನ್ನು ಕಾರ್ಯರೂಪದಲ್ಲಿ ನೋಡಬಹುದಾಗಿದೆ. ಮಕ್ಕಳು ವಿವಿಧ ಇಲಾಖಾಧಿಕಾರಿಗಳ ಜೊತೆ ಮುಖಾಮುಖಿ ಕಾರ್ಯಕ್ರಮವನ್ನು ಪಂಚಾಯತ್ ಆಯೋಜಿಸಿದ್ದು ಈ ಕಾರ್ಯಕ್ರಮದಲ್ಲಿ ಬಂದ ಮಕ್ಕಳ ಸಮಸ್ಯೆ, ಬೇಡಿಕೆಗಳನ್ನು ಪಂಚಾಯತ್ ಮುಂದಾಳತ್ವ ವಹಿಸಿ ಅನುಸರಣೆಯನ್ನು ನಡೆಸಿ ಪರಿಹಾರಗೊಳಿಸುವಲ್ಲಿ ಯಶಸ್ವಿಯಾಗಿದೆ. ಅಲ್ಲದೆ ತಮ್ಮ ವ್ಯಾಪ್ತಿಯ ಮಕ್ಕಳು ಕಲಿಕೆ, ವಿವಿಧ ಚಟುವಟಿಕೆಗಳಲ್ಲಿ ತಾಲೂಕು, ಜಿಲ್ಲೆ, ರಾಜ್ಯ, ರಾಷ್ಟ್ರೀಯ ಮಟ್ಟದಲ್ಲಿ ಗುರುತಿಸಿಕೊಂಡಾಗ ಅವರನ್ನು ಪಂಚಾಯತ್ ಮೂಲಕ ಗುರುತಿಸಿ ಪ್ರೋತ್ಸಾಹಿಸುತ್ತಿದ್ದು ಇದರಿಂದ ಸರಕಾರಿ ಶಾಲೆಯ ಮಕ್ಕಳಿಗೆ ಹೆಚ್ಚಿನ ಉತ್ಸಾಹ ಮೂಡುತ್ತಿದೆ. ಪಡಿ ಸಂಸ್ಥೆಯ ಕಾರ್ಯ ಚಟುವಟಿಕೆಗಳನ್ನು ಈ ಪಂಚಾಯತ್‌ನಲ್ಲಿ ಅಳವಡಿಸಿದ್ದು ಈ ವ್ಯಾಪ್ತಿಯ ಎಲ್ಲರೂ ಅತ್ಯಂತ ಉತ್ತಮ ರೀತಿಯಲ್ಲಿ ಸ್ಪಂಧಿಸಿ ಫಲಿತಾಂಶ ಪಡೆಯುವಲ್ಲಿ ಪ್ರಮುಖ ಪಾತ್ರಧಾರಿಗಳಾಗಿದ್ದಾರೆ. ಆ ಮೂಲಕ ಮಗುಸ್ನೇಹಿ ಪಂಚಾಯತ್ ಕಾರ್ಯರೂಪಕ್ಕೆ ಬಂದಿದೆ.

*****

## ಮಾದರಿ ಮಗು ಸ್ನೇಹಿ ಪಂಚಾಯತ್ ಕೊಡಿಪ್ಪಾಡಿ

ಮಗುಸ್ನೇಹಿ ಯೋಜನೆಯಡಿ ಪಡಿ ಸಂಸ್ಥೆಯು ಆಯ್ಕೆ ಮಾಡಿರುವುದು ಕೊಡಿಪ್ಪಾಡಿ ಗ್ರಾಮ ಪಂಚಾಯತ್. ಗ್ರಾಮೀಣ ಪ್ರದೇಶದಲ್ಲಿ ಜನರಿಗೆ ಉತ್ತಮ ಸೇವೆ ನೀಡುವಲ್ಲಿ ಸಫಲತೆಯನ್ನು ಕಂಡಿದೆ. ಮೊದಲು ಪಡಿ ಸಂಸ್ಥೆಯ ಮಗುಸ್ನೇಹಿ ಯೋಜನೆಯಡಿಯಲ್ಲಿ ಆಯ್ಕೆ ಮಾಡುವಾಗ ಇಲ್ಲಿನ ಸದಸ್ಯರಿಗೆ ಯಾವುದೇ ರೀತಿಯ ಮಾಹಿತಿ ಇರಲಿಲ್ಲ. ಮಕ್ಕಳ ಹಕ್ಕುಗಳು, ಮಕ್ಕಳ ರಕ್ಷಣಾ ವ್ಯವಸ್ಥೆಗಳ ಕುರಿತು ಮಾಹಿತಿಯ ಕೊರತೆ ಕಂಡು ಬಂದಿತ್ತು ಅಲ್ಲದೆ ಮಕ್ಕಳ ಗ್ರಾಮ ಸಭೆಯ ಉದ್ದೇಶವೂ ಗೊತ್ತಿರಲಿಲ್ಲ. ಇದನ್ನೆಲ್ಲ ಮನಗಂಡ ಪಡಿ ಸಂಸ್ಥೆಯು ಪಂಚಾಯತ್ ಸದಸ್ಯರಿಗೆ ಮಗುಸ್ನೇಹಿ ಯೋಜನೆಯ ಉದ್ದೇಶ ಮತ್ತು ಮಗುಸ್ನೇಹಿ ಪಂಚಾಯತ್, ಮಕ್ಕಳ ರಕ್ಷಣಾ ವ್ಯವಸ್ಥೆಗಳು, ಪಂಚಾಯತ್ ಮತ್ತು ಶಿಕ್ಷಣ, ಮಾದರಿ ಮಕ್ಕಳ ಗ್ರಾಮ ಸಭೆ, ಪಂಚಾಯತ್ ರಾಜ್ ಮತ್ತು ಶಿಕ್ಷಣ ಮಕ್ಕಳ ರಕ್ಷಣಾ ಸಮಿತಿ ಕುರಿತು ತರಬೇತಿಯನ್ನು ಹಮ್ಮಿಕೊಂಡಿತು.

ತರಬೇತಿಯ ನಂತರ ಪಂಚಾಯತ್ ಸದಸ್ಯರು ಮಗುಸ್ನೇಹಿ ಪಂಚಾಯತ್ ಆಗುವಲ್ಲಿ ಕಾರ್ಯಕ್ರಮಗಳತ್ತ ಗಮನ ಹರಿಸಲು ಪ್ರಾರಭಿಸಿದರು. ಶಾಲಾಭಿವೃದ್ಧಿ



ಮತ್ತು ಮೇಲುಸ್ತುವಾರಿ ಸಭೆಗಳಲ್ಲಿ ಭಾಗವಹಿಸಲು ಪ್ರಾರಂಭಿಸಿದರು ಮತ್ತು ಶಾಲೆಗಳು ಸಲ್ಲಿಸುತ್ತಿದ್ದ ಶಾಲಾಭಿವೃದ್ಧಿ ಯೋಜನೆಗಳ ಅನುಷ್ಠಾನ ನಡೆಸುವುದು ಶಾಲೆಗಾಗಿ ಆರ್ಥಿಕ ಸಹಾಯ ಮೊದಲಾದವುಗಳಿಗಾಗಿ ಪಂಚಾಯತ್ ಸದಸ್ಯರು ತಮ್ಮ ಸಮಯವನ್ನು ಮೀಸಲಿಡುತ್ತಿದ್ದರು.

ಮಕ್ಕಳ ರಕ್ಷಣಾ ಸಮಿತಿ ಇದನ್ನು ಯಶಸ್ವಿಯಾಗಿ ಅನುಷ್ಠಾನ ಮಾಡಿ ಪ್ರತೀ ಮೂರು ತಿಂಗಳಿಗೊಮ್ಮೆ ಸಭೆ ನಡೆಸಿ ಮಕ್ಕಳ ಕುರಿತು ಇದರಲ್ಲಿ ಚರ್ಚೆಗಳನ್ನು ಮಾಡುವುದು, ಸಮುದಾಯ ಅರಿವು ಕಾರ್ಯಕ್ರಮಗಳ ಮೂಲಕ ಮಕ್ಕಳ ಹಕ್ಕುಗಳು, ಶಿಕ್ಷಣ ಹಕ್ಕು ಖಾಯಿದೆ, ಬಾಲ್ಯ ವಿವಾಹ ನಿಷೇದ ಕಾಯಿದೆ, ಬಾಲಕಾರ್ಮಿಕ ವಿರೋದಿ ಕಾಯಿದೆ




ಕುರಿತು ಜನರಲ್ಲಿ ಅರಿವು ಮೂಡಿಸುವ ಕೆಲಸವನ್ನು ಪಂಚಾಯತ್ ಮಾಡುತ್ತಿತು. ಈ ಸಮಿತಿಯು ಪ್ರತೀ ಮೂರು ತಿಂಗಳಿಗೊಮ್ಮೆ ನಡೆಯುವ ಸಭೆಯ ನಡಾವಳಿಯನ್ನು ದಾಖಲಿಸಿ ಅದರ ವರದಿಯನ್ನು ತಾಲೂಕು, ಜಿಲ್ಲಾ ಪಂಚಾಯ್ತ್‌ಗಳಿಗೂ ಕಳುಹಿಸುತ್ತಿತ್ತು. ಅಲ್ಲದೆ ಮಕ್ಕಳ ಗ್ರಾಮ ಸಭೆಯನ್ನು ಮಾದರಿ ಮಕ್ಕಳ ಗ್ರಾಮ ಸಭೆಯನ್ನಾಗಿಸುವ ನಿಟ್ಟಿನಲ್ಲಿ ಮಕ್ಕಳ ಗ್ರಾಮ ಸಭೆಯ ಪೂರ್ವ ತಯಾರಿ ಸಭೆಯನ್ನು ಕರೆದು ಮಕ್ಕಳ ಗ್ರಾಮ ಸಭೆಯನ್ನು ನಡೆಸುವ ಕುರಿತು ಶಾಲಾ ಶಿಕ್ಷಕರು, ಎಸ್.ಡಿ.ಎಮ್.ಸಿ, ಆರೋಗ್ಯ ಸಹಾಯಕರು, ಅಂಗನವಾಡಿ ಮೇಲ್ವಿಚಾರಕರು, ಅಂಗನವಾಡಿ ಕಾರ್ಯಕರ್ತೆಯರು ಹಾಗೂ ಪಡಿ ಮತ್ತು ಶಿಕ್ಷಣ ಸಂಪನ್ಮೂಲ ಕೇಂದ್ರದ ಸದಸ್ಯರಲ್ಲಿ ಚರ್ಚಿಸಿ ಮಕ್ಕಳ ಗ್ರಾಮ ಸಭೆಗೆ ಪೂರ್ವ ತಯಾರಿ ನಡೆಸುತ್ತಿತ್ತು. ಮಕ್ಕಳ ಗ್ರಾಮ ಸಭೆ ಕುರಿತು ಸಮುದಾಯದ ಜನರನ್ನು

ಕರೆತರುವ ನಿಟ್ಟಿನಲ್ಲಿ ಮಕ್ಕಳ ಗ್ರಾಮ ಸಭೆಯಂದು ಜಾಥಾದ ಮೂಲಕ ಸಮುದಾಯಕ್ಕೆ ಅರಿವು ಮೂಡಿಸಿ ಗ್ರಾಮ ಸಭೆ ನಡೆಸುತ್ತಿದ್ದರು ಹಾಗೂ ಮಕ್ಕಳ ಹಕ್ಕುಗಳ ಗ್ರಾಮ ಸಭೆಗೆ ಎಲ್ಲಾ ಇಲಾಖ ಅಧಿಕಾರಿಗಳನ್ನು ಆಹ್ವಾನಿಸಿ ಮಕ್ಕಳ ಬೇಡಿಕೆಗಳಿಗೆ ಮನ್ನಣೆ ದೊರೆಯುವಂತೆ ಮಾಡಲಾಗುತ್ತಿತ್ತು ಹಾಗೂ ಮಕ್ಕಳ ಬೇಡಿಕೆಗಳನ್ನು ಆಯಾಯ ಇಲಾಖೆಗೆ ಸಂಬಂಧಿಸಿದಂತೆ ವಿಂಗಡಿಸಿ ಕಳುಹಿಸಲಾಗುತ್ತಿತ್ತು ಮತ್ತು ಅದರ ಅನುಸರಣೆ ಮಾಡಿ ಶಾಲೆಗಳಿಗೆ ರಂಗ ಮಂದಿರ, ಸುಣ್ಣ–ಬಣ್ಣ, ಆವರಣ ಗೋಡೆ, ಕ್ರೀಡಾ ಸಾಮಗ್ರಿ, ನೀರಿನ ವ್ಯವಸ್ಥೆಗಳನ್ನು ಮಾಡಲಾಗಿದೆ.

ಮಗುಸ್ನೇಹಿ ಪಂಚಾಯತ್ ಆಗುವ ನಿಟ್ಟಿನಲ್ಲಿ 0–18 ವರ್ಷದ ಮಕ್ಕಳ ಅಂಕಿ ಅಂಶಗಳು, ವಿಶೇಷ ಮಕ್ಕಳ ಅಂಕಿ–ಅಂಶಗಳನ್ನು ಪಂಚಾಯತ್‌ನಲ್ಲಿ ಇಡಲಾಗಿದೆ ಅಲ್ಲದೆ ಸ್ಥಳೀಯ ಭಾಷೆಯಲ್ಲಿ ಉಚಿತ ಮತ್ತು ಕಡ್ಡಾಯ ಶಿಕ್ಷಣ ಹಕ್ಕು ಖಾಯಿದೆ ಮಾಹಿತಿ, ಮಕ್ಕಳ ರಕ್ಷಣಾ ವ್ಯವಸ್ಥೆಗಳ ಮಾಹಿತಿ ಫಲಕಗಳನ್ನು ಹಾಕಲಾಗಿದೆ.

ಹೀಗೆ ಪ್ರತೀ ಮೂರು ತಿಂಗಳಿಗೊಮ್ಮೆ ನಡೆಸುವ ಮೌಲ್ಯ ಮಾಪನದಲ್ಲಿ ಗ್ರಾಮ ಪಂಚಾಯತ್ ಮತ್ತು ಮಕ್ಕಳ ರಕ್ಷಣಾ ಸಮಿತಿ ತಪ್ಪದೆ ಭಾಗವಹಿಸಿ ತಮ್ಮ ಕೆಲಸ ಕಾರ್ಯಗಳ ಕುರಿತು ವಿಶ್ಲೇಷಣೆಯನ್ನು ನಡೆಸಿ ಇನ್ನಷ್ಟು ಸಮುದಾಯಕ್ಕೆ ಮಕ್ಕಳಿಗೆ ನೆರವಾಗುವಂತೆ ನೋಡಿಕೊಳ್ಳುತ್ತಾರೆ.

ಹೀಗೆ ಕೊಡಿಪ್ಪಾಡಿ ಪಂಚಾಯತ್ ಪಡಿಯ ಕಾರ್ಯ ಯೋಜನೆಗಳಿಗೆ ಕೈ ಜೋಡಿಸುತ್ತಾ ಮಗುಸ್ನೇಹಿ ಪಂಚಾಯತ್ ಆಗುವಲ್ಲಿ ದಿಟ್ಟ ಹೆಜ್ಜೆಯನ್ನಿಟ್ಟು ಯಶಸ್ವಿಯಾಗಿದೆ.

*****

## ಗ್ರಾಮ ಪಂಚಾಯತ್‌ನಲ್ಲಿ ಕಂಡ ಬದಲಾವಣೆ

ಸುಳ್ಯ ತಾಲೂಕು ಕೇಂದ್ರದಿಂದ ಸುಮಾರು 12 ಕಿಲೋ ಮೀಟರ್ ದೂರದಲ್ಲಿ ಕೊಡಗು ಜಿಲ್ಲೆಗೆ ಸಮೀಪವೇ ತಾಗಿಕೊಂಡಿರುವ ನಮ್ಮ ಊರ ಪಂಚಾಯತ್ ಉಬರಡ್ಕ ಮಿತ್ತೂರು ಪಂಚಾಯತ್ ಈ ಪಂಚಾಯತ್‌ನಲ್ಲಿ 9 ಜನ ಸದಸ್ಯರು ಇರುತ್ತಾರೆ.

ಇಲ್ಲಿ ಹಿಂದುಳಿದ ವರ್ಗ ಹಾಗೂ ಪರಿಶಿಷ್ಟ ಜಾತಿ ಮತ್ತು ಪಂಗಡಕ್ಕೆ ಸೇರಿದ ಹೆಚ್ಚಿನ ಕುಟುಂಬ ಕೂಲಿ ಕಾರ್ಮಿಕರಾಗಿರುತ್ತಾರೆ. ಈ ಪಂಚಾಯತ್ ವ್ಯಾಪ್ತಿಯಲ್ಲಿ 2 ಸರಕಾರಿ ಹಿರಿಯ ಪ್ರಾಥಮಿಕ ಶಾಲೆ ಹಾಗೂ ಒಂದು ಕಿರಿಯ ಪ್ರಾಥಮಿಕ ಶಾಲೆ ಮತ್ತು ಒಂದು ಖಾಸಗಿ ಪ್ರೌಢಶಾಲೆಯನ್ನು ಒಳಗೊಂಡಿದೆ.

ಇಲ್ಲಿಯ ಸರಕಾರಿ ಶಾಲೆಗಳು ಅಷ್ಟೊಂದು ಮೂಲಭೂತ ಸೌಕರ್ಯಗಳಿಂದ ಅಭಿವೃದ್ಧಿ ಹೊಂದಿರಲಿಲ್ಲ. ಆದ್ದರಿಂದ ಮಕ್ಕಳ ಸಂಖ್ಯೆಯು ಇಳಿಮುಖವಾಗುತ್ತಿತ್ತು. ಶಾಲೆಗಳಲ್ಲಿ ಎಸ್.ಡಿ.ಎಂ.ಸಿ. ಸಮಿತಿ ಸಭೆಗಳಲ್ಲಿ ಪಂಚಾಯತ್ ಸದಸ್ಯರ ಭಾಗವಹಿಸುವಿಕೆ ಇಲ್ಲದಿರುವುದು. ಶಿಕ್ಷಣಕ್ಕಾಗಿ ಹಣ ಮೀಸಲಿಡುವುದು, ಶಿಕ್ಷಣದ ಬಗ್ಗೆ ಸಾಮಾನ್ಯ ಸಭೆಗಳಲ್ಲಿ ಕಾರ್ಯಸೂಚಿಗಳು ಕೆಲವೇ ಸಾಮಾನ್ಯವಾಗಿತ್ತು.

ಈ ಸಮಯದಲ್ಲಿ 'ಪಡಿ' ಸಂಸ್ಥೆಯು 'ಮಗು ಸ್ನೇಹಿ ಪಂಚಾಯತ್' ಆಗುವ ನಿಟ್ಟಿನಿಂದ ನಮ್ಮ ಪಂಚಾಯತ್‌ನ್ನು ಆಯ್ಕೆ ಮಾಡಿತು.

ಹೀಗೆ ಮುಂದಿನ ದಿನಗಳಲ್ಲಿ 'ಪಡಿ' ಸಂಸ್ಥೆಯು ಶಿಕ್ಷಣ ಸಂಪನ್ಮೂಲ ಕೇಂದ್ರ ಸಹಕಾರದೊಂದಿಗೆ ಶಾಲಾಭಿವೃದ್ಧಿಯಲ್ಲಿ ಪಂಚಾಯತ್ ಪಾತ್ರ, ಎಸ್.ಡಿ.ಎಂ.ಸಿ. ಸಭೆಯಲ್ಲಿ ಪಂಚಾಯತ್ ಸದಸ್ಯರ ಭಾಗವಹಿಸುವಿಕೆ, ಮಕ್ಕಳ ರಕ್ಷಣೆ ಪಂಚಾಯತ್ ಜವಾಬ್ದಾರಿಗಳು ಶಾಲಾ ಕುಂದುಕೊರತೆ ನಿವಾರಣೆ ವ್ಯವಸ್ಥೆ ಬಗ್ಗೆ ಪಂಚಾಯತ್ ಜವಾಬ್ದಾರಿಗಳು ಶಾಲಾ ಕುಂದುಕೊರತೆ ನಿವಾರಣೆ ವ್ಯವಸ್ಥೆ ಬಗ್ಗೆ ಪಂಚಾಯತ್ ಜವಾಬ್ದಾರಿ ಹೀಗೆ ಹಲವಾರು ಮಾರ್ಗದರ್ಶನದೊಂದಿಗೆ ಬೇರೆ ಬೇರೆ ರೀತಿಯಲ್ಲಿ ತರಬೇತಿಯನ್ನು ನೀಡಿದರು.

ಇದೆಲ್ಲವನ್ನು ತಿಳಿದುಕೊಂಡು ಪಂಚಾಯತ್ ಶಾಲೆಯತ್ತ ಹೆಚ್ಚಿನ ಕಾಳಜಿಯಿಂದ ಹೆಜ್ಜೆ ಹಾಕಲು ಪ್ರಾರಂಭಿಸಿತು.

ಪಂಚಾಯತ್ ವ್ಯಾಪ್ತಿಗೆ ಬರುವ ಸರಕಾರಿ ಶಾಲೆಗಳಿಗೆ ಭೇಟಿ ನೀಡಿ ಶಾಲಾ ಮೂಲಭೂತ ಸೌಕರ್ಯಗಳ ಬಗ್ಗೆ ಗಮನಿಸಿದಾಗ ಇನ್ನೂ ಹೆಚ್ಚಿನ ರೀತಿಯ ವ್ಯವಸ್ಥೆಗಳು ಸರಿಯಾಗಿ ಇಲ್ಲದಿರುವುದು ಗಮನಕ್ಕೆ ಬಂತು. ಮುಂದಿನ ದಿನಗಳಲ್ಲಿ ಶಾಲೆಗಳಲ್ಲಿ ನಡೆಯುವ ಎಸ್.ಡಿ.ಎಂ.ಸಿ. ಮಾಸಿಕ ಸಭೆಗಳಲ್ಲಿ ಪಂಚಾಯತ್ ಸದಸ್ಯರಾದ ನಾವು ಭಾಗವಹಿಸಿ ಶಾಲಾ ಅಭಿವೃದ್ಧಿ ಬಗ್ಗೆ ಚರ್ಚಿಸಲಾಯಿತು.

*****

## ಮಕ್ಕಳ ರಕ್ಷಣೆ ದೃಷ್ಠಿಯತ್ತ ಶಾಲೆಗೆ ಅವರಣ ಗೋಡೆ

ಶಾಲೆ ಎಂದ ತಕ್ಷಣ ಕಣ್ಣೆದುರಿಗೆ ಬರುವುದು ಮಕ್ಕಳ ದೃಶ್ಯ ಶಾಲೆಯಲ್ಲಿ ಮಕ್ಕಳು ವಿದ್ಯೆಯನ್ನು ಕಲಿತರಷ್ಟೆ ಸಾಕೇ ಅಲ್ಲಾ ಅವರ ರಕ್ಷಣೆ ಅಷ್ಟೆ ಮುಖ್ಯ.

ಹೀಗಿರುವಾಗ ಈ ನಮ್ಮ ಶಾಲೆ ಉಬರಡ್ಕ ಮಿತ್ತೂರು ಗ್ರಾಮ ಪಂಚಾಯತ್ ವ್ಯಾಪ್ತಿಗೆ ಬರುವ ಸುಳ್ಯ ನಗರ ಮಟ್ಟದಿಂದ ಸುಮಾರು 12 ಕಿ.ಲೊ ಮೀಟರ್‌ಗಳ ಅಂತರದಲ್ಲಿ ಮುಂದೆ ಹಳ್ಳಿ–ಪ್ರದೇಶಗಳಿಗೆ ಹಾದು ಹೋಗುವ ರಸ್ತೆಯ ಬದಿಯಲ್ಲಿಯೇ ಇರುವುದು ನಮ್ಮೂರ ಉಬರಡ್ಕ ಮಿತ್ತೂರು ಹಿರಿಯ ಪ್ರಾಥಮಿಕ ಶಾಲೆ. ಈ ಶಾಲೆಯು ರಸ್ತೆ ಬದಿಯಲ್ಲಿ ಇದ್ದು ಮಕ್ಕಳ ಹಿತದೃಷ್ಟಿಯನ್ನು ನೋಡಿಕೊಂಡು ಮಕ್ಕಳ ರಕ್ಷಣೆಗೋಸ್ಕರ ಎಸ್.ಡಿ.ಎಂ.ಸಿಯವರು ಸಮಿತಿಗಳನ್ನು ಕರೆದು ಶಾಲಾಭಿವೃದ್ದಿ ಯೊಜನೆಯನ್ನು ತಯಾರಿಸಿ. ಅದರ ಜೊತೆ ವಾರ್ಷಿಕ ಕ್ರಿಯಾ ಯೋಜನೆಗಳನ್ನು ತಯಾರು ಮಾಡಿದರು. ಹಾಗೆಯೇ ಈ ಶಾಲೆಯಲ್ಲಿ ಹಿಂದುಳಿದ ವರ್ಗ ಹಾಗೂ ಪರಿಶಿಷ್ಠ ಜಾತಿಗೆ ಸೇರಿದ ಹೆಚ್ಚಾಗಿ ಕೂಲಿಕಾರ್ಮಿಕರ ಮಕ್ಕಳೇ ಇರುತ್ತಾರೆ.

ಹೀಗೆ ತಯಾರು ಮಾಡಿದ ಕ್ರಿಯಾ ಯೋಜನೆಯಲ್ಲಿ ಶಾಲಾ ಅವರಣಗೋಡೆ ಬಗ್ಗೆ ಪ್ರಥಮ ಯೋಜನೆಯಾಗಿ ತೆಗೆದು ಪ್ರತಿಗಳನ್ನು ಇಲಾಖೆ, ಪಂಚಾಯತ್ ದಾನಗಳು, ಜನಪ್ರತಿನಿಧಿಗಳಿಗೆ ಕೊಡುವುದರ ಮೂಲಕ ಹೆಜ್ಜೆ ಹಾಕಲಾಯಿತು.

ಅದರಂತೆ ಮಕ್ಕಳಿಗೂ ಶಾಲೆಗೆ ಅವರಣ ಗೋಡೆ ಬೇಕು ಎಂದು ಆಸೆಪಟ್ಟರು. ಹಾಗೇ ವಾರ್ಷಿಕ ಕ್ರಿಯಾಯೋಜನೆಯನ್ನು ಪಂಚಾಯತಿಗೆ ಕೊಡುವುದರೊಂದಿಗೆ ಮಕ್ಕಳ ಹಕ್ಕುಗಳ ಗ್ರಾಮ ಸಭೆಯಲ್ಲಿ ಶಾಲೆಗೆ ಅವರಣಗೋಡೆ ಬೇಕು ಎಂದು ದ್ವನಿ ಎತ್ತುದರ ಮೂಲಕ ಪಂಚಯತ್ ನಮ್ಮ ಶಾಲೆಗೆ ಅವರಣ ಗೋಡೆಯನ್ನು ಪಂಚಾಯತ್ ಅನುಮೋದನೆ ಮಾಡಿತ್ತು. ಇದರ ಕೆಲಸವನ್ನು SDM ಅಯೇ ನಿಂತು ಮಾಡುವುದರೊಂದಿಗೆ ಸುಸಜ್ಜಿತ ಅವರಣ ಮಕ್ಕಳ ರಕ್ಷಣೆಯಿಂದ ನಮ್ಮ ಮಕ್ಕಳಿಗೂ ತುಂಬಾ ಸಂತೋಷವಾಗಿದೆ. ಮಕ್ಕಳು ಸುರಕ್ಷಿತರಾಗಿ ಶಾಲೆಯಲ್ಲಿ ವಿದ್ಯಾಭ್ಯಾಸವನ್ನು ಕಲಿಯುತ್ತಾರೆ. ಜೊತೆಗೆ ಶಾಲಾ ಕುಂದುಕೊರತೆ ನಿವಾರಣಾ ವ್ಯವಸ್ಥೆ ಸಮುದಾಯದತ್ತ ಶಾಲೆ ಸಮುದಾಯವನ್ನು ಸೇರಿಸಿಕೊಂಡು ಶಾಲಾಹಬ್ಬ ಹೆಣ್ಣು ಮಕ್ಕಳಿಗೆ ನಾಯಕತ್ವದಲ್ಲಿ ಸಮಾನತೆ (ಲಿಂಗತಾರತಮ್ಯ) ಶಾಲಾ ದಾಖಲಾತಿ ಅಂದೋಲನ ಗುಣಮಟ್ಟದ ಶಿಕ್ಷಣದ ಬಗ್ಗೆ ಪೋಷಕರೊಂದಿಗೆ ಚರ್ಚಿಸಿ ಸಲಹೆ–ಸೂಚನೆಗಳನ್ನು ನೀಡುವುದು ಇದರಿಂದ ಮಕ್ಕಳಿಗೆ ಗುಣಮಟ್ಟದ ಶಿಕ್ಷಣ ದೊರಕಿದಂತಾಗಿದೆ.

ಈ ಎಲ್ಲಾ ಮಾರ್ಗದರ್ಶನ ನಮಗೆ ಸಿಕ್ಕಿರುವುದು ಪಡಿ ಸಂಸ್ಥೆಯ ನೀಡಿದ ತರಬೇತಿ ಮತ್ತು ಮಾರ್ಗದರ್ಶನದಲ್ಲಿ ಅವರು ವಿವಿಧ ಹಂತದ ತರಭೇತಿಯನ್ನು ನೀಡಿದ ತರಭೇತಿಯ ವಿಷಯಗಳನ್ನು ಅರಿತುಕೊಂಡು ಶಾಲಾಭಿವೃದ್ದಿ ಯೋಜನೆ ತಯಾರಿಸಿ ಅದನ್ನು ಪೂರಕ ಕ್ರಿಯಾಯೋಜನೆ ತಾಯಾರಿಸಿ ದಾನಿಗಳನ್ನು ಗುರುತಿಸಲು ಮತ್ತು ಮಕ್ಕಳ ಮಂತ್ರಿ ಮಂಡಲ ಮೀನಾ ಹಾಗೂ ಮಕ್ಕಳ ಹಕ್ಕುಗಳ ಕ್ಲಬ್‌ಲ್ಲಿ ತಮ್ಮ ರಕ್ಷಣೆ ಬಗ್ಗೆ ತಿಳಿಸಿ ಸ್ಥಳೀಯ ಸರಕಾರದಲ್ಲಿ ನಡೆಯುವ ಮಕ್ಕಳ ಹಕ್ಕುಗಳ ಗ್ರಾಮ ಸಭೆಯಲ್ಲಿ ದ್ವನಿಯೆತ್ತಿ ಪ್ರೇರೇಪಿಸಲು ಸಾದ್ಯವಾಯಿತು.

*****

## ಮಕ್ಕಳ ರಕ್ಷಣಾ ನೀತಿಯ ಅಗತ್ಯತೆಯನ್ನು ಅರಿತು ಶಾಲೆಯಲ್ಲಿ ಅನುಷ್ಠಾನಿಸಿದ ಶಾಲಾಭಿವೃದ್ಧಿ ಸಮಿತಿ



ಸರಕಾರಿ ಹಿರಿಯ ಪ್ರಥಮಿಕ ಶಾಲೆ ಪಡ್ಡೂರು ಇದು ಬನ್ನೂರು ಗ್ರಾಮ ಪಂಚಾಯತ್ ವ್ಯಾಪ್ತಿಯ ಗ್ರಾಮೀಣ ಭಾಗದಲ್ಲಿದೆ ಹೆಚ್ಚು ಮೂಲ ಭೂತ ಸೌಕರ್ಯವಿಲ್ಲದ ಗ್ರಾಮೀಣ ಪ್ರದೇಶವಿದು. ಜನರು ನಗರ ಪ್ರದೇಶಕ್ಕೆ ಬರಬೇಕಾದರೆ ಕಾಲ್ನಡಿಗೆ ಅಥವಾ ರಿಕ್ಷಾವನ್ನು ಅವಲಂಬಿಸಬೇಕಾದ ಪರಿಸ್ಥಿತಿ ಇಲ್ಲಿದೆ. ಇಲ್ಲಿ ಸಂಸ್ಥೆಯ ಮಗುಸ್ನೇಹಿ ಶಾಲಾ ಯೋಜನೆಯಡಿ ಸರಕಾರಿ ಹಿರಿಯ ಪ್ರಾಥಮಿಕ ಶಾಲೆ ಪಡ್ಡೂರು 120 ಮಕ್ಕಳಿಂದ ಮುಂದುವರಿಯುತ್ತಿದೆ. ಈ ಶಾಲಾ ಮಕ್ಕಳ ಪೋಷಕರು ಕೃಷಿ ಹಾಗೂ ಕೂಲಿ ಕಾರ್ಮಿಕರಾಗಿ ದುಡಿಯುತ್ತಿದ್ದಾರೆ. ಇಲ್ಲಿನ ಶಾಲಾಭಿವೃದ್ಧಿ ಮತ್ತು ಮೇಲುಸ್ತುವಾರಿ ಸಮಿತಿಯು ಆರಂಭದಲ್ಲಿ ಮಕ್ಕಳ ಸುರಕ್ಷತೆಗಾಗಿ ಯಾವುದೇ ಮಕ್ಕಳ ರಕ್ಷಣಾ ನೀತಿ ಕುರಿತು ಯೋಚಿಸಿಯೇ ಇರಲಿಲ್ಲ. ಪಡಿ ಸಂಸ್ಥೆಯು ಮಗುಸ್ನೇಹಿ ಶಾಲಾ ಯೋಜನೆ ಮೂಲಕ ಶಾಲಾಬಿವೃದ್ಧಿ ಮತ್ತು ಮೇಲುಸ್ತುವಾರಿ ಸಮಿತಿ ಸದಸ್ಯರಿಗೆ ಜವಾಬ್ದಾರಿ ಕರ್ತವ್ಯಗಳು, ಶಾಲಾಭಿವೃದ್ಧಿ ಯೋಜನೆ ತಯಾರಿ, ಕುಂದು ಕೊರತೆ ನಿವಾರಣಾ ವ್ಯವಸ್ಥೆಗಳು ಮಕ್ಕಳ ರಕ್ಷಣಾ ನೀತಿ ಕುರಿತು ತರಬೇತಿಗಳನ್ನು ಹಮ್ಮಿಕೊಳ್ಳಲಾಯಿತು.

ಶಾಲಾಭಿವೃದ್ಧಿ ಮತ್ತು ಮೇಲುಸ್ತುವಾರಿ ಸಮಿತಿಯವರು ತಮ್ಮ ಸಮಿತಿ ಸಭೆಯಲ್ಲಿ ಮಕ್ಕಳ ರಕ್ಶಣಾ ನೀತಿ ರಚಿಸುವ ಕುರಿತು ಸಭೆಯನ್ನು ಕರೆದು ಸಂಸ್ಥೆಗೆ ತಿಳಿಸಿದರು ನಂತರ ಪಡಿ ಸಂಸ್ಥೆಯು ಶಿಕ್ಷಣ ಸಂಪನ್ಮೂಲ ಕೇಂದ್ರದ ಸಹಕಾರದೊಂದಿಗೆ ಮಕ್ಕಳ ರಕ್ಷಣಾ ನೀತಿ ನಿಯಮಾವಳಿ ರಚಿಸುವ ಕುರಿತು ಮಾಹಿತಿಯನ್ನು ನೀಡಿತು. ನಂತರ ಎಸ್.ಡಿ.ಎಮ್.ಸಿ ಮತ್ತು ಶಿಕ್ಷಕರು, ಪೋಷಕರು ಸೇರಿ ಮಕ್ಕಳ ರಕ್ಷಣಾ ನೀತಿಯನ್ನು ರಚಿಸಿ ಎಸ್.ಡಿ.ಎಮ್.ಸಿ ಯಲ್ಲಿ ಅದನ್ನು ಅಂಗೀಕರಿಸಲಾಯಿತು.



ಇದರಿಂದಾಗಿ ಮಕ್ಕಳ ಸುರಕ್ಷಾ ಸಮಿತಿ ಸಭೆ ನಡೆಸಲಾಗುತ್ತದೆ ಹಾಗೂ ಬೀಟ್ ಪೋಲೀಸ್, ಕಿರಿಯ ಆರೋಗ್ಯ ಸಹಾಯಕರು ಶಾಲೆಗೆ ಭೇಟಿ ನೀಡು ವಂತಾಗಿದೆ ಹಾಗೂ ಮಕ್ಕಳ ಸುರಕ್ಷತೆಗೆ ಹೆಚ್ಚಿನ ಆದ್ಯತೆಯನ್ನು ನೀಡಿದಂತಾಗಿದೆ. ಇದರಿಂದ ಪೋಷಕರೂ ಕೂಡ ಜಾಗೃತರಗಿದ್ದಾರೆ ಮಕ್ಕಳನ್ನು ಶಾಲಾ ಅವಧಿಯಲ್ಲಿ ಹೊರಗೆ ಕರೆದು ಕೊಂಡು ಹೋಗುವುದನ್ನು ನಿಲ್ಲಿಸಿರುತ್ತಾರೆ. ಮತ್ತು ಶಾಲೆಗೆ ಯಾವುದೇ ಹೊರಗಿನ ವ್ಯಕ್ತಿಗಳು ಬಂದಾಗ ಮಕ್ಕಳ ಜೊತೆ ನೇರ ಅಂಪರ್ಕ ಹೊದದಂತೆ ಶಿಕ್ಶಕರು ನೋಡಿಕೊಳ್ಳುತ್ತಾರೆ. ಪಠ್ಯೇತರ ಚಟುವಟಿಕೆಗಳಿಗೆ ಪ್ರೋತ್ಸಾಹಿಸುವ ನಿಟ್ಟಿನಲ್ಲಿ ಇತರ ಶಿಕ್ಷಕರ ನೇಮಕ ಮಾಡುವಾಗ ಅವರ್ ಪೂರ್ವಾಪರಗಳನ್ನು ವಿಚಾರಿಸಿ ನಂತರ ನೇಮಕ ಮಾಡಿಕೊಳ್ಳುವ ಅಥವಾ ಅವಕಾಶ ಕಲ್ಪಿಸುವ ವ್ಯವಸ್ಥೆ ಮಾಡಲಾಗಿದೆ. ಮಕ್ಕಳ ರಕ್ಷಣಾ ನೀತಿಯನ್ನು ರಚಿಸಿ ಶಾಲೆಯಲ್ಲಿ ಅದನ್ನು ಹಾಕುವುದರ ಮೂಲಕ ಪೋಷಕರು ಹಾಗೂ ಇತರರಿಗೆ ಅದರ ಕುರಿತು ಅರಿವು ಮೂಡಿಸಲಾಗಿದೆ.

*****

# ಶಾಲಾ ಮುಖ್ಯ ವಾಹಿನಿಗೆ ಮರಳಿ ಬಂದರು ಮಕ್ಕಳು

ಪ್ರತೀಯೊಂದು ಶಾಲೆಯ ಶಿಕ್ಷಕರು ಮಕ್ಕಳ ಭವಿಷ್ಯವನ್ನು ರೂಪಿಸುವ ರೂವಾರಿಗಳು ಯಾಕೆಂದರೆ ಮಕ್ಕಳಿಗೆ ಅಕ್ಷರಗಳನ್ನು ಕಲಿಸಿ ಅವರ ವ್ಯಕ್ತಿತ್ವ ವಿಕಸನವಾಗುವಂತೆ ಮಾಡುವುದೇ ಶಾಲಾ ಶಿಕ್ಷಕರು. ಈ ಮಾತಿಗೆ ಹೆಚ್ಚು ಪುಷ್ಠಿ ನೀಡುವುದು ಬಲ್ನಾಡು ಶಾಲೆಯ ಮಕ್ಕಳನ್ನು ಕಂಡಾಗ. ಸರಕಾರಿ ಹಿರಿಯ ಪ್ರಾಥಮಿಕ ಶಾಲೆ ಬಲ್ನಾಡು ಇಲ್ಲಿ 67 ಮಕ್ಕಳು ಓದುತ್ತಿದ್ದಾರೆ ಹಾಗೂ ಇಲ್ಲಿ ಹೆಚ್ಚು ಹಿಂದುಳಿದ, ಅಲ್ಪ ಸಂಖ್ಯಾತ, ಮತ್ತು ಪರಿಶಿಷ್ಟ ವರ್ಗ ಮತ್ತು ಪರಿಶಿಷ್ಟ ಪಂಗಡದ ಮಕ್ಕಳು ಕಲಿಯುತ್ತಿದ್ದಾರೆ. ಬಲ್ನಾಡು ಗ್ರಾಮ ಪಂಚಾಯತ್ ವ್ಯಾಪ್ತಿಯ ಗ್ರಾಮೀಣ ಭಾಗದಲ್ಲಿ ಈ ಶಾಲೆಯು ಇದೆ. ಇಲ್ಲಿನ ಮಕ್ಕಳ ಪೋಷಕರು ಬಡ ಕೂಲಿ ಕಾರ್ಮಿಕರಾಗಿದ್ದಾರೆ. ಇಲ್ಲಿನ ಹೆಚ್ಚಿನ ಪೋಷಕರು ಪರಿಶಿಷ್ಟ ವರ್ಗದವರಾಗಿದ್ದುದರಿಂದ ಅವರಿಗೆ ಮಕ್ಕಳ ಶಿಕ್ಷಣದ ಕುರಿತು ಹೆಚ್ಚಿನ ಆಸಕ್ತಿಯಿರಲಿಲ್ಲ ಹಾಗಾಗಿ ಮಕ್ಕಳು ಶಾಲೆಗೆ ಗೈರು ಹಾಜರಾಗುತ್ತಿದ್ದರೂ ಪೋಷಕರು ಮಕ್ಕಳನ್ನು ಶಾಲೆಗೆ ಕಳುಹಿಸಲು ಆಸಕ್ತಿಯನ್ನು ವಹಿಸುತ್ತಿರಲಿಲ್ಲ.

ಪಡಿ ಸಂಸ್ಥೆಯ ಮಗುಸ್ನೇಹಿ ಶಾಲಾ ಯೋಜನೆಯಡಿಯಲ್ಲಿ ಆಯ್ಕೆಯಾದ ಶಾಲೆಗಳಲ್ಲಿ ಈ ಶಾಲೆಯೂ ಒಂದಾಗಿತ್ತು. ಶಾಲಾಭಿವೃದ್ಧಿ ಮತ್ತು ಮೇಲುಸ್ತುವಾರಿ ಸಮಿತಿಯವರ ಸಭೆಯಲ್ಲಿ ಚರ್ಚಿಸಿ ಸಂಸ್ಥೆಯ ಗಮನಕ್ಕೆ ತಂದಾಗ ಪಡಿ ಸಂಸ್ಥೆಯು ಶಿಕ್ಷಣ ಸಂಪನ್ಮೂಲ ಕೇಂದ್ರದ ಸಹಕಾರದೊಂದಿಗೆ ಮಕ್ಕಳನ್ನು ಮರಳಿ ಶಾಲೆಗೆ ಕರೆತರಲು ಯೋಜನೆಗಳನ್ನು ರೂಪಿಸಿದರು.

ಪೋಷಕರ ಸಭೆಗಳಲ್ಲಿ ಮಕ್ಕಳ ಶಿಕ್ಷಣದ ಮತ್ತು ಶಾಲಾಭಿವೃದ್ಧಿ ಮತ್ತು ಮೇಲುಸ್ತುವಾರಿ ಸಮಿತಿ ಸದಸ್ಯರಿಗೆ ಅವರ ಜವಾಬ್ದಾರಿ ಮತ್ತು ಕರ್ತವ್ಯಗಳು, ಶಾಲಾಭಿವೃದ್ಧಿ ಯೋಜನೆ ತಯಾರಿ ಕುಂದುಕೊರತೆ ನಿವಾರಣ ವ್ಯವಸ್ಥೆಗಳ ಕುರಿತು ತರಬೇತಿಯನ್ನು ಹಮ್ಮಿಕೊಳ್ಳಲಾಯಿತು. ನಂತರದ ದಿನಗಳಲ್ಲಿ ಶಾಲಾಭಿವೃದ್ಧಿ ಮತ್ತು ಮೇಲುಸ್ತುವಾರಿ ಸಮಿತಿಯವರು ಶಾಲೆಯಿಂದ ಹೊರಗುಳಿದ ಮಕ್ಕಳ ಬಗ್ಗೆ ಆಗಾಗ ಸಮಿತಿ ಸಭೆಗಳಲ್ಲಿ ಚರ್ಚಿಸಿ ಮನೆ ಭೇಟಿ ಮಾಡುವ ನಿರ್ಣಯಗಳನ್ನು ತೆಗೆದುಕೊಳ್ಳುತ್ತಿದ್ದರು.

ಪಡಿ ಸಂಸ್ಥೆಯ ವತಿಯಿಂದ ಅಧ್ಯಯನಕ್ಕಾಗಿ ಬರುತ್ತಿದ್ದ ಸ್ನಾತ್ತಕೋತ್ತರ ಸಮಾಜ ಕಾರ್ಯ ವಿಭಾಗದ ವಿದ್ಯಾರ್ಥಿಗಳ ಸಹಕಾರದೊಂದಿಗೆ ಶಾಲೆಯಿಂದ ಹೊರಗುಳಿದ ಮಕ್ಕಳ ಮನೆ ಬೇಟಿ ಮಾಡಿ ಮಕ್ಕಳಿಗೆ ಶಾಲೆಗೆ ಬರಲು ಮನವೊಲಿಸಲಾಯಿತು ಅಲ್ಲದೆ ಮಕ್ಕಳ ಪೋಶಕರಿಗೂ ಮನವರಿಕೆ ಮಾಡಲಾಯಿತು ಅಲ್ಲದೆ ಮಕ್ಕಳಿಗೆ

ದೊರೆಯುವ ವಿದ್ಯಾರ್ಥಿ ವೇತನದ ಕುರಿತೂ ಪೋಷಕರಿಗೆ ತಿಳಿಸಿ ನಿರಂತರವಾಗಿ ಮಕ್ಕಳು ಶಾಲೆಗೆ ಬರುವಲ್ಲಿ ಅನುಸರಣೆ ಮಾಡಲಾಯಿತು. ಹಾಗೂ ಶಾಲೆಯಲ್ಲಿ ಮಕ್ಕಳ ಹಕ್ಕುಗಳ ಸಂಘ, ಮೀನಾ ತಂಡದಲ್ಲಿ ಇವರನ್ನು ಸೇರಿಸಿ ಆಮೂಲಕ ನಾಯಕತ್ವ ತರಬೇತಿ ಹಾಗೂ ಮೀನಾ ಚಟುವಟಿಕೆಗಳಲ್ಲೂ ಅವರನ್ನು ಭಾಗವಹಿಸುವಂತೆ ಪ್ರೇರೇಪಿಸಲಾಯಿತು

ಪಡಿ ಸಂಸ್ಥೆಯ ಮಾರ್ಗದರ್ಶನದೊಂದಿಗೆ ಶಿಕ್ಷಕರು ಮತ್ತು ಎಸ್.ಡಿ.ಎಮ್.ಸಿ ಯ ಅವಿರತ ಪ್ರಯತ್ನದಿಂದ ಮಕ್ಕಳು ಇದೀಗ ನಿರಂತರವಾಗಿ ಶಾಲೆಗೆ ಬರುವಂತಾಗಿದೆ. ಅಲ್ಲದೆ ಮಕ್ಕಳಿಗೆ ಸಮಾಜ ಕಲ್ಯಾಣ ಇಲಾಖೆಯಿಂದ ದೊರೆಯುವ ವಿದ್ಯಾರ್ಥಿ ವೇತನ ದೊರೆಯುತ್ತಿದೆ ಅಲ್ಲದೆ ಮಕ್ಕಳ ಅಧಾರ್ ಕಾರ್ಡ್, ಬ್ಯಾಂಕ್ ಖಾತೆಗಳನ್ನು ಕೂಡ ಮಾಡಲಾಗಿದೆ. ಈ ಎಲ್ಲಾ ವ್ಯವಸ್ಥೆಗಳ ನಂತರ ಮಕ್ಕಳು ನಿರಂತರ ಶಾಲೆಗೆ ಹಾಜರಾಗುತ್ತಿದ್ದಾರೆ. ಅಲ್ಲದೆ ಮಕ್ಕಳ, ಮುಂದಿನ ಭವಿಷ್ಯ ಹಾಗೂ ಮಕ್ಕಳ ವ್ಯಕ್ತಿತ್ವ ವಿಕಸನವಾಗಲು ಮಗುಸ್ನೇಹಿ ಶಾಲಾ ಯೋಜನೆ ದಾರಿದೀಪವಾಗಿದೆ.

*****

## ಶಾಲಾಭಿವೃದ್ಧಿ ಮತ್ತು ಮೇಲುಸ್ತುವಾರಿ ಸಮಿತಿ ಮತ್ತು ಶಿಕ್ಷಕರ ಒಗ್ಗೂಡುವಿಕೆಯಿಂದ ಸರಕಾರಿ ಶಾಲೆಯಲ್ಲಿ ಮಹತ್ವದ ಬದಲಾವಣೆ

ಸರಕಾರಿ ಶಾಲೆಗಳ ಅಭಿವೃದ್ಧಿಗೆ ಸರಕಾರದಿಂದಲೇ ಕ್ರಮ ಕೈಗೊಳ್ಳಬೇಕು ಎಂದು ಹೇಳುತ್ತಿರುವ ಈ ಕಾಲದಲ್ಲಿ ಎಸ್.ಡಿ.ಯಂ.ಸಿ ಮತ್ತು ಶಿಕ್ಷಕರು ಪಣತೊಟ್ಟು ಶಾಲಾಭಿವೃದ್ಧಿ ನಡೆಸಿ ಮಾದರಿಯಾದ ಶಾಲೆ ಕಾವಳಮುಡೂರು ಗ್ರಾಮದ ಕಾವಳಕಟ್ಟೆ ಉರ್ದು ಸರಕಾರಿ ಹಿರಿಯ ಪ್ರಾಥಮಿಕ ಶಾಲೆ.

ಈ ಶಾಲೆಯು ಉರ್ದು ಶಾಲೆ ಆದುದರಿಂದ ಸುಮಾರು 98% ವಿದ್ಯಾರ್ಥಿಗಳು ಅಲ್ಪಸಂಖ್ಯಾತ ಸಮುದಾಯದವರು. ಮೂರು ವರ್ಷಗಳ ಹಿಂದೆ ಈ ಶಾಲಾ ಎಸ್.ಡಿ.ಯಂ.ಸಿ ಮತ್ತು ಪೋಷಕರು ಯಾವುದೇ ಸಭೆಗಳಿಗೆ ಬರುತ್ತಿರಲಿಲ್ಲ, ತಿಂಗಳ ಎಸ್.ಡಿ.ಯಂ.ಸಿ ಸಭೆಗೆ ಕೇವಲ ಅಧ್ಯಕ್ಷರು ಒಬ್ಬರು ಅಥವಾ ಇಬ್ಬರು ಸದಸ್ಯರು ಹಾಜರಿರುತ್ತಿದ್ದರು. ಯಾವುದೇ ನಿರ್ಣಯಗಳನ್ನು ಕೈಗೊಳುತ್ತಿರಲಿಲ್ಲ. ಶಾಲಾಭಿವೃದ್ಧಿಯಲ್ಲಿ ಎಸ್.ಡಿ.ಯಂ.ಸಿ ಭಾಗವಹಿಸುವಿಕೆ ಅತ್ಯಂತ ಕಡಿಮೆ ಇತ್ತು. ಹೀಗಿರಲು ಬಂಟ್ವಾಳ ಶಿಕ್ಷಣ ಸಂಪನ್ಮೂಲ ಕೇಂದ್ರದ ಸದಸ್ಯರಾದ ಫಾರುಕ್ ಅವರನ್ನು ಸೇರಿಸಿಕೊಂಡು ಈ ಶಾಲೆಯ ಮುಖ್ಯಶಿಕ್ಷಕರಾದ ಹಸನ್‌ಸಾಬ್‌ರವರನ್ನು ಭೇಟಿ ಮಾಡಿ ಶಾಲಾ

ಸ್ಥಿತಿಗತಿಗಳ ಬಗ್ಗೆ ಈಗಿರುವ ಸಮಸ್ಯೆಗಳ ಬಗ್ಗೆ ಚರ್ಚಿಸಿ ಮುಂದೆ ಶಾಲಾಭಿವೃದ್ಧಿಯನ್ನು ಎಸ್.ಡಿ.ಯಂ.ಸಿ ಜೊತೆ ಸೇರಿಸಿಕೊಂಡು ನಡೆಸುವ ಬಗ್ಗೆ ತಿಳಿಸಿ ತಮ್ಮ ಸಹಕಾರದ ಬಗ್ಗೆ ತಿಳಿಸಲಾಯಿತು.

ಅದರಂತೆ ಮುಂದೆ ಎಸ್.ಡಿ.ಯಂ.ಸಿಯ ಸದಸ್ಯರನ್ನು ಶಿಕ್ಷಕರನ್ನು ಸೇರಿಸಿ ಸಭೆಗಳನ್ನು ನಡೆಸಿ ಚರ್ಚಿಸಿ ಶಾಲಾಭಿವೃದ್ಧಿ ಬಗ್ಗೆ ನಿರ್ಣಯಗಳನ್ನು ಕೈಗೊಳ್ಳಲಾಯಿತು. ಇದರಿಂದ ಪ್ರೇರಿತವಾದ ಶಾಲಾ ಮುಖ್ಯ ಶಿಕ್ಷಕರು ಎಸ್.ಡಿ.ಯಂ.ಸಿ.ಯವರನ್ನು ಸೇರಿಸಿ ಶಾಲಾಭಿವೃದ್ಧಿಯಲ್ಲಿ ತೊಡಗಲು ಕಾರ್ಯಪ್ರವೃತರಾದರು.

ಈ ಶಾಲಾ ವ್ಯಾಪ್ತಿಯಲ್ಲಿ ಅತ್ಯಧಿಕ ಮುಸ್ಲಿಂ ಸಮುದಾಯದ ಜನರೇ ವಾಸಿಸುತ್ತಿದ್ದು ಇಲ್ಲಿ ಗೊತ್ತಾಗದಂತೆ ಬಾಲ್ಯವಿವಾಹಗಳು, ಮಕ್ಕಳು ಬಾಲಕಾರ್ಮಿಕತೆ ಪ್ರಕರಣಗಳು ನಡೆಯುತ್ತಿತ್ತು ಆದರೆ ಈ ಬಗ್ಗೆ ಯಾರು ಧ್ವನಿ ಎತ್ತುತ್ತಿರಲಿಲ್ಲ. ಈ ಬಗ್ಗೆ ಶಾಲೆಗಳ ಮಕ್ಕಳಿಂದ ಮಾಹಿತಿಯನ್ನು ತಿಳಿದುಕೊಂಡು ಎಲ್ಲಾ ಪೋಷಕರನ್ನು ಕರೆದು ಮಾಹಿತಿ ಕಾರ್ಯಕ್ರಮವನ್ನು ತಾಲೂಕು ಕಾನೂನು ಸೇವಾ ಪ್ರಾಧಿಕಾರಗಳ ಮುಖಾಂತರ ಹಮ್ಮಿಕೊಳ್ಳಲಾಯಿತು. ಇಲ್ಲಿ ಶಿಕ್ಷಣ ಸಂಪನ್ಮೂಲ ಕೇಂದ್ರದ ಸದಸ್ಯರು ಸಂಪನ್ಮೂಲ ವ್ಯಕ್ತಿಗಳಾಗಿ ಬಾಲ್ಯವಿವಾಹ ಬಾಲಕಾರ್ಮಿಕತೆ ಬಗ್ಗೆ ತಿಳಿಸಿದರು, ನಂತರ ಸ್ವತಃ ಮಕ್ಕಳೇ ನ್ಯಾಯಾಧೀಶರಲ್ಲಿ ತಮ್ಮ ವ್ಯಾಪ್ತಿಯ ಸಮಸ್ಯೆ ಬಗ್ಗೆ ತಿಳಿಸಿದರು. ಇದರಿಂದಾಗಿ ಎಚ್ಚೆತ್ತುಕೊಂಡ ವಿವಿಧ ಇಲಾಖೆಗಳು ಕಾರ್ಯಪ್ರವೃತರಾದರು, 2 ಪ್ರಕರಣಗಳನ್ನು ದಾಖಲಿಸಿ ಬಾಲ್ಯವಿವಾಹ ನಿಲ್ಲಿಸಿದರು, ಕಾರ್ಮಿಕರಾಗಿ ದುಡಿಯುತ್ತಿದ್ದ ಮಕ್ಕಳನ್ನು ಗುರುತಿಸಿ ವಿದ್ಯಾಭ್ಯಾಸ ಮುಂದುವರಿಸುವಂತೆ ಮಾಡಿದರು. ಎಸ್.ಡಿ.ಯಂ.ಸಿ.ಯವರು ಜವಾಬ್ದಾರಿ ವಹಿಸಿ ತಮ್ಮ ವ್ಯಾಪ್ತಿಯ ಸಮಸ್ಯೆಗಳ ಬಗ್ಗೆ ಕಾರ್ಯಪ್ರವೃತರಾದರು.

ಅಲ್ಲದೆ ಎಸ್.ಡಿ.ಯಂ.ಸಿ, ಶಿಕ್ಷಕರು, ಪೋಷಕರು ಸೇರಿಕೊಂಡು ಶಾಲಾ ಕ್ರಿಯಾ ಯೋಜನೆಗಳನ್ನು ರಚಿಸಿ ವಿವಿಧ ಇಲಾಖೆಗಳಿಗೆ, ಸ್ಥಳೀಯ ಸರಕಾರಗಳಿಗೆ, ದಾನಿಗಳಿಗೆ ನೀಡಿ ಅನುಸರಣಾ ಸೇವೆ ಕೈಗೊಂಡರು. ಫಲವಾಗಿ ಶಾಲೆಗೆ ಮಕ್ಕಳ ಸಂಖ್ಯೆಗನುಗುಣವಾಗಿ ದಾನಿಗಳಿಂದ ಶೌಚಾಲಯದ ರಚನೆಯಾಯಿತು. 8ನೇ ತರಗತಿ ಆರಂಭಿಸಲು ದಾನಿಗಳಿಂದ 2 ಕೊಠಡಿಗಳ ನಿರ್ಮಾಣವಾಯಿತು. ತಾಲೂಕು ಪಂಚಾಯತ್ ವತಿಯಿಂದ ರಂಗಮಂದಿರ ಮತ್ತು ದಾಸ್ತಾನು ಕೊಠಡಿ ನಿರ್ಮಾಣವಾಯಿತು. ಅಲ್ಲದೆ ಶಾಲೆಗಳಲ್ಲಿ ಪಠ್ಯೇತರ ಚಟುವಟಿಕೆಗಳಿಗೆ ಆದ್ಯತೆ ನೀಡಿ ಕರಾಟೆ ತರಬೇತಿ, ನೃತ್ಯ ತರಬೇತಿಗಳನ್ನು ಆರಂಭಿಸಲಾಗಿದೆ. ಮಕ್ಕಳ ಹಕ್ಕುಗಳ ಕ್ಲಬ್, ಮಕ್ಕಳ ಮಂತ್ರಿಮಂಡಲ, ಮಕ್ಕಳ ಸುರಕ್ಷಾ ಸಮಿತಿ, ಮಕ್ಕಳ ಸುರಕ್ಷಾ ನೀತಿಗಳನ್ನು ರಚಿಸಿ ಯಸ್.ಡಿ.ಯಂ.ಸಿ.ಯು ಮೇಲ್ವಿಚಾರಣೆ ಮಾಡುತ್ತಿದೆ. ಎಸ್.ಡಿ.ಯಂ.ಸಿ.ಯು ಪ್ರತಿ ತಿಂಗಳು 75% ಕ್ಕಿಂತ ಅಧಿಕ ಹಾಜರಾತಿಯೊಂದಿಗೆ ಸಭೆ ಸೇರಿ ನಿರ್ಣಯಗಳ

ಪಾಲನೆಮಾಡಿ ಕಾರ್ಯರೂಪಗೊಳಿಸುತ್ತಿದೆ. ಎಸ್.ಡಿ.ಯಂ.ಸಿ.ಯ ಈ ಎಲ್ಲಾ ಕಾರ್ಯಚಟುವಟಿಕೆಯ ಫಲವಾಗಿ ವರ್ಷದಿಂದ ವರ್ಷಕ್ಕೆ ಮಕ್ಕಳ ಸಂಖ್ಯೆ ಅಧಿಕಗೊಳ್ಳುತ್ತಿದೆ. ಆರಂಭದಲ್ಲಿ 150 ಇದ್ದ ಮಕ್ಕಳ ಸಂಖ್ಯೆ ಸದ್ರಿ 265ಕ್ಕೆ ಏರಿಕೆಯಾಗಿದೆ.

ಈ ಬಗ್ಗೆ ಎಸ್.ಡಿ.ಯಂ.ಸಿ ಅಧ್ಯಕ್ಷರಲ್ಲಿ ವಿಚಾರಿಸಿದಾಗ ಆರಂಭದಲ್ಲಿ ಶಾಲೆಯಲ್ಲಿ ನಾವು ನಿರ್ವಹಿಸಬೇಕಾದ ಕರ್ತವ್ಯ ಜವಾಬ್ದಾರಿಗಳ ಬಗ್ಗೆ ಯಾವುದೇ ಮಾಹಿತಿ ಇರಲಿಲ್ಲ, ಆದರೆ ಪಡಿ ಸಂಸ್ಥೆ ಮತ್ತು ಶಿಕ್ಷಣ ಸಂಪನ್ಮೂಲ ಕೇಂದ್ರಗಳು ನಿರಂತರ ಸಂಪರ್ಕಿಸಿ ವಿವಿಧ ತರಬೇತಿ, ಸಭೆಗಳಿಗೆ ಭೇಟಿ ನೀಡಿ ಪೂರಕ ಮಾಹಿತಿ, ಶಾಲೆಗೆ ಆಗಾಗ ಬೇಟಿ ನೀಡಿ ಸಮಸ್ಯೆ–ಸವಾಲುಗಳ ಬಗ್ಗೆ ಚರ್ಚಿಸಿ ಸಲಹೆಗಳನ್ನು ನೀಡಿದುದರ ಪರಿಣಾಮವಾಗಿ ನಮ್ಮ ಶಾಲೆ ಈ ಮಟ್ಟಕ್ಕೆ ಬೆಳೆಯಲು ಸಾದ್ಯವಾಯಿತು, ಅಲ್ಲದೆ ಶಿಕ್ಷಕ ವೃಂದವೂ ನಮ್ಮ ಜೊತೆ ಉತ್ತಮ ಭಾಂಧವ್ಯ ಹೊಂದಿ ಶಾಲಾಭಿವೃಧಿಯಲ್ಲಿ ತೊಡಗಿಸಿಕೊಳ್ಳಲು ಸಾಧ್ಯವಾಯಿತು ಎನ್ನುತ್ತಾರೆ.

ಶಾಲಾ ನಾಯಕಿ ಸಫನಾ ಮಾತನಾಡಿ ಎಸ್.ಡಿ.ಯಂ.ಸಿ ಮತ್ತು ಶಿಕ್ಷಕರು ತುಂಬ ಉತ್ತಮ ರೀತಿಯಲ್ಲಿ ನಮ್ಮ ಜೊತೆ ಸ್ಪಂಧಿಸಿ ಶಾಲಾ ಸಮಸ್ಯೆಗಳಿಗೆ ಆದ್ಯತೆ ನೀಡಿ ಪರಿಹಾರ ನೀಡಿ ನಮ್ಮ ಕಲಿಕೆಗೆ ಪೂರಕವಾದ ಮಗುಸ್ನೇಹಿ ವಾತಾವರಣ ನಿರ್ಮಿಸಿರುತ್ತಾರೆ. ಪಡಿ ಸಂಸ್ಥೆಯವರು ಆಗಾಗ ಬೇಟಿ ನೀಡಿ ನಮಗೆ ವಿವಿಧ ಮಾಹಿತಿಗಳನ್ನು ನೀಡಿರುತ್ತಾರೆ. ಇದರಿಂದಾಗಿ ನಮ್ಮ ಹಕ್ಕುಗಳನ್ನು ಅನುಭವಿಸಿ ಕಲಿಯಲು ಅವಕಾಶ ಸಿಕ್ಕಿದೆ ಎನ್ನುತ್ತಾರೆ. ಪಡಿಸಂಸ್ಥೆಯು ಈ ಶಾಲೆಯ ಸಮಸ್ಯೆಯನ್ನು ಆರಂಭದಲ್ಲಿ ತಿಳಿದುಕೊಂಡು ಶಿಕ್ಷಕ ಮತ್ತು ಎಸ್.ಡಿ.ಯಂ.ಸಿ ನಡುವೆ ಉತ್ತಮ ಭಾಂಧವ್ಯ ಬೆಳೆಸುವಲ್ಲಿ ಜಯಸಾಧಿಸಿದ್ದು ಮುಂದೆ ವಿವಿಧ ಚಟುವಟಿಕೆಗಳಲ್ಲಿ ಅವರನ್ನು ತೊಡಗಿಸಿಕೊಂಡು ಶಾಲಾಭಿವೃದ್ಧಿಗೊಳಿಸುವಲ್ಲಿ ಸಫಲವಾಯಿತು.

*****

## ಮಗುಸ್ನೇಹಿಯಾಗಿ ಪರಿವರ್ತನೆಗೊಂಡ ನಮ್ಮ ಗ್ರಾಮ ಪಂಚಾಯತ್

ಸುಳ್ಯ ತಾಲೂಕು ಕೇಂದ್ರದಿಂದ ಸುಮಾರು 10 ಕಿಲೋ. ಮೀಟರ್ ದೂರದ ಕೊಡಗು ಹಾಗೂ ಕಾಸರಗೋಡು ಜಿಲ್ಲೆ ಗಡಿನಾಡಿನಲ್ಲಿರುವ ನಮ್ಮೂರ ಪಂಚಾಯತ್ ಆಲೆಟ್ಟಿ ಈ ಪಂಚಾಯತ್‌ನಲ್ಲಿ 21 ಜನ ಸದಸ್ಯರು ಇರುವರು.

ಇಲ್ಲಿ ಪರಿಶಿಷ್ಟ ಪಂಗಡ ಮತ್ತು ಹಿಂದುಳಿದ ವರ್ಗಕ್ಕೆ ಸೇರಿದ ಜನ ಹೆಚ್ಚಾಗಿದ್ದು ಹೆಚ್ಚಿನ ಕುಟುಂಬ ಕೂಲಿ ಮಾಡಿಯೇ ಜೀವನ ಸಾಗಿಸುತ್ತಾರೆ. ಈ ಪಂಚಾಯತ್

ವ್ಯಾಪ್ತಿಯಲ್ಲಿ 2 ಕಿರಿಯ ಪ್ರಾಥಮಿಕ ಶಾಲೆ, 3 ಹಿರಿಯ ಪ್ರಾಥಮಿಕ ಶಾಲೆ ಹಾಗೂ 1 ಆಶ್ರಮ ಶಾಲೆ ಮತ್ತು ಒಂದು ಪ್ರೌಢಶಾಲೆ ಇರುವುದು ಅಲ್ಲದೆ ಒಂದು ಖಾಸಗಿ ಕಾಲೇಜು ಇರುವುದು.

ಇಲ್ಲಿಯ ಸರಕಾರಿ ಶಾಲೆಗಳು ಹಳ್ಳಿ ಮೂಲೆ ಮೂಲೆಗಳಿಂದ ಬರುತ್ತಿದ್ದ ಮಕ್ಕಳು ಮೂಲಭೂತ ಸೌಕರ್ಯಗಳು ಸಾಧಾರಣವಾಗಿದ್ದವು. ಅದರ ಜೊತೆಯಲ್ಲಿ ಕುಂದುಕೊರತೆ ನಿವಾರಣೆ ವ್ಯವಸ್ಥೆ ಎಂದರೇನು ಎಂಬುದು ನಮಗೆ ತಿಳಿದಿರಲಿಲ್ಲ. ಎಸ್.ಡಿ.ಎಂ.ಸಿ. ಸಭೆಯಲ್ಲಿ ಹೆಚ್ಚಾಗಿ ಭಾಗವಹಿಸುತ್ತಿರಲಿಲ್ಲ.

ಈ ಸಮಯದಲ್ಲಿ 'ಪಡಿ' ಸಂಸ್ಥೆ ಮಗುಸ್ನೇಹಿ ಪಂಚಾಯತ್ ಆಗಬೇಕು ಎನ್ನುವ ನಿಟ್ಟಿನಿಂದ ಆಲೆಟ್ಟಿ ಕ್ಲಸ್ಟರ್‌ನ್ನು ಆಯ್ಕೆ ಮಾಡಿಕೊಂಡಿತು.

ಪಂಚಾಯತ್ ಭೇಟಿ ಶಾಲೆ ಭೇಟಿ ಮಾಡಿ Baselineನ್ನು ಮಾಡುವುದರಿಂದ ಕೆಲಸವನ್ನು ಆರಂಭಿಸಿದರು.

ಹೀಗೆ ಮುಂದಿನ ದಿನಗಳಲ್ಲಿ 'ಪಡಿ ಸಂಸ್ಥೆ'ಯ ಶಿಕ್ಷಣ ಸಂಪನ್ಮೂಲ ಕೇಂದ್ರದ ಸಹಕಾರದೊಂದಿಗೆ ಶಾಲಾಭಿವೃದ್ಧಿಯಲ್ಲಿ ಪಂಚಾಯತ್ ಪಾತ್ರ ಎಸ್.ಡಿ.ಎಂ.ಸಿ. ಸಭೆಗಳಲ್ಲಿ ಪಂಚಾಯತ್ ಸದಸ್ಯರ ಭಾಗವಹಿಸುವಿಕೆ ಮಕ್ಕಳ ರಕ್ಷಣೆ, ಪೋಷಣೆ, ಶಾಲೆಯಿಂದ ಹೊರಗುಳಿದ ಮಕ್ಕಳ ಬಗ್ಗೆ ಪಂಚಾಯತ್ ಜವಾಬ್ದಾರಿ ಪಂಚಾಯತ್‌ಲ್ಲಿ 0.18 ವರ್ಷದ ಒಳಗಿನ ಮಕ್ಕಳ ಅಂಕಿ–ಅಂಶಗಳ ಪಟ್ಟಿ, ಸುರಕ್ಷ ಸಮಿತಿ ರಚನೆ, ಶಾಲಾ ಕುಂದು ಕೊರತೆ ನಿವಾರಣೆ ವ್ಯವಸ್ಥೆಯಲ್ಲಿ ಪಂಚಾಯತ್ ಕರ್ತವ್ಯ, ಮಕ್ಕಳ ಹಕ್ಕುಗಳ ವಿಶೇಷ ಗ್ರಾಮ ಸಭೆ ಬಗ್ಗೆ ಮಾರ್ಗದರ್ಶನ ಮತ್ತು ತರಬೇತಿಗಳನ್ನು ನೀಡುತ್ತಾ ಬಂದರು. ಇದೆಲ್ಲವನ್ನು ಅರಿತುಕೊಂಡ ಪಂಚಾಯತ್ ಸದಸ್ಯರು ಶಾಲೆ ಕಡೆಗೆ ಮೊದಲಿಗಿಂತ ಇನ್ನೂ ಹೆಚ್ಚಾಗಿ ಕಾಳಜಿಯಿಂದ ನೋಡುವಂತಾಗಬೇಕು. ಪಂಚಾಯತ್ ವ್ಯಾಪ್ತಿಗೆ ಬರುವ ಸರಕಾರಿ ಶಾಲೆಗಳಿಗೆ ಭೇಟಿ ನೀಡಿ ಶಾಲಾ ಮೂಲಭೂತ ಸೌಕರ್ಯ ಬಗ್ಗೆ ಇನ್ನೂ ಹೆಚ್ಚಿನ ಜವಾಬ್ದಾರಿ ವಹಿಸಿಕೊಂಡು ಶಾಲೆಯಲ್ಲಿ ನಡೆಯುವ ಎಸ್.ಡಿ.ಎಂ.ಸಿ. ಮಾಸಿಕ ಸಭೆಗಳಲ್ಲಿ ತಪ್ಪದೇ ಭಾಗವಹಿಸಿ ಶಾಲಾ ಅಭಿವೃದ್ಧಿ ಬಗ್ಗೆ ಚರ್ಚಿಸುವಂತಾಯಿತು.

ಎಸ್.ಡಿ.ಎಂ.ಸಿ ಸದಸ್ಯರು ತಯಾರು ಮಾಡುವ ಶಾಲಾಭಿವೃದ್ಧಿ ಯೋಜನೆಯಲ್ಲಿ ಭಾಗವಹಿಸಿ ಚರ್ಚಿಸಲಾಯಿತು. ಪಂಚಾಯತ್ ಪ್ರತಿಗಳನ್ನು ಕೊಡುವಂತೆ ತಿಳಿಸಿ

ಅದರ ಪ್ರಕಾರ ಶಾಲೆಗಳ ಮಕ್ಕಳ ಸುರಕ್ಷತೆ ದೃಷ್ಟಿಯಿಂದ ಆವರಣ ಗೋಡೆ, ಶಾಲಾ ಮುಖ್ಯ ದ್ವಾರ, ಮಕ್ಕಳಿಗೆ ನೀರಿನ ವ್ಯವಸ್ಥೆ, ಸ್ವಚ್ಚ ಶೌಚಾಲಯ, ಆಟದ ಮೈದಾನ, ಶಾಲಾ ಕಟ್ಟಡ ದುರಸ್ತಿಯಲ್ಲಿ ಸಹಕಾರ, ನೀರು ಶೇಖರಣೆ ದೃಷ್ಟಿಯಿಂದ ಮಳೆಕೊಯಿಲು ಶಾಲೆಗಳಲ್ಲಿ ತರಕಾರಿ ತೋಟ, ಅಡಿಕೆ ತೋಟ ಹಾಗೂ ಜಿಲ್ಲಾ ಪಂಚಾಯತ್‌ಗಳಿಗೆ ಮನವಿ ಸಲ್ಲಿಸಿ ಶಾಲೆಗಳಿಗೆ ರಂಗಮಂದಿರ ಇನ್ನೂ ಹಲವಾರು ಅಭಿವೃದ್ಧಿಗಳನ್ನು ಮಾಡುವುದರೊಂದಿಗೆ ಪಂಚಾಯತ್ ಮಕ್ಕಳ ರಕ್ಷಣಾ ಸಮಿತಿಯನ್ನು ರಚಿಸಿ ಪಂಚಾಯತ್ ವ್ಯಾಪ್ತಿಗೆ ಬರುವ 0–18 ವರ್ಷದೊಳಗಿನ ಎಲ್ಲಾ ಮಕ್ಕಳ ರಕ್ಷಣೆ–ಪೋಷಣೆ ಬಗ್ಗೆ ಗಮನ ಹರಿಸುವುದು. ಶಾಲೆಯಿಂದ ಹೊರಗುಳಿದ ಮಕ್ಕಳನ್ನು ಮರಳಿ ಶಾಲೆಗೆ ಸೇರಿಸುವಂತೆ ಮಾಡುವುದು. ಪಂಚಾಯತ್ ಗೋಡೆಗಳಲ್ಲಿ ಮಕ್ಕಳ ರಕ್ಷಣೆಗೆ ಸಂಬಂಧಪಟ್ಟಂತ ವರ್ಣಚಿತ್ರಗಳನ್ನು ಸಮುದಾಯ ಗಮನಿಸುವ ರೀತಿಯಲ್ಲಿ ಬರೆಯಲಾಯಿತು.

ಮೊದಲು ಮಕ್ಕಳ ಗ್ರಾಮ ಸಭೆ ಎಂದು ಒಟ್ಟಾರೆಯಾಗಿ ನಡೆಯುತ್ತಿತ್ತು. ಈಗ ಅದನ್ನು ಮಕ್ಕಳ ಹಕ್ಕುಗಳ ವಿಶೇಷ ಗ್ರಾಮ ಸಭೆಯಾಗಿ ಬದಲಾಯಿಸಿ ಎಲ್ಲಾ ಇಲಾಖಾ ಅಧಿಕಾರಿಗಳು ಭಾಗವಹಿಸಿ ಮಕ್ಕಳ ಧ್ವನಿಗೆ ಎಲ್ಲರೂ ಧ್ವನಿಗೂಡಿಸಿ ಕೆಲಸಗಳನ್ನು ಮಾಡುವಂತಾಯಿತು.

ಈಗ ನಮ್ಮೂರು ಅಭಿವೃದ್ಧಿ ಹೊಂದಿರುವುದರೊಂದಿಗೆ ಬೇರೆ ವಿಷಯದಲ್ಲಿ ಪ್ರಶಸ್ತಿಗಳನ್ನು ಪಡೆದುಕೊಂಡು ನಮ್ಮೂರ ಶಾಲೆ ಎಂದು ಹೆಮ್ಮೆ ಪಡುವಂತಾಗಿದೆ.

ಈ ಎಲ್ಲಾ ಅಭಿವೃದ್ಧಿಗೆ ಮಾರ್ಗದರ್ಶನ ತರಬೇತಿಗಳನ್ನು ನೀಡಿ ನಮ್ಮನ್ನು ಎಚ್ಚೆತ್ತುಕೊಳ್ಳುವಂತೆ ಮಾಡಿದ 'ಪಡಿ' ಸಂಸ್ಥೆ ತುಂಬು ಹೃದಯದ ನಮನಗಳು ಅರ್ಪಿಸುತ್ತಾ ಮುಂದಿನ ದಿನಗಳಲ್ಲೂ ನಮಗೆ ಇಂತಹ ಉತ್ತಮ ರೀತಿಯ ತರಬೇತಿ ಸಹಕಾರ ನೀಡುವಂತಾಗಲಿ.

*****